ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 17 ಬುಧವಾರ 2022

ಸಂಪುಟ: 43 | ಸಂಚಿಕೆ: 122 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಕೆಬಿಜಿಯವರ
ಛೂಮಂತ್ರ... ಛೂಮಂತ್ರ...



ನಾನು, ನನ್ನ ದೇಶ, ನನ್ನ ಕಾಯಕ...

ರಂಗಾಯಣದಲ್ಲಿ ನೋಡಿದ ಒಂದು ವಿಶೇಷ ನಾಟಕ ■ ಪುಟ–4

ಮೈಸೂರಲ್ಲಿ 75ನೇ ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವ ಸಂಭ್ರಮ ■ ಪುಟ–5



ದಸರಾ ಗಜಪಡೆಗೆ ನಿತ್ಯವೂ ರಸಗವಳ!

●ಪ್ರತಿದಿನ ಮುಂಜಾನೆ, ಸಂಜೆ ಆನೆಗಳಿಗೆ ಪೌಷ್ಟಿಕ ಆಹಾರ ●ಜಂಬೂ ಸವಾರಿಗೆ ಈಗಿನಿಂದಲೇ ತಯಾರಿ



ಅರಮನೆ ಆವರಣದಲ್ಲಿ ದಸರಾ ಗಜಪಡೆಗೆ ಪೌಷ್ಟಿಕ ಆಹಾರ ತಯಾರಿಸುತ್ತಿರುವುದನ್ನು ಡಿಸಿಎಫ್ ಡಾ.ವಿ.ಕರಿಕಾಳನ್ ಪರಿಶೀಲಿಸುತ್ತಿರುವುದು.

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ಆ.16–ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಆಗಮಿಸಿರುವ ಅಂಬಾರಿ ಆನೆ ಅಭಿಮನ್ಯು ನೇತೃತ್ವದ ಗಜಪಡೆಗೆ 'ಬಲ' ನೀಡಲು ಅರಣ್ಯ ಇಲಾಖೆ ಪೌಷ್ಟಿಕ ಆಹಾರ ನೀಡಲು ಆರಂಭಿಸಿದೆ.

ಎರಡು ವರ್ಷಗಳ ಬಳಿಕ ಜಂಬೂಸವಾರಿ ಮೆರವಣಿಗೆ ಈ ಬಾರಿ ಸಂಪ್ರದಾಯದಂತೆ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದವರೆಗೆ ನಡೆಸಲು ಉದ್ದೇಶಿಸಲಾಗಿದ್ದು, ವೈಭವದ ದಸರಾ ಮಹೋತ್ಸವ ಆಚರಣೆಗೆ ಕ್ರಮ ಕೈಗೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಗಜಪಡೆಯನ್ನು ಸನ್ನದ್ಧುಗೊಳಿಸುವ ಜವಾಬ್ದಾರಿಯನ್ನು ಅರಣ್ಯ ಇಲಾಖೆ ಹೊತ್ತಿದ್ದು, ಅದಕ್ಕಾಗಿ ಈಗಿನಿಂದಲೇ ಆನೆಗಳ ಶಕ್ತಿವರ್ಧನೆಗೆ ಪೌಷ್ಟಿಕ ಆಹಾರ ನೀಡುವ ಪ್ರಕ್ರಿಯೆ ಆರಂಭಿಸಲಾಗಿದೆ.

ಏನೇನು: ದಸರೆಗೆ ಆನೆಗಳಿಗೆ ಹಸಿರು ಕಾಳು, ಉದ್ದಿನ ಕಾಳು, ಕುಸುಬಲು ಅಕ್ಕಿ, ಗೋಧಿ ಬೇಯಿಸಿ, ರುಚಿಗೆ ತಕ್ಕಷ್ಟು ಉಪ್ಪು ಹಾಕಿ, ▶ 8ನೇ ಪುಟಕ್ಕೆ



ಅರಮನೆ ಆವರಣದಲ್ಲಿ ಮಜ್ಜನದಲ್ಲಿ ಮೈಮರೆತ ದಸರಾ ಗಜಪಡೆಯ ಸದಸ್ಯ ಧನಂಜಯ

ಅಕ್ರಮ ಗಣಿಗಾರಿಕೆಗೆ ಮುಗಿ ಬೀಳುತ್ತಿದ್ದವರು

ಸಕ್ರಮ ಗಣಿಗಾರಿಕೆಗೆ ಮುಂದೆ ಬರುತ್ತಿಲ್ಲ!

●ಗಣಿಗಾರಿಕೆ ಗುತ್ತಿಗೆ ಹರಾಜಿನಲ್ಲಿ ಬೆರಳೆಣಿಕೆಯಷ್ಟು ಮಂದಿ ಭಾಗಿ
●28ರಲ್ಲಿ 12 ಯಶಸ್ವಿ ಬಿಡ್; ಇನ್ನು 16 ಕೇಳುವವರೇ ಇಲ್ಲ

ಬೆಂಗಳೂರು, ಆ.16(ಕೆಎಂಶಿ)– ಅದಿರು ಗಣಿಕಾರಿಕೆ ಗುತ್ತಿಗೆ ಪಡೆಯಲು ಉದ್ದಿಮೆದಾರರು ಮುಂದೆ ಬರುತ್ತಿಲ್ಲ. ದಶಕದ ಹಿಂದೆ ರಾಜ್ಯ ಸರ್ಕಾರವನ್ನೇ ತಮ್ಮ ದಾಳವಾಗಿ ಮಾಡಿಕೊಂಡಿದ್ದ ಧಣಿಗಳಿಗೆ ಈಗ ಅದಿರು ಬೇಡವಂತೆ.

ಅಕ್ರಮ ಗಣಿಗಾರಿಕೆ ಮಾಡಿ ವಿದೇಶಗಳಿಗೆ ಕಳ್ಳದಾರಿಯಲ್ಲಿ ಅದಿರು ರವಾನೆ ಮಾಡಿ ಸಾವಿರಾರು ಕೋಟಿ ರೂ. ಲೂಟಿ ಮಾಡಿದವರು ಈಗ ಸಕ್ರಮವಾಗಿ ಗಣಿಗಾರಿಕೆ ನಡೆಸಲು ಮುಂದೆ ಬರುತ್ತಿಲ್ಲ. ಸುಪ್ರೀಂಕೋರ್ಟ್ ಆದೇಶದಂತೆ ರಾಜ್ಯದಲ್ಲಿ ಸಿ ದರ್ಜೆಯ ಅದಿರು ಗಣಿಗಾರಿಕೆ ಮಾಡಿ ರಫ್ತಿಗೆ ಅವಕಾಶ ಮಾಡಿಕೊಟ್ಟಿದೆ. ನ್ಯಾಯಾಲಯದ ಆದೇಶದಂತೆ ಕೇಂದ್ರ ಸರ್ಕಾರ ಗಣಿ ಗುತ್ತಿಗೆ ಜಾಗ ನಿಗದಿಪಡಿಸಿ ಪ್ರತಿ ಟನ್‌ಗೆ ಇಷ್ಟೆಂದು ದರ ನಿಗದಿಪಡಿಸಿದೆ. ಕೇಂದ್ರದ ಆದೇಶದಂತೆ ರಾಜ್ಯ ಸರ್ಕಾರ 28 ಗಣಿಗಳನ್ನು ಗುರುತಿಸಿ ಹರಾಜು ಮಾಡಿತ್ತು. ಹರಾಜಿನಲ್ಲಿ ಬೆರಳೆಣಿಕೆಯಷ್ಟು ಮಂದಿ ಮಾತ್ರ ಪಾಲ್ಗೊಂಡು ಕೇವಲ 12 ಗಣಿಗಳನ್ನು



ಮಾತ್ರ ಗುತ್ತಿಗೆಗೆ ಪಡೆದಿದ್ದಾರೆ. ಇನ್ನೂ 16 ಗಣಿಗಳನ್ನು ಕೇಳುವವರೇ ಇಲ್ಲ. ಸರ್ಕಾರ ತನ್ನ ಸಂಪನ್ಮೂಲ ಕ್ರೋಢಿಸಿಕೊಳ್ಳಲು ಮತ್ತೆ 16 ಗಣಿಗಳನ್ನು ಗುತ್ತಿಗೆ ನೀಡಲು ಟೆಂಡರ್ ಕರೆಯಲು ಮುಂದಾಗಿದೆ. ಗಣಿಗಳ ಸ್ಥಿತಿಗತಿಯ ಬಗ್ಗೆ ಆ ಇಲಾಖೆಯ ಉಸ್ತುವಾರಿ ವಹಿಸಿಕೊಂಡಿರುವ ಹಾಲಪ್ಪ ಆಚಾರ್ ಅವರೇ ಇಂದಿಲ್ಲಿ ಸುದ್ದಿಗಾರರ ಮುಂದೆ ಈ ವಿಷಯ ಬಹಿರಂಗಪಡಿಸಿದರು.

ಇಲಾಖೆಯಲ್ಲಿ ಬಿಗಿ ಕ್ರಮ ಕೈಗೊಂಡಿದ್ದು, ಕೇಂದ್ರದ ಮಾರ್ಗಸೂಚಿಯಡಿಯಲ್ಲಿ ಗಣಿಗಾರಿಕೆಗೆ ಅವಕಾಶ ನೀಡುತ್ತಿದ್ದೇವೆ. ಕಳೆದೆರಡು ವರ್ಷಗಳಲ್ಲಿ ಇಲಾಖೆಗೆ ನಿಗದಿಪಡಿಸಿದ ಆದಾಯಕ್ಕಿಂತ 145ರಷ್ಟು ಹೆಚ್ಚು ಸಂಗ್ರಹವಾಗಿದೆ ಎಂದರು.

ಹೆಚ್ಚಿನ ಎಂ ಸ್ಯಾಂಡ್ ಉತ್ಪಾದನೆ: ಮರಳಿನ ಕೊರತೆಯನ್ನು ನೀಗಿಸಲು ರಾಜ್ಯಾದ್ಯಂತ ಹೆಚ್ಚಿನ ಪ್ರಮಾಣದಲ್ಲಿ ಎಂ ಸ್ಯಾಂಡ್ ಉತ್ಪಾದಿಸಲು ಸರ್ಕಾರ ಬಯಸಿದೆ. ಇದಕ್ಕಾಗಿ ಮರಳು ನೀತಿಗೆ ತಿದ್ದುಪಡಿ ತಂದು ಹೆಚ್ಚು ಪ್ರಮಾಣದಲ್ಲಿ ಎಂ ಸ್ಯಾಂಡ್ ಉತ್ಪಾದಿಸಲು ಉತ್ತೇಜನ ನೀಡಲಾಗುವುದು ಎಂದು ಹೇಳಿದರು.

ರಾಜ್ಯದಲ್ಲಿ ಪ್ರತಿ ವರ್ಷ ನಲವತ್ತೈದು ದಶಲಕ್ಷ ಟನ್ ಮರಳಿಗೆ ಬೇಡಿಕೆ ಇದ್ದು, ಇದರಲ್ಲಿ ಮೂವತ್ತೈದು ದಶಲಕ್ಷ ಟನ್‌ನಷ್ಟು ಬೇಡಿಕೆ ಎಂ ಸ್ಯಾಂಡ್‌ನಿಂದ ಪೂರೈಕೆಯಾಗುತ್ತಿದೆ. ಆದರೆ ಲಭ್ಯವಿರುವ ಮರಳಿನ ಪ್ರಮಾಣ ಐದು ದಶಲಕ್ಷ ಟನ್ ಗಳಷ್ಟಿದ್ದು, ಇನ್ನೂ ಐದು ದಶಲಕ್ಷ ಟನ್‌ಗಳಷ್ಟು ಮರಳಿನ ಕೊರತೆ ಇದೆ. ಈಗ ಲಭ್ಯವಾಗುತ್ತಿರುವ ಐದು ದಶಲಕ್ಷ ಟನ್ ಮರಳನ್ನು ಹಂಚಿಕೆ ಮಾಡಲು ▶ 8ನೇ ಪುಟಕ್ಕೆ

ಮುಡಾ ಅವ್ಯವಹಾರಗಳ ತನಿಖೆಗೆ ತಾಂತ್ರಿಕ ಸಮಿತಿ

ಮೈಸೂರು,ಆ.16(ಆರ್‌ಕೆ)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ನಡೆದಿದೆ ಎನ್ನಲಾದ ಭಾರೀ ಅವ್ಯವಹಾರ, ಅನುದಾನ ದುರ್ಬಳಕೆ ಸೇರಿದಂತೆ ಹಲವು ಆರೋಪಗಳ ಹಿನ್ನೆಲೆಯಲ್ಲಿ ತನಿಖೆ ನಡೆಸಲು ಸರ್ಕಾರ ತಾಂತ್ರಿಕ ಸಮಿತಿ ರಚಿಸಿದೆ.

ತಾಂತ್ರಿಕ ಸಮಿತಿ ಅಧ್ಯಕ್ಷರಾಗಿರುವ ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕ ಟಿ.ವಿ.ಮುರಳಿ, ಆಗಸ್ಟ್ 11ರಂದು ಮುಡಾ ಆಯುಕ್ತರಿಗೆ ಪತ್ರ ಬರೆದಿದ್ದು, ಪ್ರಾಧಿಕಾರದಲ್ಲಿ ಅನುದಾನ ದುರ್ಬಳಕೆ, ಬದಲಿ ನಿವೇಶನಗಳ ಹಂಚಿಕೆ, ಭೂ ಸ್ವಾಧೀನ ಪರಿಹಾರ ಪ್ರಾಧಿಕಾರದ ಸಭೆಯಲ್ಲಿ ಕಾಯ್ದೆ, ನಿಯಮ, ವಲಯ ನಿಯಮಗಳಿಗೆ ವಿರುದ್ಧವಾಗಿ ವಿಷಯಗಳನ್ನು ಮಂಡಿಸಿ ನಿರ್ಣಯ ಕೈಗೊಂಡಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಿವೆ ಎಂದು ತಿಳಿಸಿದ್ದಾರೆ. ಮುಡಾ ಅಧ್ಯಕ್ಷರ ವಿರುದ್ಧ ಆಯುಕ್ತರು ಹಾಗೂ ಆಯುಕ್ತರ ವಿರುದ್ಧ ಅಧ್ಯಕ್ಷರೂ ಪರಸ್ಪರ ಆರೋಪಿಸಿ ದೂರುಗಳನ್ನು ಸಲ್ಲಿಸಿದ್ದಾರೆ. ಈ ಎಲ್ಲಾ ದೂರುಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ತಾಂತ್ರಿಕ ಸಮಿತಿ ರಚಿಸಿದ್ದು, ಆ ಕುರಿತು ತನಿಖೆ ಕೈಗೊಂಡು

ಇಂದು ಪ್ರಾಧಿಕಾರದ ಕಚೇರಿಯಲ್ಲಿ ವಿಚಾರಣೆ



ಸ್ಪಷ್ಟ ಅಭಿಪ್ರಾಯದೊಂದಿಗೆ 15 ದಿನದೊಳಗಾಗಿ ವರದಿ ಸಲ್ಲಿಸುವಂತೆ ಸರ್ಕಾರ ಆದೇಶಿಸಿದೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ. ಸದರಿ ದೂರುಗಳ ಸಂಬಂಧದ ಎಲ್ಲಾ ಕಡತಗಳನ್ನು ಸಿದ್ಧಪಡಿಸಿಕೊಂಡು ಆಗಸ್ಟ್ 17ರಂದು ಪ್ರಾಧಿಕಾರಕ್ಕೆ ಭೇಟಿ ನೀಡುವ ತಾಂತ್ರಿಕ ಸಮಿತಿ ಮುಂದೆ ಹಾಜರುಪಡಿಸುವಂತೆ ಸೂಚಿಸಲಾಗಿದ್ದು, ಆ ವೇಳೆ ಸಂಬಂಧಪಟ್ಟ ಅಧಿಕಾರಿಗಳನ್ನು ನಿಯೋಜಿಸಿ ದೂರಿನ ಸಂಬಂಧ ಕೋರಲಾದ ಕಡತಗಳು ಹಾಗೂ ಮಾಹಿತಿ ಒದಗಿಸಿ ತನಿಖೆಗೆ ಸಹಕರಿಸುವಂತೆಯೂ ಮುರಳಿ, ಮುಡಾ ಆಯುಕ್ತರಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

Promotional Feature



ಮೈಸೂರು ನಜರ್‌ಬಾದ್‌ನ ಮಲೆ ಮಹದೇಶ್ವರ ರಸ್ತೆಯಲ್ಲಿ ಮಧೂಸ್ ಟೈರ್ಸ್ ಹೌಸ್ ನೂತನ ಮಳಿಗೆ ಉದ್ಘಾಟನಾ ಸಮಾರಂಭದಲ್ಲಿ ಮಳಿಗೆ ಮಾಲೀಕರಾದ ಮಧು, ಹೆಸರಾಂತ ಉದ್ಯಮಿ ಹಾಗೂ ಬಿಜೆಪಿ ಹಿರಿಯ ಮುಖಂಡ ಯಶಸ್ವಿನಿ ಸೋಮಶೇಖರ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್, ಬಿಜೆಪಿ ಮುಖಂಡ ರಮೇಶ್, ಶರಾವತಿ ವೆಂಕಟೇಶ್, ಮೈ ಟಾರ್ಪಾಲಿನ್ಸ್ ಮಾಲೀಕರಾದ ಪ್ರದೀಪ್‌ಸಿಂಗ್ ಇನ್ನಿತರರು ಉಪಸ್ಥಿತರಿದ್ದಾರೆ.

ಇರ್ವಿನ್ ರಸ್ತೆ ಅಗಲೀಕರಣಕ್ಕೆ ಅಡ್ಡಿಯಾಗಿದ್ದ ಮತ್ತೊಂದು ನಿರ್ಮಾಣ ತೆರವು

●ಶಾಸಕ ನಾಗೇಂದ್ರ, ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತರೆಡ್ಡಿ ಸ್ಥಳ ಪರಿಶೀಲನೆ, ಕಾಮಗಾರಿ ಆರಂಭ ●ಇನ್ನೊಂದು ಕಟ್ಟಡ ತೆರವುಗೊಳಿಸುವುದಷ್ಟೇ ಬಾಕಿ; ಸದ್ಯದಲ್ಲೇ ಅದನ್ನು ತೆರವುಗೊಳಿಸುವುದಾಗಿ ಶಾಸಕರ ವಿಶ್ವಾಸ



ಮೈಸೂರು, ಆ. 16(ಆರ್‌ಕೆ)– ಮೈಸೂರಿನ ಹೃದಯ ಭಾಗದ ಇರ್ವಿನ್ ರಸ್ತೆ ಅಗಲೀಕರಣ ಕಾಮಗಾರಿ ಪೂರ್ಣಗೊಳಿಸಲು ಅಡ್ಡಿಯಾಗಿದ್ದ ಧಾರ್ಮಿಕ ಕೇಂದ್ರದ ಕಟ್ಟಡದ ಕೆಲ ಭಾಗವನ್ನು ತೆರವುಗೊಳಿಸಲಾಗಿದೆ.

ಗುರುತಿಸಲಾದ ನಿರ್ಮಾಣದ ಭಾಗವನ್ನು ವಕ್ಫ್ ಬೋರ್ಡ್‌ನಿಂದಲೇ ಸ್ವಯಂ ಪ್ರೇರಿತವಾಗಿ ತೆರವುಗೊಳಿಸಿ ಸಹಕಾರ ನೀಡಿದ್ದು, ಉಳಿದ ಕಾಂಪೌಂಡ್ ಗೋಡೆಯನ್ನು ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳು ಭಾನುವಾರ ರಾತ್ರಿ ಜೆಸಿಬಿ ಮೂಲಕ ತೆರವುಗೊಳಿಸಿದರು.

ಈ ಹಿನ್ನೆಲೆಯಲ್ಲಿ ಇಂದು ಶಾಸಕ ಎಲ್. ನಾಗೇಂದ್ರ, ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತರೆಡ್ಡಿ, ಕಾರ್ಪೊರೇಟರ್‌ಗಳಾದ ಎಂ.ಡಿ.ನಾಗರಾಜ್, ಸತೀಶ್, ಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಮಹೇಶ್, ಜಗದೀಶ್, ಮುಖಂಡರಾದ ಅರವಿಂದ, ಬೋರ್ಡ್ ಪ್ರಮುಖರು ಇಂದು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ಸಂದರ್ಭ ಸುದ್ದಿಗಾರರಿಗೆ ಮಾಹಿತಿ ನೀಡಿದ ಶಾಸಕ ನಾಗೇಂದ್ರ, ಇರ್ವಿನ್ ರಸ್ತೆಯಲ್ಲಿ ವಾಹನ ದಟ್ಟಣೆ ಜಾಸ್ತಿ ಇರುವುದರಿಂದ ಅಗಲೀಕರಣಗೊಳಿಸುವ ಕಾಮಗಾರಿಯನ್ನು ಪಾಲಿಕೆಯಿಂದ ಕೈಗೆತ್ತಿಕೊಳ್ಳಲಾಗಿತ್ತು. ಇಕ್ಕೆಲಗಳಲ್ಲಿದ್ದ ಅಂಗಡಿ–ಮುಂಗಟ್ಟುಗಳ ▶ 8ನೇ ಪುಟಕ್ಕೆ

ರಾಷ್ಟ್ರಧ್ವಜ ಸಂಹಿತೆ ತಿದ್ದುಪಡಿ ಕೈಬಿಡಲು ಆಗ್ರಹ



ಮೈಸೂರು,ಆ.16(ಪಿಎಂ)– ರಾಷ್ಟ್ರಧ್ವಜ ಸಂಹಿತೆಗೆ ತಿದ್ದುಪಡಿ ತರುವ ಮೂಲಕ ಯಂತ್ರ ನಿರ್ಮಿತ ಮತ್ತು ಖಾದಿಯೇತರ ಬಟ್ಟೆಯಲ್ಲಿ ತಯಾರಿಸಿದ ಬಾವುಟಕ್ಕೂ ಅವಕಾಶ ಕಲ್ಪಿಸಿರುವುದನ್ನು ಕೈಬಿಡಬೇಕೆಂದು ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್‌ಕುಮಾರ್ ಒತ್ತಾಯಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ ಕೇಂದ್ರ ಸರ್ಕಾರ 'ಹರ್ ಘರ್ ತಿರಂಗ' ಘೋಷವಾಕ್ಯದಡಿ ಪ್ರತಿ ಮನೆ ಮೇಲೂ ರಾಷ್ಟ್ರಧ್ವಜ ಹಾರಿಸಲು ಕರೆ ನೀಡಿತ್ತು. ಅದರಂತೆ ಎಲ್ಲರೂ ಪಕ್ಷಾತೀತವಾಗಿ ರಾಷ್ಟ್ರಧ್ವಜ ಹಾರಿಸಿದ್ದಾರೆ. ಸುಮಾರು 30 ಕೋಟಿ ಧ್ವಜಗಳನ್ನು ಇಡೀ ರಾಷ್ಟ್ರದಲ್ಲಿ ಹಾರಿಸಲಾಗಿದೆ. ಅವುಗಳು ಬೀದಿಗೆ ಬಿದ್ದು ಕಾಲ ಕಸವಾಗದಂತೆ ಸೂಕ್ತ ರೀತಿಯಲ್ಲಿ ವಿಲೇವಾರಿಗೆ ಕ್ರಮ ವಹಿಸಬೇಕು ಎಂದು ಆಗ್ರಹಿಸಿದರು. ಅಲ್ಲದೆ, ಈ ಹಿಂದಿನಂತೆ ರಾಷ್ಟ್ರಧ್ವಜವನ್ನು ಕೈಮಗ್ಗ ಮತ್ತು ಖಾದಿ ಬಟ್ಟೆಯಲ್ಲಿ ಮಾತ್ರವೇ ತಯಾರಿಸಲು ಅವಕಾಶ ಕಲ್ಪಿಸಬೇಕು ಎಂದರಲ್ಲದೆ, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕೆ.ಆರ್. ಕ್ಷೇತ್ರದಿಂದ ಸ್ಪರ್ಧಿಸಲು ತಾವು ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಮುಖಂಡರಾದ ಮೈಸೂರು ಬಸವಣ್ಣ, ಎಂ.ರಾಜೇಶ್, ಸುನೀಲ್ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ 75ನೇ ಸ್ವಾತಂತ್ರ್ಯ ಸಂಭ್ರಮದ ಸುವರ್ಣ ಮಹೋತ್ಸವ ಹಾಗೂ ಸಂಗೊಳ್ಳಿ ರಾಯಣ್ಣ ಹುಟ್ಟುಹಬ್ಬದ ಪ್ರಯುಕ್ತ ಹೋಟೆಲ್ ಉದ್ಯಮಿ ಹಾಗೂ ಚಿತ್ರ ನಿರ್ಮಾಪಕರೂ ಆದ ಸಂದೇಶ್ ಅವರಿಗೆ ಕರಿ ಕಂಬಳಿ ಹೊದಿಸಿ, ಗೌರವಿಸಲಾಯಿತು. ಈ ವೇಳೆ ರವಿಕುಮಾರ್, ಎಸ್.ಎಲ್.ಲೋಕೇಶ್, ಪ್ರೇಮಕುಮಾರ್, ಶಂಕರ್, ಶಿವಾಜಿರಾವ್ ಹಾಗೂ ಮುಖಂಡರು ಉಪಸ್ಥಿತರಿದ್ದರು.



ಮೈಸೂರಿನ ಕುವೆಂಪುನಗರದ ರಮಾಬಾಯಿ ಅಂಬೇಡ್ಕರ್ ಶಾಲೆಯ ಮುಂಭಾಗದಲ್ಲಿ ಎಸ್‌ಎಂ ಕೃಷ್ಣ ಅಭಿಮಾನಿ ಬಳಗದ ವತಿಯಿಂದ ಸ್ವಾತಂತ್ರ್ಯದಿನ ಆಚರಿಸಲಾಯಿತು. ಈ ವೇಳೆ ಅಬಕಾರಿ ಇಲಾಖೆ ನಿವೃತ್ತ ಉಪಆಯುಕ್ತರೂ ಆದ ಮೈಸೂರು ಕೊಡವ ಸಮಾಜದ ನಿಕಟಪೂರ್ವ ಅಧ್ಯಕ್ಷ ಎಂ.ಕೆ.ಕುಟ್ಟಪ್ಪ, ಬ್ರಾಹ್ಮಣ ಮಹಾಸಭಾ ವಲಯ ಅಧ್ಯಕ್ಷ ಡಾ.ನಟರಾಜ ಜೋಯಿಸ್, ಪ್ರೊ.ಕೆ.ಆರ್.ರಂಗಯ್ಯ ಅವರನ್ನು ಸನ್ಮಾನಿಸಲಾಯಿತು. ಬಳಗದ ಅಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ರಮಾಬಾಯಿ ಅಂಬೇಡ್ಕರ್ ಸಂಸ್ಥೆ ಅಧ್ಯಕ್ಷ ಸಿ.ಎಂ.ನಾಗರಾಜ್, ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷ ಸಂಜಯ್ ಶೆಟ್ಟಿ, ಪ್ರೊ.ಮುತಾಲಿಕ್ ಪಾಟೀಲ್, ಹನುಮಣ್ಣ ಹಿರಿಯ ಸಾಹಿತಿ ಡಾ.ವಿ.ಮುನಿವೆಂಕಟಪ್ಪ, ನಿವೃತ್ತ ಉಪ ಕುಲಸಚಿವ ಚನ್ನೇಗೌಡ, ಪಿ.ಮಹದೇವಪ್ಪ, ರಮೇಶ್, ಎಲ್.ಕೃಷ್ಣ ಟಿ.ರವಿಗೌಡ, ರಾಜು, ಹೊಂಬೇಗೌಡ, ಪ್ರಕಾಶ್, ಕೃಷ್ಣ, ನಟೇಶ್, ರಾಜಕುಮಾರ್ ಇನ್ನಿತರರಿದ್ದರು.



ಮೈಸೂರು ಟೈಟಾನ್ ಪಬ್ಲಿಕ್ ಸ್ಕೂಲ್‌ನಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಶಾಲಾ ಮಕ್ಕಳು ಸ್ವಾತಂತ್ರ್ಯ ಹೋರಾಟಗಾರರ ವೇಷಭೂಷಣ ಧರಿಸಿ ಗಮನ ಸೆಳೆದರು. ಈ ವೇಳೆ ಶಾಲಾ ನಿರ್ವಾಹಕಿ ಫೌಜಿಯಾ ನಜೀರ್ ಹಾಗೂ ಇನ್ನಿತರರಿದ್ದರು.

ಕೆ.ಆರ್.ಆಸ್ಪತ್ರೆಯಲ್ಲಿ ಸ್ವಾತಂತ್ರ್ಯೋತ್ಸವ



ಮೈಸೂರು, ಆ.16(ಆರ್‌ಕೆ)–ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಸೋಮವಾರ 75ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸಲಾಯಿತು. ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಮತ್ತು ಡೈರೆಕ್ಟರ್ ಡಾ. ಹೆಚ್.ಎನ್.ದಿನೇಶ್, ಧ್ವಜಾರೋಹಣ ನೆರವೇರಿಸಿದರು. ನಂತರ ಮಾತನಾಡಿದ ಅವರು, ರಾಷ್ಟ್ರಪಿತ ಮಹಾತ್ಮಗಾಂಧೀಜಿ, ಸರ್ದಾರ್ ವಲ್ಲಭಭಾಯ್ ಪಟೇಲ್, ಬಾಲಗಂಗಾಧರ ತಿಲಕ್, ನೆಹರು ಸೇರಿದಂತೆ ಹಲವು ಮಹನೀಯರ ತ್ಯಾಗ, ಬಲಿದಾನದಿಂದಾಗಿ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ್ದು, ಬ್ರಿಟಿಷರಿಂದ ಮುಕ್ತಿ ದೊರೆತು 75 ವರ್ಷಗಳಾಯಿತು ಎಂದರು. ಕೆ.ಆರ್.ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಎನ್.ನಂಜುಂಡಸ್ವಾಮಿ, ಸ್ಥಾನಿಕ ವೈದ್ಯಾಧಿಕಾರಿ ಡಾ.ರಾಜೇಶ್‌ಕುಮಾರ್, ಪ್ರಾಧ್ಯಾಪಕ ಡಾ. ಅಮೃತೇಶ್, ಪ್ರಭಾರ ಆಡಳಿತಾಧಿಕಾರಿ ವೆಂಕಟರಾಜು, ಸಹಾಯಕ ಆಡಳಿತಾಧಿಕಾರಿ ಕುಸುಮ, ಮೇಟ್ರನ್‌ಗಳಾದ ಗಂಗಮ್ಮ ಕೋಮಲ, ಕಣ್ಣಮ್ಮ, ವಾರ್ಡ್ ಬಾಯ್ ವಿಭಾಗದ ಮೇಲ್ವಿಚಾರಕರಾದ ಮಹದೇವು, ಮಹದೇವಸ್ವಾಮಿ, ಸ್ವಚ್ಛತಾ ಮೇಲ್ವಿಚಾರಕರಾದ ಮಂಗಳಮ್ಮ, ಆದಿಲಕ್ಷ್ಮಿ, ಸೆಕ್ಯೂರಿಟಿ ಸೂಪರ್‌ವೈಸರ್‌ಗಳಾದ ಜಗದೀಶ, ಕುಮಾರ ಹಾಗೂ ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಇಂದು, ನಾಳೆ ಕೆಲವೆಡೆ ನೀರು ವ್ಯತ್ಯಯ



ಮೈಸೂರು, ಆ.16–ಮೈಸೂರಿನ ಕುವೆಂಪುನಗರ ಸರ್ವೋದಯ ರಸ್ತೆಯಲ್ಲಿ ಮುಖ್ಯ ನೀರು ಸರಬರಾಜು ಕೊಳವೆ ಮಾರ್ಗದ ತುರ್ತು ಲಿಂಕಿಂಗ್ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಆ.17 ಮತ್ತು 18ರಂದು ನೀರು ಸರಬರಾಜುವಿನಲ್ಲಿ ವ್ಯತ್ಯಯವುಂಟಾಗಲಿದೆ. ವಾರ್ಡ್ ನಂ.58, 59 ಭಾಗಶಃ ಮತ್ತು 64 ಭಾಗಶಃ (ಇ ಅಂಡ್ ಎಫ್ ಬ್ಲಾಕ್, ಕೆ–ಬ್ಲಾಕ್, ಜಿ ಅಂಡ್ ಹೆಚ್ ಬ್ಲಾಕ್ ರಾಮಕೃಷ್ಣನಗರ), ವಿವೇಕಾನಂದ ನಗರ, ಶ್ರೀರಾಂಪುರ 1ನೇ ಹಂತ, 1ರಿಂದ 5ನೇ ಬ್ಲಾಕ್ ಎಸ್‌ಬಿಎಂ ಬಡಾವಣೆ, 1ರಿಂದ 10ನೇ ಬ್ಲಾಕ್ ಮಧುವನ ಬಡಾವಣೆ ಶ್ರೀರಾಂಪುರ ಹಾಗೂ ಇತ್ಯಾದಿ ಪ್ರದೇಶಗಳು.

ಫ್ಲೆಕ್ಸ್ ವಿವಾದ: ಶಿವಮೊಗ್ಗ ಉದ್ವಿಗ್ನ

●ಇಬ್ಬರಿಗೆ ಇರಿತ ●ನಾಲ್ವರ ಬಂಧನ; ಪ್ರಮುಖ ಆರೋಪಿ ಕಾಲಿಗೆ ಗುಂಡು ●ಎಡಿಜಿಪಿ ಅಲೋಕ್ ಕುಮಾರ್ ನೇತೃತ್ವದಲ್ಲಿ ಕಟ್ಟೆಚ್ಚರ ●ಘಟನೆ ಸಂಬಂಧ ರಾಜಕಾರಣಿಗಳ ಆರೋಪ–ಪ್ರತ್ಯಾರೋಪ

ಶಿವಮೊಗ್ಗ,ಆ.16–ಸ್ವಾತಂತ್ರ್ಯ ಅಮೃತ ಮಹೋತ್ಸವದ ವೇಳೆ ಶಿವಮೊಗ್ಗದ ವೃತ್ತವೊಂದರಲ್ಲಿ ಫ್ಲೆಕ್ಸ್ ಅಳವಡಿಸುವ ಸಂಬಂಧ ಸೋಮವಾರ ಉದ್ವಿಗ್ನ ಪರಿಸ್ಥಿತಿ ಉಂಟಾಗಿತ್ತು. ಇದರ ನಡುವೆ ಪ್ರತ್ಯೇಕ ಸ್ಥಳದಲ್ಲಿ ಇಬ್ಬರಿಗೆ ಚಾಕುವಿನಿಂದ ಇರಿದಿದ್ದರಿಂದ ಪರಿಸ್ಥಿತಿ ಮತ್ತಷ್ಟು ವಿಕೋಪಕ್ಕೆ ತಿರುಗಿತ್ತಾದರೂ ಪೊಲೀಸರ ಕಟ್ಟುನಿಟ್ಟಿನ ಕ್ರಮದಿಂದ ಸದ್ಯ ಪರಿಸ್ಥಿತಿ ನಿಯಂತ್ರಣದಲ್ಲಿದೆ.

ಶಿವಮೊಗ್ಗದ ಅಮೀರ್ ಅಹಮದ್ ವೃತ್ತದ ಬಳಿ ಸೋಮವಾರ ಸಂಘಟನೆಯೊಂದು ಟಿಪ್ಪುವಿನ ಫೋಟೋ ಇಟ್ಟು ಸ್ವಾತಂತ್ರ್ಯ ದಿನ ಆಚರಿಸುತ್ತಿತ್ತು. ಅದೇ ವೇಳೆ ಮತ್ತೊಂದು ಗುಂಪು ವೃತ್ತದ ಹೈಮಾಸ್ಟ್ ದೀಪದ ಕಂಬಕ್ಕೆ ವೀರ ಸಾವರ್ಕರ್ ಫ್ಲೆಕ್ಸ್ ಅಳವಡಿಸಲು ಮುಂದಾಯಿತು. ಪಕ್ಕದಲ್ಲಿ ಸ್ವಾತಂತ್ರ್ಯ ದಿನ ಆಚರಿಸುತ್ತಿದ್ದ ಸಂಘಟನೆಯವರು ಇದನ್ನು ಗಮನಿಸಿ ಸಿಟ್ಟಿಗೆದ್ದು, ವೃತ್ತದಲ್ಲಿದ್ದ ಸಾವರ್ಕರ್ ಫ್ಲೆಕ್ಸ್ ತೆರವಿಗೆ ಮುಂದಾದರು. ಈ ವೇಳೆ ಫ್ಲೆಕ್ಸ್ ಜೊತೆಯಿದ್ದ ರಾಷ್ಟ್ರಧ್ವಜವೂ ನೆಲಕ್ಕುರುಳಿತು. ಎರಡು ಗುಂಪುಗಳು ಎದುರಾಗಿದ್ದರಿಂದ ಪರಿಸ್ಥಿತಿ ನಿಯಂತ್ರಿಸಲು ಸ್ಥಳದಲ್ಲಿದ್ದ ಪೊಲೀಸರು ಲಾಠಿ ಪ್ರಹಾರ ನಡೆಸಿದರು. ಗುಂಪು ಚದುರಿಸಿದ ಬಳಿಕ ಫ್ಲೆಕ್ಸ್ ತೆಗೆಸಿ, ಅಲ್ಲಿ ರಾಷ್ಟ್ರ ಧ್ವಜ ಹಾರಿಸಿದರು. ಬಳಿಕ ವೃತ್ತದಲ್ಲಿ ಸಾವರ್ಕರ್ ಕಟೌಟ್ ಅಳವಡಿಸಲು ಅವಕಾಶ ನೀಡುವಂತೆ ವಿಶ್ವ ಹಿಂದೂ ಪರಿಷತ್, ಬಜರಂಗ ದಳ ಹಾಗೂ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಇದೇ ವೇಳೆ ತರಕಾರಿ ಮಾರುಕಟ್ಟೆ ಬಳಿಯ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡುವ ಪ್ರೇಮ್‌ಸಿಂಗ್ ಎಂಬ ಯುವಕನಿಗೆ ದುಷ್ಕರ್ಮಿಗಳು ಚಾಕುವಿನಿಂದ ಇರಿದ ಘಟನೆ ನಡೆಯಿತು. ತಕ್ಷಣವೇ ಆತನನ್ನು ಸಮೀಪದ ಮೆಗ್ಗಾನ್ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಲಾಗಿದ್ದು, ಆತ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಅಲ್ಲದೆ ಭದ್ರಾವತಿಯಲ್ಲಿ ಅಂಗಡಿ ಮುಚ್ಚಿ ಮನೆಗೆ ತೆರಳುವಾಗ ಪ್ರವೀಣ್‌ಗೆ ದುಷ್ಕರ್ಮಿಗಳು ಚೂರಿಯಿಂದ ಇರಿದಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ.



ಈ ವಿಷಯ ಹರಡುತ್ತಿದ್ದಂತೆ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿತು. ಪೊಲೀಸರು ಹಾಗೂ ಪ್ರತಿಭಟನಾಕಾರರ ನಡುವೆ ವಾಕ್ಸಮರ ನಡೆಯಿತು. ಪರಿಸ್ಥಿತಿ ಕೈಮೀರುವುದನ್ನು ಮನಗಂಡ ಪೊಲೀಸರು ಕಠಿಣ ಕ್ರಮಕ್ಕೆ ಮುಂದಾದರು. ಪರಿಸ್ಥಿತಿ ನಿಯಂತ್ರಣಕ್ಕೆ ಅಶ್ರುವಾಯು ಸಿಡಿಸಲು ಮುಂದಾದರು. ಆದರೆ ಆ ಕ್ರಮವನ್ನು ಕೈಬಿಟ್ಟು ಸಮಾಧಾನದಿಂದಲೇ ಗುಂಪು ಚದುರಿಸಿದರು. ಆದರೂ ಯಾವುದೇ ಅಹಿತಕರ ಘಟನೆ ನಡೆಯದಂತೆ ಆ ಕ್ಷಣದಿಂದಲೇ 144 ಸೆಕ್ಷನ್‌ನಡಿ ನಿಷೇಧಾಜ್ಞೆ ವಿಧಿಸಲಾಯಿತು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಂ.ಲಕ್ಷ್ಮೀಪ್ರಸಾದ್ ನೇತೃತ್ವದಲ್ಲಿ ನಗರಾದ್ಯಂತ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ಎಡಿಜಿಪಿ(ಕಾನೂನು ಮತ್ತು ಸುವ್ಯವಸ್ಥೆ) ಅಲೋಕ್ ಕುಮಾರ್ ದೌಡಾಯಿಸಿ, ಘಟನೆಯ ಸಂಪೂರ್ಣ ಮಾಹಿತಿ ಪಡೆದಿದ್ದಾರೆ. ಅಲ್ಲಿಯೇ ಮೊಕ್ಕಾಂ ಹೂಡಿ ಬೂದಿಮುಚ್ಚಿದ ಕೆಂಡದಂತಿರುವ ಶಿವಮೊಗ್ಗದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಕಟ್ಟೆಚ್ಚರ ವಹಿಸಿದ್ದಾರೆ. ಘಟನೆಯ ಬೆನ್ನಲ್ಲೇ ಶಿವಮೊಗ್ಗ ನಗರ ಪಾಲಿಕೆ ಆಯುಕ್ತ ಮಾಯಣ್ಣಗೌಡ ನೇತೃತ್ವದಲ್ಲಿ ಅನಧಿಕೃತ ಫ್ಲೆಕ್ಸ್‌ಗಳನ್ನು ತೆರವುಗೊಳಿಸಲಾಗಿದೆ.

ಇರಿದವರು ಬಂಧನ: ತರಕಾರಿ ಮಾರುಕಟ್ಟೆ ಬಳಿಯ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡುವ ರಾಜಾಸ್ತಾನ ಮೂಲದ ಪ್ರೇಮ್‌ಸಿಂಗ್‌ಗೆ ಚಾಕುವಿನಿಂದ ಇರಿದು ಪರಾರಿಯಾಗಿದ್ದ ಆರೋಪಿಗಳನ್ನು ಘಟನೆ ನಡೆದ ಕೆಲ ಗಂಟೆಗಳಲ್ಲೇ ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಈ ವೇಳೆ ಪೊಲೀಸರ ಮೇಲೆಯೇ ಹಲ್ಲೆ ನಡೆಸಲು ಮುಂದಾದ ಪ್ರಮುಖ ಆರೋಪಿ ಕಾಲಿಗೆ ಪೊಲೀಸರು ಗುಂಡು ಹಾರಿಸಿ, ವಶಕ್ಕೆ ಪಡೆದಿದ್ದಾರೆ. ಈ ಸಂಬಂಧ ಪ್ರತಿಕ್ರಿಯಿಸಿರುವ ಎಡಿಜಿಪಿ ಅಲೋಕ್‌ಕುಮಾರ್, ಪ್ರಕರಣ ಸಂಬಂಧ ನಾಲ್ವರನ್ನು ಬಂಧಿಸಲಾಗಿದ್ದು, ಆರೋಪಿಗಳ ವಿರುದ್ಧ ಗೂಂಡಾ ಕಾಯ್ದೆಯಡಿ ಪ್ರಕರಣ ದಾಖಲಿಸಲು ಕ್ರಮ ವಹಿಸುವುದಾಗಿ ತಿಳಿಸಿದ್ದಾರೆ.

ಗೃಹ ಸಚಿವರ ಭೇಟಿ: ಗೃಹ ಸಚಿವ ಆರಗ ಜ್ಞಾನೇಂದ್ರ ಮಂಗಳವಾರ ಬೆಳಗ್ಗೆ ಶಿವಮೊಗ್ಗಕ್ಕೆ ಭೇಟಿ ನೀಡಿ, ಪೊಲೀಸ್ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದರು. ಪರಿಸ್ಥಿತಿ ನಿಯಂತ್ರಣಕ್ಕೆ ಎಲ್ಲಾ ರೀತಿಯ ಕ್ರಮ ವಹಿಸುವಂತೆ ಸೂಚಿಸಿದ್ದಲ್ಲದೆ ಆಸ್ಪತ್ರೆಯಲ್ಲಿರುವ ಗಾಯಾಳು ಪ್ರೇಮ್‌ಸಿಂಗ್ ಆರೋಗ್ಯ ವಿಚಾರಿಸಿದರು. ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಗೂ ಸಂತೋಷ್‌ಜಿ ಮತ್ತಿತರರು ಆಸ್ಪತ್ರೆಗೆ ಭೇಟಿ ನೀಡಿದ್ದರು. ಈ ವೇಳೆ ಸಚಿವ ಆರಗ ಜ್ಞಾನೇಂದ್ರ ಹಾಗೂ ಬಿ.ವೈ.ವಿಜಯೇಂದ್ರ, ಕಾಂಗ್ರೆಸ್ ವಿರುದ್ಧ ಹರಿಹಾಯ್ದರು. ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಕೆಲವು ಸಂಘಟನೆಯವರನ್ನು ಪ್ರೋತ್ಸಾಹಿಸಿದ್ದರ ಪರಿಣಾಮವಾಗಿ ರಾಜ್ಯದಲ್ಲಿ ಇಂತಹ ಘಟನೆಗಳು ನಿರಂತರವಾಗಿ ನಡೆಯುತ್ತಿವೆ ಎಂದು ಹರಿಹಾಯ್ದರು.

ಹಿಂದೂಗಳು ಒಗ್ಗಟ್ಟಾದರೆ!: ಅತ್ತ ಬೆಂಗಳೂರಿನಲ್ಲಿ ಪ್ರತಿಕ್ರಿಯಿಸಿರುವ ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ, ಹಿಂದೂಗಳ ಮೇಲೆ ದಾಳಿ ನಡೆಸುವುದನ್ನು ನಿಲ್ಲಿಸಬೇಕು. ಹಿಂದುಗಳೇನಾದರೂ ಒಗ್ಗಟ್ಟಿನಿಂದ ಎದ್ದು ನಿಂತರೆ ಯಾರೂ ಉಳಿಯುವುದಿಲ್ಲ ಎಂದು ಎಚ್ಚರಿಕೆ ನೀಡಿದರು. ಶಿವಮೊಗ್ಗದಲ್ಲಿ ನಡೆದ ಘಟನೆ ಮುಂದಿಟ್ಟುಕೊಂಡು ಕಾಂಗ್ರೆಸ್ ಹಾಗೂ ಬಿಜೆಪಿ ನಾಯಕರು ವಾಕ್ಸಮರ ಮುಂದುವರೆಸಿದ್ದಾರೆ. ಸದ್ಯ ಶಿವಮೊಗ್ಗದ ಪರಿಸ್ಥಿತಿ ನಿಯಂತ್ರಣದಲ್ಲಿರುವ ಹಿನ್ನೆಲೆಯಲ್ಲಿ ಮಂಗಳವಾರ ಮಧ್ಯರಾತ್ರಿವರೆಗೆ ಮಾತ್ರ ನಿಷೇಧಾಜ್ಞೆ ಇರಲಿದೆ. ಆದರೂ ಮುಂಜಾಗ್ರತೆಯಿಂದ ಶಿವಮೊಗ್ಗದ ಜೊತೆಗೆ ಭದ್ರಾವತಿ ನಗರದಲ್ಲೂ ಪೊಲೀಸರು ಭಾರೀ ಬಂದೋಬಸ್ತ್ ಮಾಡಿದ್ದಾರೆ. ಪೂರ್ವವಲಯದ ಜಿಲ್ಲೆಗಳಿಂದ ಹೆಚ್ಚಿನ ಪೊಲೀಸ್ ಪಡೆಯನ್ನು ನಿಯೋಜಿಸಿ ಕಟ್ಟೆಚ್ಚರ ವಹಿಸಲಾಗಿದೆ.

ರಾಜಸ್ತಾನದಲ್ಲಿ ದಲಿತ ಬಾಲಕನ ಹತ್ಯೆ ಖಂಡಿಸಿ ಪ್ರತಿಭಟನೆ



ಮೈಸೂರು,ಆ.16(ಪಿಎಂ)–ರಾಜಸ್ತಾನದಲ್ಲಿ ಶಿಕ್ಷಕನೊಬ್ಬ ಹಲ್ಲೆ ನಡೆಸಿ ದಲಿತ ಬಾಲಕನ ಹತ್ಯೆ ಮಾಡಿರುವುದನ್ನು ಖಂಡಿಸಿ ಮೈಸೂರು ವಿಶ್ವವಿದ್ಯಾನಿಲಯ ಸಂಶೋಧಕರ ಸಂಘ ಹಾಗೂ ದಲಿತ ವಿದ್ಯಾರ್ಥಿ ಒಕ್ಕೂಟದ ಜಂಟಿ ಆಶ್ರಯದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು. ಮೈಸೂರು ಮಾನಸ ಗಂಗೋತ್ರಿಯ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಬಳಿ ಜಮಾಯಿಸಿದ ಪ್ರತಿಭಟನಾಕಾರರು, ರಾಜಸ್ತಾನದಲ್ಲಿ ಮೇಲ್ಜಾತಿಯವರಿಗೆ ಮೀಸಲಾದ ಪಾತ್ರೆಯಲ್ಲಿದ್ದ ನೀರು ಕುಡಿದ ಎಂಬ ಕಾರಣಕ್ಕೆ ಶಿಕ್ಷಕನೊಬ್ಬ ಹಲ್ಲೆ ನಡೆಸಿದ್ದರಿಂದ ದಲಿತ ಬಾಲಕ ಸಾವನ್ನಪ್ಪಿರುವ ಅಮಾನುಷ ಘಟನೆ ನಡೆದಿದೆ. ಸ್ವಾತಂತ್ರ್ಯ ಅಮೃತ ಮಹೋತ್ಸವವನ್ನು 'ಹರ್ ಘರ್ ತಿರಂಗಾ' ಘೋಷವಾಕ್ಯದಡಿ ದೇಶಾದ್ಯಂತ ಆಚರಿಸಲಾಗಿದೆ. ಆದರೆ ಸ್ವಾತಂತ್ರ್ಯ ಕೇವಲ ಮೇಲ್ಜಾತಿಗಷ್ಟೇ ಸಿಕ್ಕಿದೆ ಎಂಬುದಕ್ಕೆ ಈ ಘಟನೆಯೇ ಸಾಕ್ಷಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬ್ರಿಟಿಷರ ದಾಸ್ಯದಿಂದ ಮುಕ್ತರಾಗಲು ಸರ್ವ ಜನಾಂಗದವರೂ ಪ್ರಯತ್ನಿಸಿದ್ದಾರೆ. ಆದರೆ ಬಹುಸಂಖ್ಯಾತ ದಲಿತ ಸಮುದಾಯಕ್ಕೆ ಇನ್ನೂ ಸ್ವಾತಂತ್ರ್ಯ ಸಿಕ್ಕಿಲ್ಲ ಎಂಬುದಕ್ಕೆ ಈ ಘಟನೆಯೇ ಸಾಕ್ಷಿ. ಹಿಂದೂ ಹತ್ಯೆಗಳಿಗೆ ಮಾತ್ರ ಸ್ಪಂದಿಸುವ ಜಾತಿಗ್ರಸ್ಥರು, ಹಿಂದೂ ಭಾಗವಾಗಿಯೇ ಉಳಿದಿರುವ ದಲಿತ ಬಾಲಕನ ಹತ್ಯೆಗೆ ಕಿಂಚಿತ್ತು ಸ್ಪಂದಿಸದೇ ಇರುವುದು ಅಮಾನವೀಯ ಎಂದು ಕಿಡಿಕಾರಿದರು. ಸಂಘದ ಅಧ್ಯಕ್ಷ ನಟರಾಜ್ ಶಿವಣ್ಣ, ಗೌರವಾಧ್ಯಕ್ಷ ಮಹೇಶ್ ಸೋಸ್ಲೆ, ಕಾರ್ಯದರ್ಶಿ ಜೆ.ಶಿವಮೂರ್ತಿ, ಸಂಶೋಧಕರಾದ ಕಲ್ಲಹಳ್ಳಿ ಕುಮಾರ್, ಕಾರ್ತಿಕ್ ನಂಜುಂಡಸ್ವಾಮಿ, ಪ್ರವೀಣ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಅರ್ಜಿ ಆಹ್ವಾನ

ಮೈಸೂರು,ಆ.16–ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ವತಿಯಿಂದ ಮೈಸೂರಿನ ನಿರ್ವಹಣಾ ವಿಭಾಗದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಆ.26ರೊಳಗಾಗಿ ಅರ್ಜಿಯನ್ನು ಸಲ್ಲಿಸಲು ತಿಳಿಸಿದೆ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಮೊ.ನಂ: 9880800692 ಅಥವಾ ಇಮೇಲ್:gttcmysmaint@gmail.com ಅನ್ನು ಸಂಪರ್ಕಿಸಬಹುದು ಎಂದು ಜಿ.ಟಿ.ಟಿ.ಸಿಯ ಘಟಕದ ಮುಖ್ಯಸ್ಥರು ಸಂಪರ್ಕಿಸಲು ಕೋರಿದೆ.



ಮೈಸೂರಿನ ಶಾರದಾ ವಿಲಾಸ ಕಾಲೇಜಿನಲ್ಲಿ ನಡೆದ ಆಜಾದಿ ಕಾ ಅಮೃತ್ ಮಹೋತ್ಸವದಲ್ಲಿ ಲೇಖಕಿ ಹಾಗೂ ವೈದ್ಯೆ ಡಾ.ವೀಣಾ ಭಾರತಿ ಅವರನ್ನು ಸನ್ಮಾನಿಸಲಾಯಿತು. ಇವರು ಈ ಸಂಸ್ಥೆಯ ಹಳೆಯ ವಿದ್ಯಾರ್ಥಿ. ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಪದವೀಧರರಾಗಿ, ಬೆಂಗಳೂರಲ್ಲಿ ಹೆಲ್ತ್ ಮ್ಯಾನೇಜ್‌ಮೆಂಟ್ ಕನ್ಸಲ್‌ಟೆಂಟ್ ಆಗಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದಿಂದ ಇಬ್ಬರು ಹಿರಿಯ ಪತ್ರಕರ್ತರಿಗೆ ಸನ್ಮಾನ



ಹುಣಸೂರಿನ ಕಲ್ಕುಣಿಕೆ ಬಡಾವಣೆಯಲ್ಲಿ ಕೆ.ವಿ.ಶ್ರೀನಿವಾಸನ್ (ಬ್ರದರ್) ಅವರನ್ನು ಸೋಮವಾರ ಅಭಿನಂದಿಸಲಾಯಿತು.

ಮೈಸೂರು, ಆ. 16(ಆರ್‌ಕೆ)– 75ನೇ ಸ್ವಾತಂತ್ರ್ಯ ಅಮೃತೋತ್ಸವದ ಅಂಗವಾಗಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಮೈಸೂರಿನ ಇಬ್ಬರು ಹಿರಿಯ ಪತ್ರಕರ್ತರನ್ನು ಅವರ ನಿವಾಸದಲ್ಲೇ ಗೌರವಿಸಲಾಯಿತು.

ಕಳೆದ ನಾಲ್ಕು ದಶಕಗಳಿಂದ ಅಫ್ತಾಬ್–ಇ–ಕರ್ನಾಟಕ ಪತ್ರಿಕೆ ವರದಿಗಾರರಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿರುವ ರಹಮತ್ ಉಲ್ಲಾ ಖಾನ್ ಹಾಗೂ ಆಕಾಶವಾಣಿ ವಾಹಿನಿಯಲ್ಲಿ 5 ದಶಕಗಳ ಕಾಲ ಸೇವೆ ಸಲ್ಲಿಸಿ ಹುಣಸೂರಿನ ಕಲ್ಕುಣಿಕೆ ಬಡಾವಣೆಯಲ್ಲಿ ವಿಶ್ರಾಂತ ಜೀವನ ನಡೆಸುತ್ತಿರುವ ಕೆ.ವಿ.ಶ್ರೀನಿವಾಸನ್ (ಬ್ರದರ್) ಅವರನ್ನು ಸೋಮವಾರ ಅಭಿನಂದಿಸಲಾಯಿತು. ಮೈಸೂರಿನ ಭಾಷಾನಗರದಲ್ಲಿ ಸನ್ಮಾನ ಸ್ವೀಕರಿಸಿದ ರಹಮತ್ ಉಲ್ಲಾ ಖಾನ್ ಅವರಿಗೆ ಮಾಜಿ ಮೇಯರ್ ಆರಿಫ್ ಹುಸೇನ್, ಆರ್ಥಿಕ ನೆರವು ನೀಡಿದರು. ನಂತರ ಹುಣಸೂರಿನ ಕಲ್ಕುಣಿಕೆ ಬಡಾವಣೆಯಲ್ಲಿರುವ ತೋಟದ ಮನೆಯಲ್ಲಿ ಶ್ರೀನಿವಾಸನ್ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ರಾಜ್ಯ ಸಮಿತಿ ಸದಸ್ಯ ಬಿ.ರಾಘವೇಂದ್ರ ಉರ್ದು ಪತ್ರಿಕೆಗಳ ಅಪ್ಸರ್ ಪಾಷಾ, ಹುಣಸೂರು ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಹೆಚ್.ಆರ್.ಕೃಷ್ಣಕುಮಾರ್, ಸದಸ್ಯರಾದ ಹನಗೂಡು ನಟರಾಜ್, ಗಜೇಂದ್ರ, ಸಂಪತ್ ಕುಮಾರ್, ಪ್ರತಾಪ್, ವಡ್ಡಂಬಾಳು ರವಿಕುಮಾರ್ ಹಾಗೂ ಇತರರು ಉಪಸ್ಥಿತರಿದ್ದರು.



ಮೈಸೂರಿನ ಭಾಷಾನಗರದಲ್ಲಿ ರಹಮತ್ ಉಲ್ಲಾ ಖಾನ್ ಅವರನ್ನು ಸನ್ಮಾನಿಸಲಾಯಿತು.

ಮೈಸೂರು ಜೈಲಿನಿಂದ 20 ಖೈದಿಗಳ ಬಿಡುಗಡೆ



ಮೈಸೂರು, ಆ. 16(ಆರ್‌ಕೆ)– 75ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಸನ್ನಡತೆ ಹಿನ್ನೆಲೆಯಲ್ಲಿ ಮೈಸೂರು ಕೇಂದ್ರ ಕಾರಾಗೃಹದ 20 ಮಂದಿ ಸಜಾ ಬಂಧಿಗಳನ್ನು ಸೋಮವಾರ ಬಿಡುಗಡೆ ಮಾಡಲಾಯಿತು.

ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ರಾಜ್ಯ ಸರ್ಕಾರದ ಆದೇಶದಂತೆ ಬಿಡುಗಡೆಯಾದ 20 ಮಂದಿಯನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ ಬೀಳ್ಕೊಟ್ಟರು. ಈ ಸಂದರ್ಭ ಮಾತನಾಡಿದ ಅವರು, ತಿಳಿದೋ, ತಿಳಿಯದೆಯೋ ಒಂದು ಕ್ಷಣದ ಕೋಪ ನಿಗ್ರಹಿಸಲಾರದೆ ಮಾಡಿದ ತಪ್ಪಿನಿಂದ ಜೈಲುವಾಸ ಅನುಭವಿಸಿರುವ ನೀವು, ಮನಪರಿವರ್ತನೆಯಾಗಿ ಸನ್ನಡತೆ ಪ್ರದರ್ಶಿಸಿರುವುದರಿಂದ ಸರ್ಕಾರ ಬಿಡುಗಡೆ ಮಾಡಿದೆ. ಜೈಲಿನಿಂದ ಹೋದ ಮೇಲೆ ಬೇರೆಯವರಿಗೆ ಕೆಡುಕು ಮಾಡದೇ, ವೃತ್ತಿ ಮಾಡಿಕೊಂಡು ಕುಟುಂಬದ ಸದಸ್ಯರೊಂದಿಗೆ ಗೌರವದಿಂದ ನೆಮ್ಮದಿ ಜೀವನ ನಡೆಸಿ ಮುಂದೆ ಎಂದೂ ಅಪರಾಧ ಕೃತ್ಯ ಮಾಡಬೇಡಿ ಎಂದು ಹಿತವಚನ ಹೇಳಿದರು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಜೈಲು ಚೀಫ್ ಸೂಪರಿಂಟೆಂಡೆಂಟ್ ಕೆ.ಸಿ.ದಿವ್ಯಶ್ರೀ, ಸರ್ಕಾರದ ಆದೇಶದಂತೆ ಸನ್ನಡತೆ ಪ್ರದರ್ಶಿಸಿದ 20 ಮಂದಿ ಸಜಾ ಬಂಧಿಗಳನ್ನು ಸ್ವಾತಂತ್ರ್ಯ ಅಮೃತೋತ್ಸವದ ಅಂಗವಾಗಿ ಬಿಡುಗಡೆ ಮಾಡಲಾಗುತ್ತಿದೆ. ಅದೇ ರೀತಿ 2023ರ ಜನವರಿ 26ರಂದು ಗಣರಾಜ್ಯೋತ್ಸವದಂದೂ ಸನ್ನಡತೆ ಆಧಾರದಲ್ಲಿ ಖೈದಿಗಳನ್ನು ಬಿಡುಗಡೆ ಮಾಡಲಾಗುವುದು ಎಂದರು.

ಜೈಲು ಸಲಹಾ ಸಮಿತಿಯು ಕಳುಹಿಸಿಕೊಟ್ಟ ಪಟ್ಟಿಯನ್ನು ಸರ್ಕಾರ ಪರಿಶೀಲಿಸಿ ಬಿಡುಗಡೆಗೆ ಅರ್ಹ ಖೈದಿಗಳನ್ನು ಅನುಮೋದಿಸುತ್ತದೆ. ಹೊರಗೆ ಹೋಗಿ ಉತ್ತಮ ವ್ಯಕ್ತಿಗಳಾಗಿ ನೆಮ್ಮದಿಯಿಂದ ಜೀವನ ನಡೆಸಲಿ ಎಂಬುದೇ ಅವಧಿಗೂ ಮುನ್ನ ಖೈದಿಗಳನ್ನು ಬಿಡುಗಡೆ ಮಾಡುವ ಉದ್ದೇಶವಾಗಿದೆ ಎಂದರು. ಜೈಲಿನಿಂದ ಹೊರಬರುತ್ತಿದ್ದಂತೆಯೇ ಕರೆದೊಯ್ಯಲು ಬಂದಿದ್ದ ಸಂಬಂಧಿಕರನ್ನು ಕಂಡು ಬಿಡುಗಡೆ ಯಾದವರ ಕಣ್ಣುಗಳಲ್ಲಿ ನೀರಾಡಿದ್ದು ಕಂಡುಬಂದಿತು. ಪರಸ್ಪರ ಆಲಿಂಗಿಸಿ, ಸಂತಸದಿಂದ ಅವರವರ ಊರುಗಳಿಗೆ ತೆರಳಿದರು.

ನಿಧನ

ಟಿ.ಮಂಗಳ



ಮೈಸೂರು, ಆ.16 (ಆರ್‌ಕೆ)– ವರ್ತಮಾನ ಪತ್ರಿಕೆ ಸಂಪಾದಕ ಎಂ.ಟಿ. ಜಯರಾಂ ಅವರ ಪತ್ನಿ ಶ್ರೀಮತಿ ಟಿ. ಮಂಗಳ (68) ಮೈಸೂರಿನ ಬೃಂದಾವನ ಬಡಾವಣೆಯ ನಿವಾಸದಲ್ಲಿ ಸೋಮವಾರ ಮಧ್ಯಾಹ್ನ ನಿಧನರಾದರು.

ಮೃತರು ಪತಿ ಜಯರಾಂ, ನಾಲ್ವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಇಂದು ಬೆಳಗ್ಗೆ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಪದಾಧಿಕಾರಿಗಳು, ಎಲ್ಲಾ ಸದಸ್ಯರು ತೀವ್ರ ಸಂತಾಪ ಸೂಚಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.08.2022 ಬುಧವಾರ, ಮಳೆ ನಕ್ಷತ್ರ : ಮಖೆ 17.08.2022ರಿಂದ 30.08.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸ, ಕೃಷ್ಣ ಪಕ್ಷ,
ತಿಥಿ: ಷಷ್ಠೀ, ನಕ್ಷತ್ರ : ಅಶ್ವಿನಿ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

■ **ಪಿ.ಆರ್. ತಿಪ್ಪೇಸ್ವಾಮಿ ಪ್ರತಿಷ್ಠಾನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್‌ನ ಯುವ ನಿಸರ್ಗ ಚಿತ್ರ ಕಲಾವಿದರಿಂದ ವರ್ಷಧಾರೆ ಚಿತ್ರಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ಬೆಳಗ್ಗೆ 10 ರಿಂದ.

■ **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.

■ **ವಿದ್ಯಾವರ್ಧಕ ಪಾಲಿಟೆಕ್ನಿಕ್ :** ವಿಶಿಷ್ಟ–2022 ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು : ಬ್ಯಾಂಕ್ ನೋಟ್‌ಪೇಪರ್ ಮಿಲ್ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ಎ. ಶ್ರೀನಿವಾಸನ್, ಅಧ್ಯಕ್ಷತೆ : ವಿದ್ಯಾ ವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು : ಪಿ. ವಿಶ್ವನಾಥ್, ಶ್ರೀಶೈಲ ರಾಮಣ್ಣವರ್, ಸ್ಥಳ: ಸಾಹುಕಾರ್ ಚೆನ್ನಯ್ಯ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಸೇಂಟ್ ಫಿಲೋಮಿನಾ ಕಾಲೇಜು :** ಅಂತರಧರ್ಮ ಸಂವಾದ, ಭಾಷಣಕಾರರು : ಡಾ. ಜ್ಯೋತಿ ಶಂಕರ್ ಅವರಿಂದ ಹಿಂದೂ ಧರ್ಮ ಮತ್ತು ಶಾಂತಿ, ಡಾ. ಅನೀಸ್ ಅಹಮದ್ ಅವರಿಂದ ಇಸ್ಲಾಂ ಮತ್ತು ಶಾಂತಿ, ರೆ. ಜಾನ್ ಪೀಟರ್ ಅವರಿಂದ ಕ್ರಿಶ್ಚಿಯಾನಿಟಿ ಮತ್ತು ಶಾಂತಿ ಕುರಿತು ಭಾಷಣ, ಅಧ್ಯಕ್ಷತೆ : ಪ್ಯಾಟ್ರಿಕ್ ಕ್ಷೇವಿಯರ್, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ವೇದಾಂತ ಆಯುರ್ವೇದಿಕ್ ಸೆಂಟರ್:** ಮಕ್ಕಳಾಗದೆ ಇರುವ ದಂಪತಿಗಳಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ವೇದಾಂತ ಆಯುರ್ವೇದಿಕ್ ಸೆಂಟರ್, ಜಯನಗರ, ಸಂಜೆ 5ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ನಖ ಶಿಖಾಂತ –ಆರೋಗ್ಯ, ಸೌಂದರ್ಯಗಳ ವೈಜ್ಞಾನಿಕ ಮಾಹಿ–ಡಾ.ಕೇಶವ ಕೊರಸೆ, 6.40 ಭಾವಗೀತೆ, 6.45 ರೈತರಿಗೆ ಸಲಹೆ, 6.50 ವನ ಮಹೋತ್ಸವ–ಅರಣ್ಯ ಇಲಾಖೆ ಪ್ರಾಯೋಜಿತ ಕಾರ್ಯಕ್ರಮ, 9.00 ಮನೋ ನಂದನ–ಪ್ರೇರಣಾ ಆಸ್ಪತ್ರೆ ಪ್ರಾಯೋಜಿತ ಕಾರ್ಯಕ್ರಮ, 9.30 ಆಕಾಶವಾಣಿ ಯೊಂದಿಗೆ ಸ್ವಾತಂತ್ರ್ಯ ಚಳುವಳಿಯ ಪಯಣ–ಬಾನುಲಿ ಸರಣಿ, 10.00 ಹಿಂದೂಸ್ಥಾನಿ ಸಂಗೀತ–ಬಾಲೇಖಾನ್ –ಸಿತಾರ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ವೈ.ಎನ್.ಮದ್ವೇಶ್, 12.45 ಲಾಕ್‌ಡೌನ್ ಕಥಾ ನಾಟಕ, ಲಾಕ್ ಡೌನ್ ಕಥೆಗಳನ್ನಾಧರಿಸಿದ ಸರಣಿ "ಸೆಳೆತ", ಮೂಲಕಥೆ–ಮಾಲತಿ ಹೆಗಡೆ, ನಾಟಕ ರೂಪ– ಉಷಾ ನರಸಿಂಹ, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ್, 1.20 ಭಾವಗೀತೆ–ರಶ್ಮಿ ಬಿನು, 3.00 ಲಯ ಸಂಭ್ರಮ–ತಾಳ, ಲಯ ರಸಾಸ್ವಾದ. ಪರಿಕಲ್ಪನೆ ಮತ್ತು ಪ್ರಸ್ತುತಿ–ಎಚ್.ಎಲ್.ಶಿವಶಂಕರಸ್ವಾಮಿ, ನಿರ್ಮಾಣ–ಎಸ್.ಸುಬ್ರಹ್ಮಣ್ಯ, 4.00 ಮಹಿಳಾರಂಗ–ಸ್ತ್ರೀ ಚೇತನ–ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಭಾಗವಹಿಸುವವರು ಲೇಖಕಿ ಕುಸುಮಾ ಆಯರಹಳ್ಳಿ, 4.30 ಚಟ್‌ಪಟ್ ಚುರುಮುರಿ, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ.ಮೀನಾ, 4.45 ಹಿಂದಿ ಪಾಠ–ಕಿಶೋರ್ ಎಂ.ಕಾಕಡೆ, 6.50 ಕೃಷಿರಂಗ–ಕಿಸಾನ್‌ವಾಣಿ, ಹಣ್ಣಿನ ಮರಗಳ ಕೃಷಿ, ಉತ್ಪನ್ನಗಳ ಮೌಲ್ಯವರ್ಧನೆ ಹಾಗೂ ಮಾರಾಟದಲ್ಲಿನ ಅನುಭವ ಕುರಿತು ಕೆ.ಬಿ.ಪ್ರಭೋದ್ ಅವರೊಡನೆ ಸಂದರ್ಶನ, 9.05 ಕ್ಷಿತಿಜ–Literacy ಗುರು–ಸಾಹಿತ್ಯ ದಿಗ್ಗಜರೊಂದಿಗೆ ಸಂವಾದ, 10.00 ಹಳ್ಳಿ ಹಾಡು, ಭಾಗವಹಿಸುವವರು–ಬನ್ನೂರು ಕೆಂಪಮ್ಮ ಮತ್ತು ತಂಡ, ಪ್ರಸ್ತುತಿ–ಅಬ್ದುಲ್ ರಶೀದ್

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ), ಚಾಮುಂಡಿಬೆಟ್ಟದ ತಪ್ಪಲು :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಬಿ.ವಿ. ವಸಂತಕುಮಾರ್ ಅವರಿಂದ ಕರ್ನಾಟಕ ಸಂಸ್ಕೃತಿ ಕುರಿತು ಪ್ರವಚನ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಮಠದ ಆವರಣ, ಸಂಜೆ 6.30ರಿಂದ.

ಸುತ್ತೂರಿನಲ್ಲಿಂದು

■ **ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ:** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರವಚನ: ಜೆಎಸ್‌ಎಸ್ ಕಾಲೇಜು ಪ್ರಾಧ್ಯಾಪಕ ಪ್ರೊ.ಹೆಚ್.ಬಿ.ದೇವಣ್ಣ, ವಾಚನ:ಜೆಎಸ್‌ಎಸ್ ಪ್ರೌಢಶಾಲೆ ದೈಹಿಕ ಶಿಕ್ಷಕ ಡಿ.ಎಂ. ಸಿದ್ದಲಿಂಗಸ್ವಾಮಿ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಸುತ್ತೂರು ಮಠ, ಸಂಜೆ 6.30ರಿಂದ

ಹೊಮ್ಮರಗಳ್ಳಿಯಲ್ಲಿಂದು, ಹೆಚ್.ಡಿ. ಕೋಟೆ ತಾಲೂಕು

■ **ಸರ್ಕಾರಿ ಪ್ರೌಢಶಾಲೆ :** ಪ್ರತಿಭಾ ಪುರಸ್ಕಾರ, ಅಧ್ಯಕ್ಷತೆ : ಕಾಲೇಜು ಉಪ ಪ್ರಾಂಶುಪಾಲೆ ಗೀತಾ, ಅಭಿನಂದನಾ ಭಾಷಣ : ಸಾಹಿತಿ ಬನ್ನೂರು ಕೆ. ರಾಜು, ಮುಖ್ಯ ಅತಿಥಿಗಳು : ಸುನಂದಮ್ಮ ವೆಂಕಟನಾರಾಯಣ, ವೆಂಕಟನಾರಾಯಣ, ಮಧ್ಯಾಹ್ನ 2ಕ್ಕೆ.

ಸ್ವಾತಂತ್ರ್ಯ ಕಳೆದುಕೊಂಡಿದ್ದೇಕೆ ಎಂಬುದಕ್ಕೆ ಉತ್ತರ ಕಂಡುಕೊಂಡರೆ ಗಳಿಸಿರುವ ಸ್ವಾತಂತ್ರ್ಯ ಉಳಿಸಿಕೊಳ್ಳಲು ಸಾಧ್ಯ

- ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಪ್ರತಿಪಾದನೆ
- ಒಗ್ಗಟ್ಟಿದ್ದರಷ್ಟೇ ದೇಶ ಜಾಗತಿಕವಾಗಿ ಬೆಳೆಯಬಲ್ಲದು: ಸುತ್ತೂರು ಶ್ರೀ



ಮೈಸೂರು,ಆ.16(ಎಸ್‌ಬಿಡಿ)–ಸ್ವಾತಂತ್ರ್ಯ ಕಳೆದುಕೊಂಡಿದ್ದೇಕೆ ಎಂಬುದಕ್ಕೆ ಉತ್ತರ ಕಂಡುಕೊಂಡಾಗ ಮಾತ್ರ ಹೋರಾಟದಿಂದ ಪಡೆದಿರುವ ಸ್ವಾತಂತ್ರ್ಯ ಉಳಿಸಿಕೊಳ್ಳಲು ಸಾಧ್ಯ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ಮಾಜಿ ಸಚಿವ ಸಿ.ಟಿ.ರವಿ ಅಭಿಪ್ರಾಯಿಸಿದರು.

ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ಊಟಿ ರಸ್ತೆಯ ಜೆಎಸ್‌ಎಸ್ ಕಾಲೇಜು ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ಸ್ವಾತಂತ್ರ್ಯ ಅಮೃತ ಮಹೋತ್ಸವದಲ್ಲಿ ಪಾಲ್ಗೊಂಡು ಮಾತನಾಡಿ, ನಮ್ಮ ದೇಶ ಶೌರ್ಯ ತುಂಬಿದ ನಾಡಾಗಿದ್ದರೂ ಸ್ವಾತಂತ್ರ್ಯ ಕಳೆದುಕೊಂಡಿದ್ದು ಏಕೆ? ಎನ್ನುವ ಪ್ರಶ್ನೆಗೆ ಉತ್ತರ ಕಂಡುಕೊಳ್ಳಬೇಕು. ಆಗ ಮಾತ್ರ ಅಪಾರ ಮಹನೀಯರ ಹೋರಾಟದ ಪ್ರತಿಫಲವಾಗಿ ಗಳಿಸಿರುವ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದರು.

ಮರುಭೂಮಿ ಮೇಲೆ ಯಾರೂ ಆಕ್ರಮಣ ಮಾಡುವುದಿಲ್ಲ. ಸಮೃದ್ಧಿ, ಸಂಪತ್ತು ಇರುವ ಕಡೆ ದರೋಡೆ ನಡೆಸಲು ಸಂಚು ರೂಪಿಸುತ್ತಾರೆ. ಭಾರತ ಸಮೃದ್ಧ ರಾಷ್ಟ್ರವಾಗಿದ್ದ ಕಾರಣದಿಂದಲೇ ವಿದೇಶಿಯರಿಂದ ಸಾಲು ಸಾಲು ದಾಳಿ ನಡೆಯಿತು. ಸಾಮರ್ಥ್ಯ, ಶೌರ್ಯ, ತ್ಯಾಗಕ್ಕೆ ಕೊರತೆ ಇಲ್ಲದ ಆ ಕಾಲದಲ್ಲಿ ದಾಳಿಗೆ ಪ್ರತಿರೋಧ ವ್ಯಕ್ತವಾಯಿತು. ಆದರೆ ಸಂಘಟಿತ ಪ್ರಯತ್ನವಿಲ್ಲದ ಕಾರಣ ವಿಫಲತೆ ಕಾಣಬೇಕಾಯಿತು. ಅಲ್ಲದೆ ನಾವು ಕುತಂತ್ರಕ್ಕೆ ಬಲಿಯಾಗಿರುವುದು ಇತಿಹಾಸದಲ್ಲಿ ದಾಖಲಾಗಿದೆ ಎಂದು ತಿಳಿಸಿದರು.

ಜಗತ್ತಿಗೆ 'ಗುರು' ಎನ್ನುವುದೇ ಅರ್ಥವಾಗದ ಕಾಲದಲ್ಲೇ ಭಾರತದಲ್ಲಿ ಗುರುಕುಲಗಳು ಆರಂಭವಾಗಿ ವಿದ್ಯಾರ್ಜನೆಗೆ ದಾರಿದೀಪವಾಗಿದ್ದವು. ಹಿಂದಿನಿಂದಲೂ ಯಾರೂ ನಮ್ಮ ದೇಶದ ತಂತ್ರಜ್ಞಾನ ಮೀರಿಸಲು ಸಾಧ್ಯವಾಗಿಲ್ಲ. ಆದರೂ ದುರುದ್ದೇಶ ಪೂರ್ವಕವಾಗಿ ನಮ್ಮ ವಿರುದ್ಧ ಅಪಪ್ರಚಾರ ಮಾಡಲಾಯಿತು. ಅವಹೇಳನ ಹಾಗೂ ಕೀಳರಿಮೆ ಮೂಡಿಸುವ ಕೆಲಸ ನಡೆಯಿತು ಎಂದು ಹೇಳಿದರು.

ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಎಷ್ಟೇ ವೈವಿಧ್ಯತೆ, ವಿರೋಧಾಭಾಸವಿದ್ದರೂ ದೇಶದ ವಿಷಯ ಬಂದಾಗ 130 ಕೋಟಿ ಜನರೂ ಒಗ್ಗೂಡಿರುವುದನ್ನು ದನಿ ಎತ್ತಬೇಕು. ಆಗ ಮಾತ್ರ ಜಾಗತಿಕವಾಗಿ ಭಾರತ ಮತ್ತಷ್ಟು ಬೆಳೆಯಲು ಸಾಧ್ಯವಾಗುತ್ತದೆ. ಈ ಸಂಗತಿಯನ್ನು ಪ್ರತಿಯೊಬ್ಬ ಭಾರತೀಯರು ಮನವರಿಕೆ ಮಾಡಿಕೊಳ್ಳಬೇಕು. ವ್ಯಾಪಾರಕ್ಕೆ ಬಂದಿದ್ದವರು ಇಡೀ ದೇಶವನ್ನೇ ಆಳಿದರಲ್ಲದೆ ಜನರನ್ನು ವಿಭಜಿಸಿದರು. ಆದರೆ, ಲಕ್ಷಾಂತರ ಜನರ ತ್ಯಾಗ ಬಲಿದಾನ, ಪರಿಶ್ರಮದಿಂದ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದೆ. ಪ್ರತಿಯೊಬ್ಬರೂ ಆ ಸ್ವಾತಂತ್ರ್ಯ ಸೇನಾನಿಗಳನ್ನು ಸ್ಮರಿಸಿಕೊಳ್ಳಬೇಕು ಎಂದು ನುಡಿದರು.

ಸಮಾರಂಭದಲ್ಲಿ ಗುಂಡ್ಲುಪೇಟೆ ಶಾಸಕ ನಿರಂಜನ್ ಕುಮಾರ್, ಬಿಜೆಪಿ ಮುಖಂಡರಾದ ಎಂ.ರಾಜೇಂದ್ರ, ಎಚ್.ವಿ.ರಾಜೀವ್, ಜೆಎಸ್‌ಎಸ್ ಮಹಾವಿದ್ಯಾ ಪೀಠದ ಕಾರ್ಯದರ್ಶಿ ಎಸ್.ಪಿ.ಮಂಜುನಾಥ್, ಮುಖ್ಯ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ ಮತ್ತಿತರರು ಉಪಸ್ಥಿತರಿದ್ದರು.

ಇಂದಿನಿಂದ ಬೆಂಗಳೂರು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಹಾರಾಜ ಟ್ರೋಫಿ ಟಿ–20 ಪಂದ್ಯಾವಳಿ



ಮೈಸೂರು,ಆ.16(ಎಂಕೆ)–ಮೈಸೂರಿನ ಮಾನಸಗಂಗೋತ್ರಿಯಲ್ಲಿರುವ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರಿಕೆಟ್ ಅಂಗಳದಲ್ಲಿ ನಡೆದ 'ಮಹಾರಾಜ ಟ್ರೋಫಿ' ಕೆಎಸ್‌ಸಿಎ ಟಿ20 ಪಂದ್ಯಾವಳಿ'ಯ ಮೊದಲ ಹಂತದ ಪಂದ್ಯಗಳಿಗೆ ತೆರೆಬಿದ್ದಿದ್ದು, 2ನೇ ಹಂತದ ಪಂದ್ಯಗಳು ನಾಳೆ(ಆ.17)ಯಿಂದ ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿವೆ.

ಮೈಸೂರಿನಲ್ಲಿ ಕಡೆಯ ದಿನವಾದ ಸೋಮವಾರ(ಆ.15) ನಡೆದ ಪಂದ್ಯಗಳಲ್ಲಿ ಗುಲ್ಬರ್ಗಾ ಮೈಸ್ಟಿಕ್ಸ್ ವಿರುದ್ಧ ಹುಬ್ಬಳ್ಳಿ ಟೈಗರ್ಸ್ 5 ವಿಕೆಟ್‌ಗಳ ಭರ್ಜರಿ ಜಯ ಗಳಿಸಿದರೆ, ಮಂಗಳೂರು ಯುನೈಟೆಡ್ ವಿರುದ್ಧ ಬೆಂಗಳೂರು ಬ್ಲಾಸ್ಟರ್ಸ್ 66 ರನ್‌ಗಳ ಗೆಲುವು ಸಾಧಿಸುವ ಮೂಲಕ ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದುಕೊಂಡಿದೆ.

ಬ್ಯಾಟಿಂಗ್, ಬೌಲಿಂಗ್ ಅಬ್ಬರ: ಲೀಗ್ ಹಂತದಲ್ಲಿ 6 ತಂಡಗಳು ಅತ್ಯುತ್ತಮ ಪ್ರದರ್ಶನ ನೀಡಿದ್ದು, ಗುಲ್ಬರ್ಗಾ ಮೈಸ್ಟಿಕ್ಸ್‌ನ ಯುವ ಆಟಗಾರ ರೋಹನ್ ಪಾಟೀಲ್ ಮೊದಲ ಶತಕ(ಮೈಸೂರು ವಾರಿಯರ್ಸ್ ವಿರುದ್ಧ ಅಜೇಯ 112) ದಾಖಲಿಸಿದರೆ, ಬೆಂಗಳೂರು ಬ್ಲಾಸ್ಟರ್ಸ್‌ನ ನಾಯಕ ಮಯಾಂಕ್ ಅಗರ್ವಾಲ್(ಶಿವಮೊಗ್ಗ ಸ್ಟ್ರೈಕರ್ಸ್ ವಿರುದ್ಧ ಅಜೇಯ 102) 2 ಶತಕ ಸಿಡಿಸಿದ್ದಾರೆ. ಬೌಲರ್‌ಗಳ ಪೈಕಿ ಶಿವಮೊಗ್ಗ ಸ್ಟ್ರೈಕರ್ಸ್ ತಂಡದ ಡಿ.ಅವಿನಾಶ್ 5 ವಿಕೆಟ್ ಪಡೆದ ಸಾಧನೆ ಮಾಡಿದ್ದಾರೆ.

ಅಗ್ರಸ್ಥಾನದಲ್ಲಿ ಬೆಂಗಳೂರು: ಅನುಭವಿ ಆಟಗಾರ ಮಯಾಂಕ್ ಅಗರ್ವಾಲ್ ನೇತೃತ್ವದ ಬೆಂಗಳೂರು ಬ್ಲಾಸ್ಟರ್ಸ್ 6 ಪಂದ್ಯಗಳ ಪೈಕಿ 4 ಪಂದ್ಯಗಳಲ್ಲಿ ಜಯ ಸಾಧಿಸುವ ಮೂಲಕ 8 ಅಂಕಗಳೊಂದಿಗೆ ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದುಕೊಂಡಿದೆ. ಆರ್.ಸಮರ್ಥ್ ನಾಯಕತ್ವದ ಮಂಗಳೂರು ಯುನೈಟೆಡ್ ತಂಡ 8 ಅಂಕಗಳೊಂದಿಗೆ ರನ್‌ರೇಟ್ ಆಧಾರದ ಮೇಲೆ 2 ನೇ ಸ್ಥಾನದಲ್ಲಿದ್ದರೆ, ಕರುಣ್ ನಾಯರ್ ನೇತೃತ್ವದ ನೆಚ್ಚಿನ ಮೈಸೂರು ವಾರಿಯರ್ಸ್ ಟೂರ್ನಿಯಲ್ಲಿ 3 ಗೆಲುವು ಮತ್ತು 3 ಪಂದ್ಯಗಳಲ್ಲಿ ಸೋಲು ಕಾಣುವ ಮೂಲಕ 3ನೇ ಸ್ಥಾನದಲ್ಲಿದೆ. ನಂತರ ಸ್ಥಾನಗಳಲ್ಲಿ ಗುಲ್ಬರ್ಗಾ ಮೈಸ್ಟಿಕ್ಸ್ 4, ಹುಬ್ಬಳ್ಳಿ ಟೈಗರ್ಸ್ 5 ಮತ್ತು ಶಿವಮೊಗ್ಗ ಸ್ಟ್ರೈಕರ್ಸ್ 6ನೇ ಸ್ಥಾನ ಪಡೆದಿವೆ.

2ನೇ ಹಂತದ ಪಂದ್ಯಗಳು: 'ಮಹಾರಾಜ ಟ್ರೋಫಿ' ಕೆಎಸ್‌ಸಿಎ ಟಿ20 ಪಂದ್ಯಾವಳಿ'ಯ 2 ಹಂತದ ಪಂದ್ಯಗಳು ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರಿಕೆಟ್ ಮೈದಾನದಲ್ಲಿ ಆ.17ರಿಂದ ಆ.26ರವರೆಗೆ ನಡೆಯಲಿವೆ. ಆ.22ರವರೆಗೆ ಲೀಗ್ ಹಂತದ ಪಂದ್ಯಗಳು ನಡೆದರೆ, ಆ.23ರಂದು ಎಲಿಮಿನೇಟರ್ ಮತ್ತು ಕ್ವಾಲಿಫೈಯರ್–1 ಪಂದ್ಯ ನಡೆಯಲಿದೆ. ಆ.25ರಂದು ಕ್ವಾಲಿಫೈಯರ್–2 ಪಂದ್ಯ ನಡೆದರೆ, ಆ.26ರಂದು ಸಂಜೆ 7 ಗಂಟೆಗೆ ಫೈನಲ್ ಪಂದ್ಯ ನಡೆಯಲಿದೆ.

ಇಂದಿನ ಪಂದ್ಯಗಳು

ಸಮಯ ಮಧ್ಯಾಹ್ನ 3ಕ್ಕೆ
ಮಂಗಳೂರು ಯುನೈಟೆಡ್/ ಮೈಸೂರು ವಾರಿಯರ್ಸ್

ಸಂಜೆ 7ಕ್ಕೆ
ಶಿವಮೊಗ್ಗ ಸ್ಟ್ರೈಕರ್ಸ್/ ಬೆಂಗಳೂರು ಬ್ಲಾಸ್ಟರ್ಸ್

ಸೈಬರ್ ಅಪರಾಧ: ಓರ್ವನ ಸೆರೆ, ನಗದು ಸೇರಿ 17.41 ಲಕ್ಷ ರೂ. ಮೌಲ್ಯದ ವಸ್ತು ವಶ



ಮೈಸೂರು, ಆ.16(ಆರ್‌ಕೆ)–ಸೈಬರ್ ಅಪರಾಧ ಪ್ರಕರಣಕ್ಕೆ ಸಂಬಂಧಿಸಿದಂತೆ ಓರ್ವನನ್ನು ಬಂಧಿಸಿರುವ ಸೆನ್ ಪೊಲೀಸ್ ಠಾಣೆ ಅಧಿಕಾರಿಗಳು, 15.05 ಲಕ್ಷ ರೂ. ನಗದು ಸೇರಿದಂತೆ ಒಟ್ಟು 17,41,000 ರೂ. ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

2020ರ ನವೆಂಬರ್ 1 ರಿಂದ ಡಿಸೆಂಬರ್ 24ರವರೆಗೆ ಯುವಕನೋರ್ವ (ಆ ವೇಳೆ ಅಪ್ರಾಪ್ತನಾಗಿದ್ದ) ವ್ಯಕ್ತಿಯೊಬ್ಬರ ಹೆಚ್‌ಡಿಎಫ್‌ಸಿ ಬ್ಯಾಂಕ್ ಖಾತೆಯ ಡೆಬಿಟ್ ಕಾರ್ಡ್ ನಂಬರ್‌ನಲ್ಲಿ 21,02,041 ರೂ. ಹಣವನ್ನು ಖಾತೆದಾರರ ಗಮನಕ್ಕೆ ಬಾರದೆ ವರ್ಗಾವಣೆ ಮಾಡಿರುವ ಬಗ್ಗೆ ಸೈಬರ್ ಪೊಲೀಸ್ ಠಾಣೆಯಲ್ಲಿದೂರು ದಾಖಲಾಗಿತ್ತು.

ತನಿಖೆ ಕೈಗೊಂಡಿದ್ದ ಪೊಲೀಸರು, ತಂತ್ರಜ್ಞಾನದ ನೆರವಿನಿಂದ ಆರೋಪಿಯು ವಸ್ತುಗಳನ್ನು ಖರೀದಿಸಿದ್ದ ಕಂಪನಿಯಿಂದ ಮಾಹಿತಿ ಪಡೆದು 2022ರ ಆಗಸ್ಟ್ 14 ರಂದು ಆರೋಪಿಯನ್ನು ಬಂಧಿಸಿದ್ದಾರೆ. ಆತ ದೂರುದಾರರಿಗೆ ಪರಿಚಯಸ್ಥನಾಗಿದ್ದು, ಅವರ ಡೆಬಿಟ್ ಕಾರ್ಡ್ ಮತ್ತು ಸಿವಿವಿ ನಂಬರ್ ತಿಳಿದುಕೊಂಡು ಅಮೆಜಾನ್‌ನಲ್ಲಿ 20 ಲಕ್ಷ ರೂ. ಬೆಲೆಬಾಳುವ ಚಿನ್ನದ ನಾಣ್ಯಗಳು ಮತ್ತು ಇತರ ವಸ್ತುಗಳನ್ನು ಖರೀದಿಸಿದ್ದ ಎಂಬುದು ವಿಚಾರಣೆ ವೇಳೆ ತಿಳಿಯಿತು. ಚಿನ್ನವನ್ನು ಮಾರಾಟ ಮಾಡಿದ 15,05,000 ರೂ. ನಗದು, 2,16,000 ರೂ. ಬೆಲೆಬಾಳುವ 2 ಕ್ಯಾಮರಾ, ಟಿವಿ, ಕ್ಯಾಮರಾ ಲೆನ್ಸ್, ಟ್ರೆಡ್‌ಮಿಲ್, ಸ್ಪೀಕರ್, ಯುಪಿಎಸ್‌ಗಳು ಹಾಗೂ 4 ಗ್ರಾಂ ಚಿನ್ನದ ಸರ ಸೇರಿ ಒಟ್ಟು 17,41,000 ರೂ. ಬೆಲೆಬಾಳುವ ವಸ್ತುಗಳನ್ನು ಪೊಲೀಸರು ಬಂಧಿತ ಆರೋಪಿಯಿಂದ ವಶಪಡಿಸಿಕೊಂಡಿದ್ದಾರೆ.

ಡಿಸಿಪಿ ಪ್ರದೀಪ್ ಗುಂಟಿ ನಿರ್ದೇಶನದಂತೆ ದೇವರಾಜ ಉಪ ವಿಭಾಗದ ಎಸಿಪಿ ಎಂ.ಎನ್.ಶಶಿಧರ್ ಮಾರ್ಗದರ್ಶನದಂತೆ ಸೈಬರ್ ಕ್ರೈಂ ಠಾಣೆ ಇನ್ಸ್‌ಪೆಕ್ಟರ್ ಎನ್.ಜಯಕುಮಾರ್, ಸಬ್‌ಇನ್ಸ್‌ಪೆಕ್ಟರ್‌ಗಳಾದ ಎನ್.ಅನಿಲ್‌ಕುಮಾರ್, ಎಂ.ಎಲ್.ಸಿದ್ದೇಶ್, ಎಎಸ್‌ಐಗಳಾದ ಸುಭಾಷ್‌ಚಂದ್ರ, ನಾಗೇಂದ್ರ, ಭಾಷಾ ಹಾಗೂ ಸಿಬ್ಬಂದಿ ಪತ್ತೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು. ಈ ಪತ್ತೆ ಕಾರ್ಯವನ್ನು ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಪ್ರಶಂಸಿಸಿದ್ದಾರೆ.

ಅರ್ಜಿ ಆಹ್ವಾನ

ಮೈಸೂರು: ನಾಡಹಬ್ಬ ಮೈಸೂರು ದಸರಾ ಮಹೋತ್ಸವ 2022–ಸಾಂಸ್ಕೃತಿಕ ಉಪಸಮಿತಿ ವತಿಯಿಂದ ದಸರಾ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸುವ ಸಲುವಾಗಿ ಸೆ.26ರಿಂದ ಅ.4ರವರೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅರಮನೆ ಹಾಗೂ ವಿವಿಧ ವೇದಿಕೆಗಳಲ್ಲಿ ಆಯೋಜಿಸಲಾಗಿದೆ. ಸಾಂಸ್ಕೃತಿಕ ಕಾರ್ಯಕ್ರಮ ನೀಡಲು ಕಲಾವಿದರಿಂದ ಅರ್ಜಿ ಆಹ್ವಾನಿಸಿದ್ದು, ಆಗಸ್ಟ್ 22ರೊಳಗಾಗಿ ಸಹಾಯಕ ನಿರ್ದೇಶಕರ ಕಚೇರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಲಾಮಂದಿರ, ಇಲ್ಲಿಗೆ ಅರ್ಜಿ ಸಲ್ಲಿಸಬಹುದಾಗಿದೆ ಹೆಚ್ಚಿನ ಮಾಹಿತಿಗಾಗಿ ದೂ.ಸಂಖ್ಯೆ: 0821–2513225 ಸಂಪರ್ಕಿಸಬಹುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯುವಶಕ್ತಿ ಸ್ವಾತಂತ್ರ್ಯದ ಬಗ್ಗೆ ಸದಾ ಎಚ್ಚರಿಕೆ ವಹಿಸಬೇಕು

ವಿಧಾನಪರಿಷತ್ ಸದಸ್ಯ ಮಂಜೇಗೌಡ ಕಿವಿಮಾತು



ಮೈಸೂರು,ಆ.16(ಎಸ್‌ಬಿಡಿ)– ಯುವ ಸಮುದಾಯದಲ್ಲಿ ದೇಶಭಕ್ತಿ ಸದಾ ಜಾಗೃತವಾಗಿರಬೇಕು ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಹೇಳಿದರು.

ಮೈಸೂರಿನ ಮಹದೇವಪುರದಲ್ಲಿರುವ ಸಿಎನ್‌ಎಂ ಪಬ್ಲಿಕ್ ಶಾಲೆಯಲ್ಲಿ ಸ್ವಾತಂತ್ರ್ಯ ಅಮೃತ ಮಹೋತ್ಸವದ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ಆಧುನಿಕ ಯುಗದಲ್ಲಿ ಹಲವು ಕಾರಣಗಳಿಂದ ಯುವ ಸಮುದಾಯದಲ್ಲಿ ದೇಶಪ್ರೇಮ ಕ್ಷೀಣಿಸುತ್ತಿದೆ. ಈ ಬಗ್ಗೆ ಸರ್ಕಾರ ಗಮನಹರಿಸಿ, ಒಳ್ಳೆಯ ರೀತಿಯಲ್ಲಿ ದೇಶಪ್ರೇಮವನ್ನು ಬಿತ್ತಿ ಬೆಳೆಸಲು ಮುಂದಾಗಬೇಕು ಎಂದು ತಿಳಿಸಿದರು.

ವ್ಯಾಪಾರಕ್ಕೆಂದು ನಮ್ಮ ಭಾರತಕ್ಕೆ ಬಂದ ಬ್ರಿಟಿಷರು ಇಲ್ಲಿಯೇ ಠಿಕಾಣಿ ಹೂಡಿದ್ದಲ್ಲದೆ, ಎರಡು ಶತಮಾನಕ್ಕೂ ಹೆಚ್ಚು ಕಾಲ ಭಾರತೀಯರನ್ನು ದಾಸ್ಯಕ್ಕೆ ದೂಡಿದ್ದರು. ದೇಶದ ಸಂಪತ್ತನ್ನು ಮನಸ್ಸೋಇಚ್ಛೆ ಲೂಟಿ ಹೊಡೆದರು. ಬ್ರಿಟಿಷರ ಕಪಿಮುಷ್ಠಿಯಲ್ಲಿ ಸಿಲುಕಿದ್ದ ದೇಶವನ್ನು ಸ್ವತಂತ್ರಗೊಳಿಸಲು ಅನೇಕ ಮಹನೀಯರು ಹುತಾತ್ಮರಾಗಿದ್ದಾರೆ. ಅವರು ನೆತ್ತರು ಹರಿಸಿ ಹೋರಾಡಿದ ಪ್ರತಿಫಲವಾಗಿ ಇಂದು ನೆಮ್ಮದಿಯಿಂದ ಬದುಕಲು ಸಾಧ್ಯವಾಗಿದೆ. ಸ್ವಾತಂತ್ರ್ಯ ಹೋರಾಟದ ತ್ಯಾಗ–ಬಲಿದಾನದ ಸಂಗತಿಗಳನ್ನು ಯುವ ಸಮುದಾಯ ಅರಿಯಲೇಬೇಕಿದೆ ಎಂದು ಅಭಿಪ್ರಾಯಿಸಿದರು.

ಉದ್ಯೋಗ ಸೃಷ್ಟಿಸುವ ಮೂಲಕ ಯುವಕರ ಗೌರವಯುತ ಬದುಕಿಗೆ ಅವಕಾಶ ಕಲ್ಪಿಸಬೇಕು. ಗೊಂದಲಮಯವಾದ ಅಗ್ನಿಪಥ್ ಯೋಜನೆಯನ್ನು ಕೈಬಿಟ್ಟು ಹಿಂದಿನಂತೆ ನೇರವಾಗಿ ಸೇನೆಗೆ ನೇಮಕಾತಿ ಮಾಡಿಕೊಳ್ಳಬೇಕು. ದೇಶದ ಸೈನಿಕರನ್ನು ಯಾವುದೇ ಕಾರಣಕ್ಕೂ ರಾಜಕೀಯ ಹಿತಾಸಕ್ತಿಗಾಗಿ ದುರ್ಬಳಕೆ ಮಾಡಿಕೊಳ್ಳಬಾರದು. ಧರ್ಮ, ಜಾತಿ ಹೆಸರಿನಲ್ಲಿ ಸಮಾಜದ ಶಾಂತಿ ಕದಡುವ ಕೆಲಸವಾಗಬಾರದು. ಯುವ ಸಮುದಾಯ ದೇಶಕ್ಕಾಗಿ ದುಡಿದ ಮಹನೀಯರ ಆದರ್ಶಗಳನ್ನು ರೂಢಿಸಿಕೊಂಡು, ದೇಶಕ್ಕೆ ಧಕ್ಕೆ ಬಂದಾಗ ಒಗ್ಗಟ್ಟಿನಿಂದ ಹೋರಾಡಲು ಅಣಿಯಾಗಬೇಕೆಂದು ನುಡಿದರು.

ಈ ವೇಳೆ ಶಾಲೆಯ ಮಕ್ಕಳು ಸ್ವಾತಂತ್ರ್ಯ ಹೋರಾಟಗಾರರ ವೇಷಭೂಷಣದೊಂದಿಗೆ ಹೆಜ್ಜೆ ಹಾಕಿ ಗಮನ ಸೆಳೆದರು. ಸಂಸ್ಥೆಯ ಕಾರ್ಯದರ್ಶಿ ಭರತ್ ಮಂಜೇಗೌಡ, ಖಜಾಂಚಿ ಭಾರ್ಗವಿ ಎಂ.ಗೌಡ, ಮುಖ್ಯ ಶಿಕ್ಷಕಿ ಪವಿತ್ರ, ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು ಉಪಸ್ಥಿತರಿದ್ದರು.



ಮೈಸೂರಿನ ಹೆಬ್ಬಾಳು ರಿಂಗ್ ರಸ್ತೆಯಲ್ಲಿರುವ ಬಸವ ಮಾರ್ಗ ಫೌಂಡೇಷನ್ ವತಿಯಿಂದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಪ್ರಯುಕ್ತ ಸೋಮವಾರ ಫೌಂಡೇಷನ್ ಎದುರು ಹಮ್ಮಿಕೊಂಡಿದ್ದ ಜಾಗೃತಿ ಜಾಥಾಗೆ ಫೌಂಡೇಷನ್‌ನ ಅಧ್ಯಕ್ಷ ಎಸ್.ಬಸವರಾಜು ಚಾಲನೆ ನೀಡಿದರು. ಫೌಂಡೇಷನ್‌ನ ಮದ್ಯ ವರ್ಜನ ಕೇಂದ್ರದ ನೂರಕ್ಕೂ ಹೆಚ್ಚು ಮಂದಿ ಶಿಬಿರಾರ್ಥಿಗಳು ಜಾಥಾದುದ್ದಕ್ಕೂ ಮದ್ಯ ಮತ್ತು ಮಾದಕ ವಸ್ತುಗಳಿಂದ ಮುಕ್ತರಾಗುವಂತೆ ಘೋಷಣೆ ಕೂಗಿದರು. ತ್ರಿವರ್ಣ ಧ್ವಜದೊಂದಿಗೆ ಸ್ವಾತಂತ್ರ್ಯ ಯೋಧರು ಹಾಗೂ ಮಹನೀಯರ ಭಾವಚಿತ್ರಗಳನ್ನು ಹಿಡಿದು ಜೈಕಾರ ಕೂಗಿದರು. ಬಡಾವಣೆಯ ಪ್ರಮುಖ ರಸ್ತೆಗಳಲ್ಲಿ ಜಾಥಾ ಸಂಚರಿಸಿತು. ಕೇಂದ್ರದ ಆಪ್ತ ಸಮಾಲೋಚಕ ಮಹೇಶ್, ಸಿಬ್ಬಂದಿಯಾದ ಆನಂದ್, ತರುಣ್, ಮಂಜುನಾಥ್ ಮತ್ತಿತರರು ಪಾಲ್ಗೊಂಡಿದ್ದರು.

ವಿವೇಕ ಸ್ಮಾರಕದೊಂದಿಗೆ ಎನ್‌ಟಿಎಂ ಶಾಲೆ ಪುನರ್ ನಿರ್ಮಾಣಕ್ಕೆ ಆಗ್ರಹಿಸಿ ಪ್ರತಿಭಟನೆ



ಮೈಸೂರು,ಆ.16(ಪಿಎಂ)–ಒಪ್ಪಂದದಂತೆ ವಿವೇಕ ಸ್ಮಾರಕದೊಂದಿಗೆ ಎನ್‌ಟಿಎಂ ಶಾಲೆಯೂ ನಿರ್ಮಾಣ ಆಗಬೇಕು ಎಂದು ಒತ್ತಾಯಿಸಿ ಮಹಾರಾಣಿ (ಎನ್‌ಟಿಎಂ) ಶಾಲೆ ಉಳಿಸಿ ಹೋರಾಟ ಒಕ್ಕೂಟದ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಗನ್‌ಹೌಸ್ ವೃತ್ತದ ಸಮೀಪದ ಉದ್ಯಾನವನದಲ್ಲಿನ ಕುವೆಂಪು ಪ್ರತಿಮೆ ಬಳಿ ಜಮಾಯಿಸಿದ ಪ್ರತಿಭಟನಾಕಾರರು, ಸುತ್ತೂರು ಮಠದಲ್ಲಿ ಸುತ್ತೂರು ಶ್ರೀಗಳ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ರಾಮಕೃಷ್ಣ ಆಶ್ರಮ ಮತ್ತು ಶಾಲೆ ಪರ ಹೋರಾಟಗಾರರು, ಎರಡೂ ಕಡೆಯವರು ಭಾಗವಹಿಸಿ, ಶಾಲೆ ಮತ್ತು ವಿವೇಕ ಸ್ಮಾರಕ ಎರಡೂ ಆಗಲಿ ಎಂಬ ಚರ್ಚೆ ನಡೆದಿತ್ತು. ಅಂತಿಮವಾಗಿ ಸಂಸದ ವಿ.ಶ್ರೀನಿವಾಸಪ್ರಸಾದರ ನಿವಾಸದಲ್ಲಿ ಅವರ ಮಧ್ಯಸ್ಥಿಕೆಯಲ್ಲಿ ನಡೆದ ಸಭೆಯಲ್ಲಿ ಎರಡೂ ಕಡೆಯವರು ಚರ್ಚಿಸಿದ ನಂತರ ಶಾಲೆ, ಸ್ಮಾರಕ ಎರಡೂ ಇರಲು ಒಪ್ಪಂದ ಆಗಿತ್ತು. ಅದರಂತೆ ಮಾತಿಗೆ ತಪ್ಪದೆ ಶಾಲೆಯಿದ್ದ ಅರ್ಧ ಜಾಗದಲ್ಲಿ ಹೊಸ ಶಾಲೆ ನಿರ್ಮಿಸಿಕೊಡಬೇಕು ಎಂದು ಒತ್ತಾಯಿಸಿದರು. ಒಕ್ಕೂಟದ ಮುಖಂಡ ಮೋಹನ್‌ಕುಮಾರ್‌ಗೌಡ, ಮಾಜಿ ಮೇಯರ್ ಪುರುಷೋತ್ತಮ್, ರಾಜ್ಯ ರೈತ ಸಂಘದ ಮುಖಂಡ ಪಿ.ಮರಂಕಯ್ಯ, ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಬಾಲಕೃಷ್ಣ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಮೈಸೂರಿನ ಹೂಟಗಳ್ಳಿ ಶ್ರೀರಾಮ ಸಂಘಟನೆಯಿಂದ ಸ್ವಾತಂತ್ರ್ಯ ಅಮೃತ ಮಹೋತ್ಸವ ದಿನ ಆಚರಿಸಲಾಯಿತು. ಸಂಘಟನೆ ಸದಸ್ಯರು ಈ ವೇಳೆ ಇದ್ದರು.

ಪ್ರದೀಪ್‌ಕುಮಾರ್‌ಗೆ ಪಿಹೆಚ್.ಡಿ

ಮೈಸೂರು: ಡಾ.ಜಿ.ಮಲ್ಲೇಶ್ ಮಾರ್ಗದರ್ಶನದಲ್ಲಿ ವಿ.ಜಿ.ಪ್ರದೀಪ್‌ಕುಮಾರ್ ಫೈನೈಟ್ ಎಲಿಮೆಂಟ್ ಮಾಡೆಲಿಂಗ್ ಮತ್ತು ಸ್ಟ್ರೆಸ್ ಅನಾಲಿಸಿಸ್ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಬುಡಸಹಿತ ಉರುಳಿಬಿದ್ದ ಗುಲ್‌ಮೊಹರ್ ಮರ: ಅದೃಷ್ಟವಶಾತ್ ಹೆಚ್ಚಿನ ಹಾನಿ ಇಲ್ಲ





ಮೈಸೂರು,ಆ.16(ಎಸ್‌ಬಿಡಿ)– ಮೈಸೂರಿನಲ್ಲಿ ಗುಲ್‌ಮೊಹರ್ ಮರವೊಂದು ಬುಡ ಸಮೇತ ರಸ್ತೆಗೆ ಉರುಳಿ ಬಿದ್ದಿದ್ದು, ಅದೃಷ್ಟವಶಾತ್ ಸಾವು–ನೋವು ಸಂಭವಿಸಿಲ್ಲ.

ನಗರದ ನಾರಾಯಣಶಾಸ್ತ್ರಿ ರಸ್ತೆ ಶ್ರೀ ಮಹದೇಶ್ವರಸ್ವಾಮಿ ದೇವಾಲಯದ ಬಳಿಯಿದ್ದ ಗುಲ್‌ಮೊಹರ್ ಮರ ಮಂಗಳವಾರ ಸಂಜೆ ಸುಮಾರು 5.30ರ ವೇಳೆಯಲ್ಲಿ ಬುಡ ಸಮೇತ ರಸ್ತೆ ಅಡ್ಡಲಾಗಿ ಉರುಳಿ ಬಿದ್ದಿದೆ. ಈ ವೇಳೆ ಮರದ ದೊಡ್ಡ ಕೊಂಬೆಗಳು ಅಪ್ಪಳಿಸಿದ್ದರಿಂದ ಎದುರು ಬದಿಯಲ್ಲಿ ಪಾರ್ಕಿಂಗ್ ಮಾಡಿದ್ದ ಸ್ಕೂಟರ್ ಸಂಪೂರ್ಣ ನಜ್ಜುಗುಜ್ಜಾಗಿದ್ದು ಒಂದು ಆಟೋಗೆ ಹಾನಿಯಾಗಿದೆ. ವಿದ್ಯುತ್ ತಂತಿಗೆ ಕೊಂಬೆ ಬಡಿದು ಕಂಬವೊಂದು ಮುರಿದು ವಾಲಿದೆ.

ಸಾರ್ವಜನಿಕರು ನಗರಪಾಲಿಕೆ ಕಂಟ್ರೋಲ್‌ಗೆ ಕರೆ ಮಾಡಿ ವಿಷಯ ತಿಳಿಸಿದ ನಂತರ 'ಅಭಯ ತಂಡ–2' ಸ್ಥಳಕ್ಕಾಗಮಿಸಿ, ತೆರವು ಕಾರ್ಯಾಚರಣೆ ಆರಂಭಿಸಿತು. ತಂಡದ ಶಿವು, ರಘು, ಅಣ್ಣಪ್ಪ, ರವಿ ಹಾಗೂ ರಂಗ ರಸ್ತೆಗೆ ಅಡ್ಡಲಾಗಿ ಬಿದ್ದಿದ್ದ ಕೊಂಬೆಗಳನ್ನು ಕ್ಷಿಪ್ರವಾಗಿ ತೆರವು ಮಾಡಿ, ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಸಂಚಾರ ಪೊಲೀಸರು ಸ್ಥಳದಲ್ಲಿದ್ದು, ವಾಹನ ಸಂಚಾರ ನಿರ್ವಹಣೆ ಮಾಡಿದರು.

ಸದ್ಯ ಅನಾಹುತವಾಗಿಲ್ಲ: ನಾರಾಯಣ ಶಾಸ್ತ್ರಿ ರಸ್ತೆಯಲ್ಲಿ ಸದಾ ವಾಹನ ದಟ್ಟಣೆ ಇರುತ್ತದೆ. ದೇವಾಲಯ, ಪುಸ್ತಕ ಮಳಿಗೆ, ಹೋಟೆಲ್, ಮೆಡಿಕಲ್ಸ್, ಗ್ಯಾರೇಜ್, ಜುವೆಲರ್ಸ್ ಸೇರಿದಂತೆ ಎಲ್ಲಾ ರೀತಿಯ ವ್ಯಾಪಾರದ ಮಳಿಗೆಗಳಿವೆ. ಹಾಗಾಗಿ ಪಾದಚಾರಿಗಳು ಹೆಚ್ಚಾಗಿರುತ್ತಾರೆ. ಅದೃಷ್ಟವಶಾತ್ ಇಂದು ಮರ ಉರುಳಿ ಬಿದ್ದ ಸ್ಥಳದಲ್ಲಿ ಯಾರೂ ಇರಲಿಲ್ಲ. ಸಂಚರಿಸುವ ವಾಹನಗಳ ಮೇಲೆ ಬಿದ್ದಿದ್ದರೆ ಸಾವು–ನೋವು ಸಂಭವಿಸುತ್ತಿತ್ತು ಎಂದು ಪ್ರತ್ಯಕ್ಷದರ್ಶಿಗಳು ಆತಂಕ ವ್ಯಕ್ತಪಡಿಸಿದರು.

ಬರೀ ಘೋಷಣೆ: ಮೈಸೂರಲ್ಲಿ ಗಾಳಿ–ಮಳೆಗೆ ಮರಗಳು ಉರುಳುವುದು, ಕೊಂಬೆಗಳು ಮುರಿದು ಬೀಳುವುದು ಸಹಜ ಎನ್ನುವಂತಾಗಿದೆ. ರಸ್ತೆ ಇಕ್ಕೆಲಗಳಲ್ಲಿರುವ ಮರಗಳ ಸುತ್ತ ಡಾಂಬರು ಹಾಕಿರುವುದು ಮತ್ತಿತರ ಕಾರಣಗಳಿಂದ ಅವು ನಿಶ್ಶಕ್ತವಾಗಿವೆ. ಹಸಿರಿನಿಂದ ಕಂಗೊಳಿಸುವಂತೆ ಕಂಡರೂ ಬುಡ ಹಾಳಾಗಿರುತ್ತದೆ. ಈ ರೀತಿಯ ಅಶಕ್ತ ಮರಗಳನ್ನು ಗುರುತಿಸಿ, ಅರಣ್ಯ ಇಲಾಖೆ ಸಮನ್ವಯತೆಯೊಂದಿಗೆ ಅವುಗಳನ್ನು ತೆರವು ಮಾಡುವುದಾಗಿ ಮೈಸೂರು ನಗರಪಾಲಿಕೆ ತಿಳಿಸಿತ್ತು. ಆದರೆ ಅದು ಬರೀ ಘೋಷಣೆಯಾಗಿ ಉಳಿದಿದೆ. ಮೊದಲ ಹಂತದಲ್ಲಿ ಹೆಚ್ಚು ವಾಹನ ಸಂಚಾರವಿರುವ ರಸ್ತೆಗಳಲ್ಲಿರುವ ಈ ಕಾರ್ಯಾಚರಣೆ ನಡೆಸಬೇಕಿತ್ತು. ದಸರಾ ಸಮೀಪಿಸುತ್ತಿದ್ದು ಈಗಲಾದರೂ ಈ ಬಗ್ಗೆ ಗಮನಹರಿಸಿ ಅನಾಹುತ ಆಗದಂತೆ ಮುನ್ನೆಚ್ಚರಿಕೆ ವಹಿಸಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಗುಂಡ : "ಎಂಟನೇ ತರಗತಿಯ ಗಣಿತ ಪುಸ್ತಕ ಕೊಡಿ"
ಪುಸ್ತಕ ವ್ಯಾಪಾರಿ : "ಇಲ್ಲ ಸಾರ್, ಅದು ಮಾರಾಟವಾಗಿ ಹೋಗಿದೆ"
ಗುಂಡ : "ಹಾಗಾದರೆ ನಾಲ್ಕನೇ ತರಗತಿಯ ಎರಡು ಪುಸ್ತಕ ಕೊಡಿ"

ಮೈಸೂರು ಮಿತ್ರ
ಬುಧವಾರ, 17 ಆಗಸ್ಟ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಶಾಂತಿಯಿಂದ ಸಂಪಾದಿಸಬಹುದಾದ ವಿಜಯ, ಸಂಗ್ರಾಮದಿಂದ ಸಾಧಿಸಬಹುದಾದುದಕ್ಕಿಂತ ಕಡಿಮೆಯದ್ದೇನಲ್ಲ. –ಜಾನ್ ಮಿಲ್ಟನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಹತ್ತು ಆಡಬಹುದು, ಒಂದು ಬರೆಯಲಾಗದು

ನಿಮ್ಮ ಪತ್ರಗಳು

ದಪ್ಪ ಚರ್ಮದ ಅಧಿಕಾರಿಗಳೇ ಗಮನಿಸಿ...

ಮಾನ್ಯರೆ,

ಈ ಹಿಂದೆ ಯಾವುದೇ ಇಲಾಖೆ, ಯಾವುದೇ ಕಛೇರಿ ಕಾರ್ಯವೈಖರಿ, ವಿಳಂಬ ನೀತಿ, ಭ್ರಷ್ಟಚಾರ, ಕಳಪೆ ಕಾಮಗಾರಿ, ಜನಸ್ಪಂದನೆ, ಕಾನೂನುಬಾಹಿರ ಕ್ರಮ, ಬೇಡಿಕೆಗಳು, ಅಹವಾಲುಗಳ ಬಗ್ಗೆ ಮಾಧ್ಯಮಗಳಲ್ಲಿ ಬಂದರೆ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಜಾಗೃತರಾಗಿ ಸ್ಪಂದಿಸಿ ಮತ್ತೊಮ್ಮೆ ಮಾಧ್ಯಮಗಳಲ್ಲಿ ತಮ್ಮ ಇಲಾಖೆ ಬಗ್ಗೆಯಾಗಲಿ, ಕಚೇರಿ ಬಗ್ಗೆಯಾಗಲಿ ಬರದಂತೆ ಎಚ್ಚರವಹಿಸುತ್ತಿದ್ದರು. ಪ್ರಸ್ತುತ ವ್ಯವಸ್ಥೆಯಲ್ಲಿ ಮಾಧ್ಯಮಗಳಲ್ಲಿ ಬಂದರೂ ಕೆಲವು ಅಧಿಕಾರಿಗಳು ತಲೆಕೆಡಿಸಿಕೊಳ್ಳುವುದೇ ಇಲ್ಲ. ಪತ್ರಿಕೆಯಲ್ಲಿ ಬರೆಯುತ್ತಾರಾ ಬರೆಯಲಿ. ನಮ್ಮನ್ನು ಯಾರು ಏನು ಮಾಡಲಾಗುವುದಿಲ್ಲ. ಎಲ್ಲಾ ವ್ಯವಸ್ಥೆ ಮಾಡಿಕೊಂಡೆ ನಾನು ಇಲ್ಲಿ ಬಂದು ಕೂತಿದ್ದೇನೆ ಎಂದು ಅಚಲವಾಗಿ ನಂಬಿದಂತಿದೆ. ಇಂದಿನ ವ್ಯವಸ್ಥೆಯು ಅದಕ್ಕೆ ಹೊರತಾಗಿಲ್ಲ. ಮಾಧ್ಯಮಗಳಲ್ಲಿನ ಬರಹಕ್ಕೆ ಸ್ಪಂದಿಸುವ ಸೂಕ್ಷ್ಮ, ಪ್ರಾಮಾಣಿಕ, ಶಿಸ್ತಿನ ಅಧಿಕಾರಿಗಳು ಇದ್ದಾರೆ. ಇಂತವರನ್ನು ದುರ್ಬಿನ್ ಹಾಕಿ ಹುಡುಕಬೇಕು. ಪ್ರಸ್ತುತ ವ್ಯವಸ್ಥೆಗೆ ದಕ್ಷ, ಪ್ರಾಮಾಣಿಕ ಶಿಸ್ತಿನ ಸೂಕ್ಷ್ಮ ಸಂವೇದನೆಯ ಅಧಿಕಾರಿಗಳು ಆಳುವವರಿಗೆ ಬೇಕಿಲ್ಲ. ಅವರ ತಾಳಕ್ಕೆ ತಕ್ಕಂತೆ ಕುಣಿಯುವಂತವರು ಬೇಕು. ದಕ್ಷ, ಪ್ರಾಮಾಣಿಕ, ಶಿಸ್ತಿನ ಅಧಿಕಾರಿಯನ್ನು ಆಡಳಿತ ವ್ಯವಸ್ಥೆಯೇ ಮೂಲೆಗುಂಪು ಮಾಡಿ ಬಿಡುತ್ತಿದೆ.

ಯಾವುದೇ ಪತ್ರಿಕೆಯ ಜೀವಾಳ ಸಂಪಾದಕೀಯ ನಂತರದ ಸ್ಥಾನ "ನಿಮ್ಮ ಪತ್ರಗಳು" ಎಂಬ ಕುಂದುಕೊರತೆ ವಿಭಾಗ. ಆ ಕಾರಣಕ್ಕಾಗಿಯೇ ಈ ಎರಡು ಭಾಗಗಳನ್ನು ಅಕ್ಕ – ಪಕ್ಕ ಪ್ರಕಟಿಸಲಾಗುತ್ತದೆ. ಇದು ಪತ್ರಿಕಾ ಮಾಧ್ಯಮದ ಕ್ರಮ. ಪ್ರತಿಯೊಬ್ಬ ಜನನಾಯಕ ಎನಿಸಿಕೊಂಡವರು ಅಧಿಕಾರಿ ಎನಿಸಿಕೊಂಡವರು ಅವರಿಗೆ ಕನಿಷ್ಠ ಜ್ಞಾನವಿದ್ದಲ್ಲಿ ಈ ಎರಡನ್ನು ಗಮನಿಸುತ್ತಾರೆ ಮತ್ತು ಆ ಸಮಸ್ಯೆಯನ್ನು ಪರಿಹರಿಸಲು ಅಗತ್ಯ ಕ್ರಮಕೈಗೊಳ್ಳುತ್ತಾರೆ. ಜಡ್ಡು ಹಿಡಿದಿದ್ದಲ್ಲಿ ಅದನ್ನು ನಿರ್ಲಕ್ಷಿಸುತ್ತಾರೆ.

ಈ ಹಿಂದೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕುಂದುಕೊರತೆ ವಿಭಾಗವೇ ಇತ್ತು ಈಗ ಇದೆಯೋ ಇಲ್ಲವೋ ಗೊತ್ತಿಲ್ಲ. ಪತ್ರಿಕೆಗಳಲ್ಲಿ ಬರುವ ಕುಂದುಕೊರತೆ ಬಗ್ಗೆ ಆಯಾ ಇಲಾಖೆಗೆ ಕಳುಹಿಸಿ ಕ್ರಮ ಆಗಿರುವ ಬಗ್ಗೆ ಮಾಹಿತಿ ಪಡೆಯುತ್ತಿದ್ದರು. ಜಿಲ್ಲಾಧಿಕಾರಿಗಳು ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ. ಮೈಸೂರು ನಗರದ ಹೃದಯ ಭಾಗವಾದ ಕೆ.ಆರ್. ಸರ್ಕಲ್, ಸಯ್ಯಾಜಿರಾವ್ ರಸ್ತೆ, ಗಾಂಧಿ ಸರ್ಕಲ್ ಮುಂತಾದ ಕಡೆ ಫುಟ್‌ಪಾತ್ ಅಕ್ರಮಿಸಿಕೊಂಡು ವ್ಯಾಪಾರ ಮಾಡುತ್ತಾರೆ. ಈ ಬಗ್ಗೆ 2 ಬಾರಿ ಮಾಧ್ಯಮಗಳಲ್ಲಿ ಬಂದರೂ ಏನೂ ಕ್ರಮ ಆಗಿಲ್ಲ. ಇನ್ನೂ ಬಡಾವಣೆ ಸಮಸ್ಯೆಗಳ ಬಗ್ಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸಂಬಂಧಿಸಿದಂತೆ ಮಾಧ್ಯಮಗಳಲ್ಲಿ ಬಂದರೂ ಅಲ್ಲಿನ ಜಡ್ಡು ಹಿಡಿದ ವ್ಯವಸ್ಥೆ ಇನ್ನು ಬದಲಾಗಿಲ್ಲ. ವಿಜಯನಗರ 4ನೇ ಹಂತಕ್ಕೆ ಬೀದಿ ದೀಪ ಹಾಕಿಸಿ ಎಂದು ಎ.ಇ.ಇ. ಕೇಳಿದರೆ ಟೆಂಡರ್ ಕರೆದಿಲ್ಲ ಎಂದು ದರ್ಪದಿಂದ ಹೇಳುತ್ತಿದ್ದಾರೆ. ಎ.ಇ.ಇ. ಎಲ್ಲದಕ್ಕೂ ಹಾರಿಕೆ ಉತ್ತರ ನೀಡುತ್ತಾರೆ. ರಸ್ತೆ ಡಾಂಬರೀಕರಣ, ಯುಜಿಡಿ ಇರಬಹುದು ರಸ್ತೆ ಬದಿ ಗಿಡಗಂಟಿಗಳ ತೆಗೆಯುವ ಬಗ್ಗೆ ಇರಬಹುದು. ಕಬಿನಿ ನೀರಂತು ಮರೀಚಿಕೆಯಾಗಿಯೇ ಉಳಿಯಿತು.

ಇನ್ನೂ ಕೆಎಸ್‌ಆರ್‌ಟಿಸಿ ವಿಜಯನಗರ 4ನೇ ಹಂತಕ್ಕೆ ಬಸ್ಸುಗಳ ಬಗ್ಗೆ ಪತ್ರಿಕೆಗಳಲ್ಲಿ ಬಂದರೂ ಇನ್ನೂ ಕ್ರಮ ಕೈಗೊಂಡಿಲ್ಲ. ಯಾವುದೇ ಕಚೇರಿ ಅಧಿಕಾರಿಗಳು ಯಥಾರಾಜಾ ತಥಾಪ್ರಜಾ ಆಗದಂತೆ ಅವರ ಅಧೀನ ಅಧಿಕಾರಿಗಳಿಂದ ಕೆಲಸ ತೆಗೆದು ನಾವಿರುವುದು ಜನ ಸೇವೆಗಾಗಿ ಸಂಬಳ ಗಿಂಬಳಕ್ಕಲ್ಲ ಎಂಬುದನ್ನು ಜಾಗೃತಗೊಳಿಸಬೇಕಾಗಿ ವಿನಂತಿಸುತ್ತೇನೆ.

–ಬಿ.ಜಿ.ರಂಗೇಗೌಡ, ಮೈಸೂರು.

ಲೋಕಾಯುಕ್ತದ ಕೊರಳಿಗೆ ಉರುಳು ಹಾಕಿದ್ದು ಯಾರು?

ಮಾನ್ಯರೆ,

ಸಿದ್ದರಾಮಯ್ಯ ಅವರು ತಮ್ಮ ಅಧಿಕಾರಾವಧಿಯಲ್ಲಿ ಲೋಕಾಯುಕ್ತದ ಕೊರಳಿಗೆ ಉರುಳು ಹಾಕಿಬಿಟ್ಟರು. ಇವರನ್ನು ಮಾಧ್ಯಮಗಳು ಕಪ್ಪು ಚುಕ್ಕೆ ಇಲ್ಲದ ಪ್ರಾಮಾಣಿಕ ರಾಜಕಾರಣಿ ಎನ್ನುತ್ತವೆ. ಆದರೆ ಲೋಕಾಯುಕ್ತವನ್ನು ನಿಷ್ಕ್ರಿಯಗೊಳಿಸಿ ಸರ್ಕಾರ ಮತ್ತು ಅಧಿಕಾರಿಗಳು ಭ್ರಷ್ಟತೆಯಲ್ಲಿ ಮುಳುಗಲು ಪರೋಕ್ಷವಾಗಿ ಸಹಕರಿಸಿದರು ಎಂದರೆ ತಪ್ಪಾಗುವುದಿಲ್ಲ.

ಈಗ ಸಿದ್ದು ಎಸಿಬಿ ಬೇರೆ ರಾಜ್ಯಗಳಲ್ಲೂ ಇದೆ ಎನ್ನುತ್ತಾರೆ. ಆದರೆ ಆ ರಾಜ್ಯಗಳಲ್ಲಿ ಲೋಕಾಯುಕ್ತವನ್ನು ಜೀವಂತ ಶವವಾಗಿಸಿ ಎಸಿಬಿಯನ್ನು ಹುಟ್ಟು ಹಾಕಿದ್ದಾರೆಯೇ ಎಂಬ ಪ್ರಶ್ನೆಗೆ ಉತ್ತರ ಬೇಕಿದೆ. ಎಲ್ಲಾ ವ್ಯವಸ್ಥೆಗೆ ರಾಜಿಯಾಗಿಸಿಕೊಂಡೆ ಆಡಳಿತ ನಡೆಸಿ, ತಮ್ಮ ಪ್ರಣಾಳಿಕೆಯ ಎಲ್ಲಾ ಅಂಶಗಳನ್ನು ಪೂರೈಸಿದ್ದೇವೆ ಎನ್ನುತ್ತಾರೆ. ಭ್ರಷ್ಟಾಚಾರವನ್ನು ಬಿಟ್ಟು ಎಂದು ಮಾತ್ರ ಹೇಳಲಿಲ್ಲ.

ಕಡೆಗೂ ಎಸ್.ಆರ್.ಹಿರೇಮಠ್ ಮತ್ತು ಇತರರ ಹೋರಾಟದಿಂದ ಲೋಕಾಯುಕ್ತ ಮರುಜನ್ಮ ಪಡೆದಿದೆ. ಇದು ಕರ್ನಾಟಕದ ಜನತೆಗೆ ತುಂಬಾ ಸಂತಸ ತಂದಿದೆ. ನ್ಯಾಯಮೂರ್ತಿ ವೆಂಕಟಾಚಲಯ್ಯ ಮತ್ತು ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅವರುಗಳನ್ನು ನೆನಪಿಸುವಂತೆ ಭ್ರಷ್ಟರನ್ನು ಹೆಡೆಮುರಿ ಕಟ್ಟುವ ಅಗತ್ಯವಿದೆ. ಮುಖ್ಯಮಂತ್ರಿ ಬೊಮ್ಮಾಯಿ ಯವರು ಕೂಡಲೇ ಲೋಕಾಯುಕ್ತಕ್ಕೆ ಅಗತ್ಯವಿರುವ ಸ್ವಾತಂತ್ರ್ಯ, ಸಿಬ್ಬಂದಿ ಇನ್ನಿತರ ಎಲ್ಲಾ ಅನುಕೂಲತೆಗಳನ್ನು ಒದಗಿಸಿಕೊಡಬೇಕಿದೆ.

–ಎಂ.ಕೆ.ವಾಸುದೇವರಾಜು, ಮೈಸೂರು

ಧೀರ ಲಕ್ಷಣ

ಮಾನ್ಯರೆ,

ಇಂದಿನ 'ಭ್ರಷ್ಟಾಚಾರ ಯುಗ'ದಲ್ಲಿ, ಸ್ವಾಮಿ ವಿವೇಕಾನಂದರಿಗೆ ಪ್ರಿಯವಾಗಿದ್ದ ಭರ್ತೃ ಹರಿಯ ಈ ಶೋಕವನ್ನು ಪ್ರತಿಯೊಬ್ಬರೂ ಮೆಲುಕು ಹಾಕಬೇಕು:

ನಿಂದಂತು ನೀತಿ ನಿಪುಣಾಃ ಯದಿ ತಾ ಸ್ತುವಂತು
ಲಕ್ಷ್ಮೀಃ ಸಮಾವಿಶತು ಗಚ್ಛತುವಾ ಯಥೇಷ್ಟಮ್
ಅದ್ಯೈವ ವಾ ಮರಣಮಸ್ತು ಯುಗಾಂತರೇ ತೌ
ನ್ಯಾಯ್ಯಾತ್ ಪಥಃ ಪ್ರತಿಚಲಂತಿ ವದಂತ್ಧೀರಾಃ:

(ನೀತಿ ನಿಪುಣರು ತೆಗಳಲಿ ಅಥವಾ ಹೊಗಳಲಿ, ಲಕ್ಷ್ಮೀ ಮನಬಂದಂತೆ ಬರಲಿ ಅಥವಾ ಹೋಗಲಿ, ಸಾವು ಇಂದೇ ಆಗಲಿ ಅಥವಾ ಯುಗಗಳ ಬಳಿಕ ಆಗಲಿ, ಧೀರರು (ಮಾತ್ರ) ನ್ಯಾಯದ–ನೀತಿಯ–ಹಾದಿಯನ್ನು ಬಿಟ್ಟು ಒಂದು ಹೆಜ್ಜೆಯೂ ಸರಿಯುವುದಿಲ್ಲ!) ಎಲ್ಲರೂ ಕಟ್ಟುನಿಟ್ಟಾಗಿ ನ್ಯಾಯಪಥಿಕರಾಗಬೇಕು! (ಈಗ ಇದು ಅತಿ ನಿರೀಕ್ಷೆಯಲ್ಲವೆ?)

ಮಾತು–ಕೃತಿ : ಸ್ವಾಮೀಜಿಯವರ ಈ ಉಕ್ತಿ ಇಂದಿಗೆ ಅತ್ಯಂತ ಪ್ರಸ್ತುತಃ" ಎಳ್ಳಿನಷ್ಟು ಅನುಷ್ಠಾನ ರಾಶಿ ರಾಶಿ ಮಾತಿಗಿಂತ ಮೇಲು"!

–ಸಿಪಿಕೆ, ದತ್ತಪೀಠ ಆಸ್ಥಾನ ವಿದ್ವಾನ್, ಮೈಸೂರು.




ಕೆಬಿಜಿಯವರ

ಭೂಮಂತ್ರ... ಭೂಮಂತ್ರ... ಭೂಮಂತ್ರ...

ನಾನು, ನನ್ನ ದೇಶ, ನನ್ನ ಕಾಯಕ...

ರಂಗಾಯಣದಲ್ಲಿ ನೋಡಿದ ಒಂದು ವಿಶೇಷ ನಾಟಕ





ಆಗಸ್ಟ್ ತಿಂಗಳು 15ನೇ ತಾರೀಖು 1947 ರಂದು ನನ್ನ ದೇಶ ಪರಕೀಯರ ಸುದೀರ್ಘ ಗುಲಾಮಗಿರಿಯಿಂದ ಮುಕ್ತಿಗೊಂಡು ಸ್ವತಂತ್ರ ದೇಶವಾಗುವುದರೊಂದಿಗೆ ನಾನು ಸ್ವಾಭಿಮಾನ, ವ್ಯಕ್ತಿ ಸ್ವಾತಂತ್ರ್ಯವನ್ನು ಪಡೆಯಲು ಸಾಧ್ಯವಾಯಿತು. ಈ ಅಮೃತ ಘಳಿಗೆಯ 75ನೇ ವರ್ಷವನ್ನು ಮೊನ್ನೆ 15 ರಂದು ದೇಶದಾದ್ಯಂತ ಬಹಳ ಸಂಭ್ರಮ ಹಾಗೂ ಉತ್ಸಾಹದಿಂದ ಆಚರಿಸಲಾಯಿತು. ಪ್ರತಿ ಮನೆಯಲ್ಲೂ ನಮ್ಮ ಹೆಮ್ಮೆಯ ತ್ರಿವರ್ಣ ಧ್ವಜ ರಾಷ್ಟ್ರಾದ್ಯಂತ ಹಾರಾಡಲಿ ಎಂಬ ನಮ್ಮ ಪ್ರಧಾನಿ ನರೇಂದ್ರ ಮೋದಿಯವರ ಆಶಯಕ್ಕೆ ಸ್ಪಂದಿಸಿದ ನಾನು ನನ್ನ ದೇಶದ ಸ್ವಾತಂತ್ರ್ಯದ ಸಂಕೇತವೂ, ಶಕ್ತಿಯೂ ಆದ ತ್ರಿವರ್ಣ ಧ್ವಜವನ್ನು ನನ್ನ ಮನೆಯ ಮೇಲೆತ್ತರದಲ್ಲಿ ಹಾರಿಸಿ ನನ್ನ ಈ ಸ್ವತಂತ್ರ, ಸ್ವಾಭಿಮಾನದ ಜೀವನವನ್ನು ಸಾಧುವಾಗಿಸಲು ತಮ್ಮ ಆಸ್ತಿಪಾಸ್ತಿ, ಸರ್ವಸ್ವವನ್ನೂ ತ್ಯಾಗ ಮಾಡಿದ, ಬಲಿದಾನಗೈದ ಲಕ್ಷ ಲಕ್ಷ ದೇಶಭಕ್ತರನ್ನು ಸ್ಮರಿಸಿಕೊಂಡು ಭಾವುಕನಾದೆ. ಹೃದಯ ಪೂರ್ವಕವಾಗಿ ಕೃತಜ್ಞತೆಯನ್ನು ಅರ್ಪಿಸಿದೆ. ಮಾತ್ರವಲ್ಲ ಒಂದು ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ ಪಾಲ್ಗೊಂಡು ರಾಷ್ಟ್ರ ಗೀತೆಯನ್ನು (National Anthem) ಹೆಮ್ಮೆಯಿಂದ ಹಾಡಿದೆ. ಹಾಗೂ ರಾಷ್ಟ್ರದ ಏಕತೆ ಹಾಡು 'ವಂದೇ ಮಾತರಂ' (ಭಾರತ ಮಾತೆಗೆ ವಂದಿಸುವೆ) ಎಂಬ ಸ್ವಲ್ಪ ಸುದೀರ್ಘವಾದ ಹಾಡನ್ನು ಕಿವಿ ಹಾಗೂ ಹೃದಯದಲ್ಲಿ ತುಂಬಿಸಿಕೊಂಡೆ. ಇದು ಆ ದಿನ ನಾನು ನನ್ನನ್ನು ಭಾರತೀಯನಾಗಿ ನಡೆಸಿಕೊಂಡ ರೀತಿ.

ಸ್ವಾತಂತ್ರ್ಯಕ್ಕೆ ಏಳು ವರ್ಷ ಮೊದಲು ಹುಟ್ಟಿದವನಾಗಿ, ಅದರ ಅನುಭವವನ್ನು ನಾನಿದ್ದ ಕೆಂಗೇರಿಯ ಗುರುಕುಲಾಶ್ರಮದಲ್ಲಿ ಪಡೆದಿದ್ದರಿಂದ, ಈ ದಿನ ನನಗಂತೂ ಕುರುಡನಿಗೆ ಕಣ್ಣು ಬಂದಂತಾಯಿತು. ಅಂದು ನಮ್ಮ ಸ್ವಾಮೀಜಿ (ನಮಗೆ) ಮಕ್ಕಳಿಗೆ ಹೇಳಿದ ಮಾತು ಇನ್ನೂ ನೆನಪಿದೆ. "ಇಂದಿನಿಂದ ನಮ್ಮ ಆಶ್ರಮಕ್ಕೆ ಪೊಲೀಸರು ಬರುವುದಿಲ್ಲ. ರಾತ್ರಿ ಚೆನ್ನಾಗಿ ನಿದ್ದೆ ಮಾಡಬಹುದು." ಕಪ್ಪು ಗಡ್ಡ–ಮೀಸೆಯ ಮಧ್ಯೆ ಅವರ ಮುಗುಳುನಗೆಯಿಂದ ಹೊಳೆವ ದಂತ ಪಂಕ್ತಿ ಮಿಂಚಿ ಮಾಯವಾಯಿತು.

ಇನ್ನು ನನ್ನ ದೇಶದ ಬಗ್ಗೆ ಎರಡು ಮಾತು. ಪ್ರಪಂಚದ ಎಲ್ಲಾ ದೇಶಗಳಿಗೆ ಹೋಲಿಸಿದರೆ ನಮ್ಮದು ಒಂದು ವಿಭಿನ್ನವಾದ ದೇಶ. ಎಲ್ಲದರಲ್ಲೂ ವಿಭಿನ್ನತೆಯನ್ನು ಕಾಣಬಹುದು. ಮೂಲತಃ ಹಿಂದೂ ರಾಷ್ಟ್ರವಾಗಿದ್ದರೂ, ಅದರಲ್ಲಿ ಬೇರೆ ಬೇರೆ ಭಾಷೆ, ಸಂಸ್ಕೃತಿ, ಆಹಾರ ಪದ್ಧತಿ, ವಿವಿಧ ರೀತಿಯ ಹಬ್ಬ ಹರಿದಿನಗಳ ಆಚರಣೆ, ಬೇರೆ ಬೇರೆ ಮೈಬಣ್ಣ, ... ಬಟ್ಟೆ ಧರಿಸುವ ರೀತಿ ಮೊದಲಾಗಿ. ನಂತರ ಪರಕೀಯರು ದೇಶವನ್ನು ಆಕ್ರಮಿಸಿದಾಗ ಅವರ ಧರ್ಮವೂ ಈ ದೇಶದಲ್ಲಿ ನೆಲೆಸಿತು. ಹಾಗಾಗಿ ಬಹು ಧರ್ಮಗಳ ದೇಶವಾಗಿ ಪರಿವರ್ತನೆಗೊಂಡಿತು. ಅದಕ್ಕೆಲ್ಲ ಅನುಗುಣವಾಗಿ ನಾವು ನಮ್ಮ ಸಂವಿಧಾನವನ್ನು ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅಂತಹ ಮಹನೀಯರ ದೂರದೃಷ್ಟಿ, ಸಮಾನತಾ ಭಾವನೆಗಳಿಂದ, ಜಾತ್ಯಾತೀತವಾಗಿ ಮಾಡಿಕೊಂಡೆವು. ಇದರಿಂದಾಗಿ ನಮ್ಮೊಳಗೆ ಏನೇ ಭಿನ್ನಾಭಿಪ್ರಾಯಗಳಿದ್ದರೂ, ದೇಶ ಒಗ್ಗಟ್ಟಿನಿಂದ ಒಂದಾಗಿ ಪ್ರಜಾಪ್ರಭುತ್ವವಾಗಿಯೇ ಉಳಿದುಕೊಂಡಿದೆ.

ಯಾರು ಏನೇ ಹೇಳಲಿ, ದೇಶಕ್ಕೆ ಹಾನಿಯನ್ನೇ ಬಯಸಲಿ ಅದಕ್ಕೆ ಪ್ರಚೋದನೆಯನ್ನಾದರೂ ಮಾಡಲಿ, ಈ ಕಳೆದ 75 ವರ್ಷಗಳಲ್ಲಿ ನಮ್ಮ ದೇಶಪ್ರೇಮಿ, ದೇಶಾಭಿಮಾನಿ ಜನರು ದೇಶವನ್ನು ಆರ್ಥಿಕವಾಗಿ ಬಲಪಡಿಸಿದ್ದಾರೆ. **ಎಲ್ಲದಕ್ಕೂ ಹೆಚ್ಚಾಗಿ, ಪ್ರಪಂಚದ ಅನೇಕ ದೇಶಗಳಲ್ಲಿ ಪ್ರಜಾಪ್ರಭುತ್ವ ಕುಸಿದು, ಅಧಿಕಾರಿಶಾಹಿ, ನಿರಂಕುಶಮತಿ ಸರಕಾರಗಳು, ಆಳುತ್ತಿರಬೇಕಾದರೆ, ನಮ್ಮ ದೇಶ 140 ಕೋಟಿ ಜನಸಂಖ್ಯೆಯ ದೇಶ, ನಮ್ಮ ನಮ್ಮೊಳಗೆ ಕೂಗಾಡಿದರು ಬಡಿದಾಡಿದರೂ, ದೇಶದ ವಿಷಯ ಬಂದಾಗ ಈ ಹಿಂದೂ ಬಹುಮತವಿರುವ ದೇಶ ಒಗ್ಗಟ್ಟಿನಿಂದ ತನ್ನ ಪ್ರಜಾಪ್ರಭುತ್ವವನ್ನು ಉಳಿಸಿ, ಬೆಳೆಸಿಕೊಂಡು ಬಂದಿದೆ.** ಎಲ್ಲಿ ಈ ದೇಶ ಒಡೆದು ಹೋಗುತ್ತೋ ಎನ್ನುವ ಆತಂಕದ ದಿನಗಳಲ್ಲಿ ನರೇಂದ್ರ ಮೋದಿಯವರು ಪ್ರಧಾನ ಮಂತ್ರಿಯಾಗಿ ಅಧಿಕಾರ ವಹಿಸಿ ಕೊಂಡಾಗ ನಮ್ಮ ಪ್ರಜಾಪ್ರಭುತ್ವದ ಉಳಿವಿಗೆ ಭಗವಂತನೇ ಅವರನ್ನು ಕಳುಹಿಸಿರಬೇಕು ಅನ್ನಿಸುತ್ತಿದೆ. ಭಗ ವದ್ಗೀತೆಯಲ್ಲಿ ಶ್ರೀ ಕೃಷ್ಣ ಪರಮಾತ್ಮ ಹೇಳುತ್ತಾನೆ. 'ಯಾವ ಕಾಲಘಟ್ಟದಲ್ಲಿ ಅಧರ್ಮ ದೇಶವನ್ನು ಆವರಿಸುತ್ತೋ ಆಗ ನಾನು ಈ ದೇಶದಲ್ಲಿ ಜನ್ಮವೆತ್ತುತ್ತೇನೆ'. ಬಹುಶಃ ಅವನು ಲೀಲೆಯಲ್ಲಿ ಮಗ್ನನಾಗಿ ಈ ತನ್ನ ವಚನವನ್ನು ಮರೆತನೇನೋ ಅನ್ನಿಸುತ್ತಿದೆ. ಸ್ವಾಮಿ ವಿವೇಕಾನಂದ ಬಂದರು, ಮಹಾತ್ಮ ಗಾಂಧಿ ಬಂದರು, ನಂತರ ಒಬ್ಬ ಮೋದಿ ಬರಬೇಕಾದರೆ ದೇಶದ ಸ್ಥಿತಿ ಅಸ್ಥಿರವಾಗಿತ್ತು. ಮೋದಿಯವರು ಈಗ ಸದ್ಯ ಬಂದರು. ಪರವಾಗಿಲ್ಲ ತಡವಾದರೂ ಬಂದರಲ್ಲ!

'ಇಂದಿನ ಭಾರತದಲ್ಲಿ ಬಹು ಮುಖ್ಯವಾದ ವಿಷಯ ಒಂದಿದೆ. ನಮ್ಮ ಪ್ರಜಾಪ್ರಭುತ್ವ ಹಾಗೂ ಸರಿಯಾದ ಅರ್ಥದ ಜಾತ್ಯಾತೀತ ನೀತಿಯನ್ನು ಉಳಿಸುವುದು. ಆದುದರಿಂದ ಯಾವಾಗ ಧರ್ಮ ಹಾಗೂ ಶಾಂತಿಯುತ ಜೀವನಕ್ಕೆ ಆಗಿಂದಾಗ್ಗೆ ಒಂದೇ ಸಮನೆ ವಿರೋಧ ವ್ಯಕ್ತವಾಗುತ್ತದೋ ಆಗ ಅನಿವಾರ್ಯವಾಗಿ ನಮ್ಮ ಶಾಂತಿಧೂತರು, ವೀರ ಕಲಿಗಳು, ಧೈರ್ಯದಿಂದ ಅತೀ ಎತ್ತರಕ್ಕೆ ಎದ್ದು ನಿಂತು ಶತ್ರುಗಳನ್ನು ಸದೆ ಬಡಿಯಬೇಕು ಎನ್ನುತ್ತದೆ ಗೀತೆ–ಹಿಂದೂಗಳ ಪವಿತ್ರ ಗ್ರಂಥ.'

'In today's India what is important to save Democracy and its secular character is that when the opposition to Dharma and peaceful life is relentless by some, it is imperative for the warriors who follow the code of justice and rightfulness to stand up and fight, as stated in Gita'.

ಇದರ ಜೊತೆಗೆ ನಾವು ಇಂದು ಜನರಲ್ಲಿ ಕಾಣುವ ಹಣ ಮತ್ತು ಅಧಿಕಾರದ ಲಾಲಸೆ ಬಹುದೊಡ್ಡ ಅಪಾಯ. ಇದು ನಮ್ಮ ಪ್ರಜಾಪ್ರಭುತ್ವ ಹಾಗೂ ಜಾತ್ಯಾತೀತೆಯ ನೀತಿಯನ್ನು ಕಾರ್ಯಹೀನವಾಗುವಂತೆ ಮಾಡುತ್ತಿದೆ. ಭ್ರಷ್ಟಾಚಾರದ್ದಂತೂ ರುದ್ರನರ್ತನ. ನಮ್ಮನ್ನು ಆಳುವವರು ಇದರ ಬಗ್ಗೆ ಹೆಚ್ಚಾಗಿ ಗಮನಹರಿಸುತ್ತಿಲ್ಲ. ನಮ್ಮ ರಾಜ್ಯದಲ್ಲೇ ನೋಡಿ. ಅತ್ಯಂತ ಬಲಿಷ್ಠಶಾಲಿ ಲೋಕಾಯುಕ್ತವನ್ನು ಮೂಲೆ ಗುಂಪು ಮಾಡಿ ಎಸಿಬಿ (Anti Corruption Bureau) ತಂದು ಅದನ್ನು ಮುಖ್ಯಮಂತ್ರಿಯ ನಿಯಂತ್ರದಲ್ಲಿಟ್ಟಿದ್ದರು. ಸದ್ಯ, ಉಚ್ಚ ನ್ಯಾಯಾಲಯ ಲೋಕಾಯುಕ್ತಕ್ಕೆ ಮರುಜೀವ ಕೊಟ್ಟಿದೆ. ಆದರೆ ಈ ಬಿಜೆಪಿ ಸರ್ಕಾರ, ಅದರ ಬಗ್ಗೆ ಮೀನಾಮೇಷ ಎಣಿಸುತ್ತಿದೆ. ಏಕೆ? ಇದೇ ಬಿಜೆಪಿ ತಾನೇ 2018ರ ಚುನಾವಣೆಯಲ್ಲಿ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹುಟ್ಟು ಹಾಕಿದ ಎಸಿಬಿಯನ್ನು ಬಿಟ್ಟು ಲೋಕಾಯುಕ್ತವನ್ನು ಮರಳಿ ತರುತ್ತೇವೆ ಎಂದು ತಮ್ಮ ಪ್ರಣಾಳಿಕೆಯಲ್ಲಿ ಘೋಷಿಸಿದವರು. ಈಗ ಏನಾಯ್ತು? ಕೊಟ್ಟ ಮಾತಿಗೆ ತಪ್ಪುವ ರಾಜಕಾರಣಿಗಳಿಂದ ಭ್ರಷ್ಟಾಚಾರ ನಿವಾರಿಸಲು ಸಾಧ್ಯವೇ? **ಚರಿತ್ರೆ ಓದಿದವರಿಗೆ ಭ್ರಷ್ಟಾಚಾರದಿಂದ ದೇಶಕ್ಕೆ ಆಗುವ ಅನಾಹುತ ತಿಳಿದೇ ಇರುತ್ತದೆ. ಇಲ್ಲಿ ಒಂದೆರಡು ಉದಾಹರಣೆ ಕೊಡಲು ಇಚ್ಛಿಸುತ್ತೇನೆ.**

> ನಮ್ಮ ಸ್ವತಂತ್ರ ಭಾರತದಲ್ಲಿ ಇದುವರೆಗೆ ಬೆಳಕಿಗೆ ಬಂದಂತಹ ಭ್ರಷ್ಟಾಚಾರಗಳು ಹಾಗೂ ಅವುಗಳಿಂದ ಆದ ಕಷ್ಟ, ನಷ್ಟ ಹಾಗೂ ಜೀವಹಾನಿ ಅಪಾರ. ಉದಾಹರಣೆಗೆ 1993 ರಲ್ಲಿ ನಡೆದ ಮುಂಬೈ ಸರಣಿ ಬಾಂಬ್ ಸ್ಫೋಟವನ್ನೇ ತೆಗೆದುಕೊಳ್ಳೋಣ. ಲಂಚ ಪಡೆದು ಅಧಿಕಾರಿಯೊಬ್ಬ ಲಾರಿಯಲ್ಲಿ ಭರ್ತಿ ತುಂಬಿದ ಆರ್‌ಡಿಎಕ್ಸ್ ಅನ್ನು ಸಮುದ್ರ ತೀರದಿಂದ ದೇಶದ ಒಳಗೆ ಬಿಟ್ಟ. ಅದರ ಫಲಿತಾಂಶ 257 ಅಮಾಯಕರ ಸಾವು, ನೂರಾರು ಮಂದಿ ಶಾಶ್ವತ ಅಂಗ ಊನರಾದರು. ಅಪಾರ ಪ್ರಮಾಣದ ಆಸ್ತಿಪಾಸ್ತಿ ನಾಶವಾಯಿತು. ಇದಕ್ಕೆ ಮೂಲ ಕಾರಣವೇ ಈ ಭ್ರಷ್ಟಾಚಾರವೆಂಬ ರಾಕ್ಷಸ.

ಒಂದು: ರಾಣಾ ಸಂಘ, ಮೇವಾರ್ ರಾಜ್ಯದ ರಜಪೂತ ರಾಜ. ಅದೊಂದೂ ಸೋಲನ್ನರಿಯದ ರಾಜ್ಯವಾಗಿತ್ತು. ಮೊಘಲ ಚಕ್ರವರ್ತಿ ಬಾಬರನಿಗೆ ಉತ್ತರ ಭಾರತದಲ್ಲಿ ಮೇವಾರ್ ಒಂದೇ ದೊಡ್ಡ ಅಡಚಣೆಯಾಗಿತ್ತು. ದಕ್ಷಿಣ ಭಾರತದ ವಿಜಯನಗರದ ಕೃಷ್ಣದೇವರಾಯ ಚಕ್ರವರ್ತಿಯನ್ನು ಎದುರಿಸುವ ಧೈರ್ಯವಿರಲಿಲ್ಲ. ಹಾಗಾಗಿ ಆ ಸಾಹಸಕ್ಕೆ ಕೈ ಹಾಕಲಿಲ್ಲ. ಆದರೆ ಮೇವಾರವನ್ನು ಆಕ್ರಮಿಸಲೇಬೇಕೆಂದು ನಿರ್ಧರಿಸಿ, ಯುದ್ಧ ಆರಂಭ ಮಾಡಿದ (1527). ಖನುವಾ ಎಂಬ ಸ್ಥಳದಲ್ಲಿ ಯುದ್ಧ ಆರಂಭವಾಯಿತು. ರಾಣಾ ಸಂಘ ಗೆಲ್ಲುವುದು ನಿಶ್ಚಿತವಾಯಿತು. ಆದರೆ ಒಬ್ಬ ಭ್ರಷ್ಟ ದೇಶದ್ರೋಹಿ ಹಾಗೂ ವಿಶ್ವಾಸಘಾತುಕನಿಂದ ಮೋಸ ಹೋಗಿ (Treachery) ಯುದ್ಧದಲ್ಲಿ ಸೋತ. ತೋಮರ್ ಎಂಬ ರಾಣಾ ಸಂಘನ ಸೇನಾಪತಿ, ಬಾಬರನ ದುಡ್ಡಿನ ಹಾಗೂ ಅಧಿಕಾರದ ಆಮಿಷಕ್ಕೆ ಬಲಿಯಾಗಿ ಯುದ್ಧದ ಮಧ್ಯೆ ಬಾಬರನ ಸೈನ್ಯವನ್ನು ಸೇರಿಬಿಟ್ಟ. ಅಂದು ಬಾಬರ್ ಸೋತಿದ್ದರೆ ಭಾರತದಲ್ಲಿ ಮೊಘಲ್ ಸಾಮ್ರಾಜ್ಯವೇ ಇರುತ್ತಿರಲಿಲ್ಲ.

ಎರಡು : ಬಂಗಾಳದ ಪ್ಲಾಸಿ ಕದನದ ನಂತರ (1757) ಭಾರತದಲ್ಲಿ ಆಂಗ್ಲರ (ಈಸ್ಟ್ ಇಂಡಿಯಾ ಕಂಪನಿಯ) ಆಳ್ವಿಕೆ ಪ್ರಾರಂಭವಾಯಿತು. ಕಂಪನಿಯ ನೌಕರನಾಗಿದ್ದ ರಾಬರ್ಟ್ ಕ್ಲೈವ್ ಬಂಗಾಳದ ನವಾಬ ಸಿರಾಜ್–ಉದ್–ದೌಲಾನನ್ನು ಸೋಲಿಸಿದ್ದು ಹೇಗೆ ಗೊತ್ತಾ? ನವಾಬನ ಮುಖ್ಯ ಸೇನಾಧಿಕಾರಿಯಾಗಿದ್ದ ಜಾಫರ್ ಎಂಬುವನಿಗೆ ಲಂಚ ನೀಡಿ ಮುಂದೆ ಅವನನ್ನು ಬಂಗಾಳದ ನವಾಬನನ್ನಾಗಿ ಮಾಡುವ ಆಮಿಷವೊಡ್ಡಿ.

ಮೂರು : ಮೊಘಲ ಚಕ್ರವರ್ತಿ ಔರಂಗಜೇಬನು (1655–1707), ಮರಾಠ ಸೇನಾಧಿಪತಿ ತ್ರಿಂಬಕ್ ಎಂಬುವನಿಗೆ ಲಂಚ ನೀಡಿ ಯುದ್ಧವಿಲ್ಲದೇ ಕೋಟೆಯನ್ನು ವಶಪಡಿಸಿಕೊಂಡಿದ್ದ.

ನಾಲ್ಕು: ಛತ್ರಪತಿ ಶಿವಾಜಿ, ಮೊಘಲರ ಸೇನಾಪತಿಯೊಬ್ಬರಿಗೆ ಲಂಚ ನೀಡಿ 'ಕೊಂದಾಣ' ಪ್ರದೇಶವನ್ನು ವಶಪಡಿಸಿಕೊಂಡ (1674–1680)

ಐದು: ನಮ್ಮ ಸ್ವತಂತ್ರ ಭಾರತದಲ್ಲಿ ಇದುವರೆಗೆ ಬೆಳಕಿಗೆ ಬಂದಂತಹ ಭ್ರಷ್ಟಾಚಾರಗಳು ಹಾಗೂ ಅವುಗಳಿಂದ ಆದ ಕಷ್ಟ, ನಷ್ಟ ಹಾಗೂ ಜೀವಹಾನಿ ಅಪಾರ. ಉದಾಹರಣೆಗೆ 1993ರಲ್ಲಿ ನಡೆದ ಮುಂಬೈ ಸರಣಿ ಬಾಂಬ್ ಸ್ಫೋಟವನ್ನೇ ತೆಗೆದುಕೊಳ್ಳೋಣ. ಲಂಚ ಪಡೆದು ಅಧಿಕಾರಿಯೊಬ್ಬ ಲಾರಿಯಲ್ಲಿ ಭರ್ತಿ ತುಂಬಿದ ಆರ್‌ಡಿಎಕ್ಸ್ ಅನ್ನು ಸಮುದ್ರ ತೀರದಿಂದ ದೇಶದ ಒಳಗೆ ಬಿಟ್ಟ. ಅದರ ಫಲಿತಾಂಶ 257 ಅಮಾಯಕರ ಸಾವು, ನೂರಾರು ಮಂದಿ ಶಾಶ್ವತ ಅಂಗ ಊನರಾದರು. ಅಪಾರ ಪ್ರಮಾಣದ ಆಸ್ತಿಪಾಸ್ತಿ ನಾಶವಾಯಿತು. ಇದಕ್ಕೆ ಮೂಲ ಕಾರಣವೇ ಈ ಭ್ರಷ್ಟಾಚಾರವೆಂಬ ರಾಕ್ಷಸ.

ಲಂಚ ಎಂಬುದು ದೇಶಕ್ಕೆ ಎಷ್ಟು ಅಪಾಯಕಾರಿ ಎಂಬು ದನ್ನು ನಾವು ಚರಿತ್ರೆಯಲ್ಲಿ ಓದಿದ್ದರೂ, ಅದರಿಂದ ನಾವು ಇನ್ನೂ ಏನೂ ಪಾಠ ಕಲಿತಿಲ್ಲ ಅನ್ನಿಸುತ್ತದೆ. ಆ ಕಾರಣಕ್ಕಾಗಿಯೇ ನಾವು ಪ್ರಧಾನಿ ಮೋದಿಯವರು ರಾಷ್ಟ್ರವನ್ನು ಉದ್ದೇಶಿಸಿ 15ನೇ ತಾರೀಖು ಮಾಡಿದ ಭಾಷಣದಲ್ಲಿ ಲಂಚದ ವಿಷಯದಲ್ಲಿ ರಾಜೀ ಇಲ್ಲ ಎಂದು ಹೇಳಿದರು. ಇದರಲ್ಲಿ ತುಂಬಾ ಅರ್ಥ ಇದೆ. ಆದರೆ ಅದನ್ನು ಅಕ್ಷರಶಃ ಕಾರ್ಯಗತಗೊಳಿಸುವರಾ? ಕರ್ನಾಟಕದ ಬಿಜೆಪಿ ಸರ್ಕಾರವನ್ನು ನೋಡಿ!

ಅದೇನೇ ಇರಲಿ, ಈ ಸ್ವಾತಂತ್ರ್ಯ ದಿನ ನನ್ನ ಕಾಯಕ ಧರ್ಮ ಎಂಬಂತೆ, ಸ್ವಾತಂತ್ರ್ಯ ಸಮರಕ್ಕೆ ಸಂಬಂಧಿಸಿದ ಒಂದು ನಾಟಕವನ್ನು ರಂಗಾಯಣದಲ್ಲಿ ನೋಡಿದೆ. ಅದರ ಹೆಸರು 'ಹಲಗಲಿ ಸುವರೆ'. ಅದು ರಂಗಾಯಣದ ನಿರ್ದೇಶಕರಾಗಿರುವ ಅಡ್ಡಂಡ ಸಿ. ಕಾರ್ಯಪ್ಪ ಅವರ ರಚನೆ ಮತ್ತು ನಿರ್ದೇಶನ. ತಾರೀಖು 13, 14, 15 ರಂದು ಭೂಮಿಗೀತದಲ್ಲಿ ಇದರ ಪ್ರದರ್ಶನವಿತ್ತು. ಸ್ವಾತಂತ್ರ್ಯೋತ್ಸವ ಸಂದರ್ಭಕ್ಕೆ ತಕ್ಕದಾದಂತಹ ವಿಷಯದ ನಾಟಕ. ತುಂಬಾ ಅರ್ಥ ಗರ್ಭಿತವಾಗಿತ್ತು ಭಾರತದ ಸ್ವಾತಂತ್ರ್ಯಕ್ಕೆ ತಮ್ಮದೇ ಆದ ರೀತಿಯಲ್ಲಿ, ತಮ್ಮ ಸ್ವಾಭಿಮಾನ ಹಾಗೂ ಪರಂಪರೆಯ ಹಕ್ಕುಗಳನ್ನು ನಮ್ಮನ್ನು ಆಳುತ್ತಿದ್ದ ಆಂಗ್ಲರು ಕಿತ್ತುಕೊಂಡಾಗ, ಒಂದು ಅಲ್ಪಸಂಖ್ಯಾತ ಹಲಗಲಿ ಊರಿನ (ಬೆಳಗಾವಿ ಹತ್ತಿರ) ಬೇಡರು ನಡೆಸಿದಂತಹ ದಿಟ್ಟ ಹೋರಾಟದ ಚಿತ್ರ.

1857ರ 'ಸಿಪಾಯಿ ದಂಗೆ' ಮೊದಲ ಸ್ವಾತಂತ್ರ್ಯ ಹೋರಾಟದ ನಂತರ ಆಂಗ್ಲರು ನಿಃಶಸ್ತ್ರೀಕರಣ ಕಾಯಿದೆಯನ್ನು ಜಾರಿಗೆ ತರುತ್ತಾರೆ. ಆಗ ಆಯುಧಗಳಿಂದಲೇ ಬೇಟೆಯಾಡಿ ತಮ್ಮ ಬದುಕನ್ನು ನಡೆಸುತ್ತಿದ್ದ ಕರ್ನಾಟಕದ ಬಾಗಲಕೋಟೆಯ ಮುಧೋಳ್ ಪ್ರಾಂತ್ಯದ ಹಲಗಲಿ ಗ್ರಾಮದ ಬೇಡರು ದಂಗೆ ಏಳುತ್ತಾರೆ. ಅದೇ ಕಥಾವಸ್ತು. ಸಂಗೀತಮಯವೂ, ಬಹು ಉತ್ತಮ ಮಟ್ಟದ ನಟನೆಯಿಂದಲೂ ಕೂಡಿರುವ ಈ ನಾಟಕ ದೇಶ ಪ್ರೇಮಿಗಳೆಲ್ಲರೂ ತಪ್ಪದೇ ನೋಡಲೇಬೇಕಾದದ್ದು. ಇಲ್ಲೂ ಕೂಡ ನಮ್ಮವರಿಗೆ ನಮ್ಮವರೇ ಶತ್ರುಗಳಾಗುತ್ತಾರೆ. ಆಂಗ್ಲರ ಸೇನೆಯಲ್ಲಿದ್ದು, ಯಾವ ರೀತಿ ಅವರನ್ನು ಓಲೈಸಲು ನಮ್ಮವರು ವಿಪರೀತಕ್ಕೆ ಹೋಗುತ್ತಾರೆ ಎಂಬುದನ್ನು ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪನವರು ತುಂಬಾ ಸೃಜನ ಶೀಲತೆಯಿಂದ ತೋರಿಸಿದ್ದಾರೆ.

ಕಾರ್ಯಪ್ಪನವರು ತಮ್ಮ ಬಿ.ಎ. ಪದವಿಯ ನಂತರ ನಾಟಕ ಕ್ಷೇತ್ರದಲ್ಲಿ ಹೆಸರಾಂತ ನೀನಾಸಂ ರಂಗ ಶಿಕ್ಷಣದಲ್ಲಿ ತರಬೇತಿ ಪಡೆದು ತಮ್ಮನ್ನು ರಂಗ ಕ್ಷೇತ್ರಕ್ಕೆ ತೊಡಗಿಸಿಕೊಂಡವರು. ಸುಮಾರು 25ಕ್ಕೂ ಹೆಚ್ಚು ಕನ್ನಡ ನಾಟಕ, 20ಕ್ಕೂ ಹೆಚ್ಚು ಕೊಡವ ಭಾಷೆಯ ನಾಟಕದ ಜೊತೆಗೆ ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ಅನೇಕ ಪುರಸ್ಕಾರಗಳನ್ನು ಸಹ ಪಡೆದಿದ್ದಾರೆ, ರಾಜ್ಯೋತ್ಸವ ಪ್ರಶಸ್ತಿ ಸೇರಿ. ಈ ಮೊದಲು ಒಂದೇ ಒಂದು ಸಿದ್ಧಾಂತದ ಮೇಲೆ ನಡೆಯುತ್ತಿದ್ದ ರಂಗಾಯಣ ಇಂದು ಸಮಾಜಮುಖಿಯಾಗಿ ಎಲ್ಲಾ ರೀತಿಯ ಸಿದ್ಧಾಂತಕ್ಕೂ, ಅಭಿರುಚಿಗೂ ಅವಕಾಶ ಕಲ್ಪಿಸಿರುವುದು ಕಾರ್ಯಪ್ಪನವರ ರಂಗಧರ್ಮಕ್ಕೆ ಸಾಕ್ಷಿ ಎನ್ನಬಹುದು. ಬೇಸರದ ವಿಷಯವೆಂದರೆ ಸರಕಾರದಿಂದ ಸ್ಥಾಪನೆಗೊಂಡ ಈ ರಂಗಾಯಣದಲ್ಲಿ ಅನೇಕ ವರ್ಷಗಳಿಂದ, ಅಂದರೆ ಅದರ ಕರ್ತೃ **ಡಾ.ಬಿ.ವಿ. ಕಾರಂತರ** ಕಾಲಾನಂತರ ಅದು ಒಂದು ರೀತಿಯಲ್ಲಿ ರಾಜಕೀಯ ಸಿದ್ಧಾಂತಕ್ಕೆ ಬಲಿಯಾಗಿತ್ತು. ಆದರೆ ಈಗ ಕಾರ್ಯಪ್ಪನವರು ವೈಯಕ್ತಿಕವಾಗಿ ಬಲಪಂಥೀಯ ಕಡೆ ವಾಲಿರುವವರಾದರೂ, ತಮ್ಮ ಕಾರ್ಯಕ್ಷೇತ್ರ ರಂಗಭೂಮಿಯಲ್ಲಿ ಅದಕ್ಕೆ ಒತ್ತು ಕೊಡಲಿಲ್ಲ.

ಅಂದ ಹಾಗೆ ಅದೇಕೋ 1989 ರಲ್ಲಿ ಅದರ ಸ್ಥಾಪಕ ನಿರ್ದೇಶಕರಾಗಿ, ರಾಷ್ಟ್ರದಲ್ಲೇ ಪ್ರಸಿದ್ಧರಾಗಿದ್ದ ಡಾ. ಬಿ.ವಿ.ಕಾರಂತರ ಜ್ಞಾಪಕಾರ್ಥ ಅವರನ್ನು ಇಲ್ಲಿ ನೆಲೆ ನಿಲ್ಲಿಸುವ ಯಾವ ಒಂದೂ ಸ್ಮಾರಕವೂ 2020ರಲ್ಲಿ ಕಾರ್ಯಪ್ಪನವರು ಬರುವವರೆಗೆ ಇರಲಿಲ್ಲ. ನಾನು ಅವರ ಒಂದು ಎದೆ ಮಟ್ಟದ ಕರಿಕಲ್ಲಿನಲ್ಲಿ ಕೆತ್ತಿದ ಮೂರ್ತಿ ನೋಡಿದೆ. ಹಾಗೇನೇ ಒಂದು ದೊಡ್ಡ ವೇದಿಕೆಗೆ 'ಬಿ.ವಿ. ಕಾರಂತ ರಂಗ ಚಾವಡಿ' ಎಂದು ಹೆಸರಿಟ್ಟಿದ್ದನ್ನೂ ನೋಡಿ ಸಂತೋಷವಾಯಿತು. ಸುತ್ತಮುತ್ತ ಅನೇಕ ಮರಗಿಡಗಳು ಬೆಳೆದು ನಿಂತಿವೆ. ಎಸ್.ಎಲ್. ಭೈರಪ್ಪನವರ ಚರ್ಚಾಪದ 'ಪರ್ವ' ಪುಸ್ತಕವನ್ನು ಧೈರ್ಯಮಾಡಿ ನಾಟಕ ರೂಪದಲ್ಲಿ ವೇದಿಕೆಗೆ ತಂದ ಕೀರ್ತಿ ಕಾರ್ಯಪ್ಪನವರಿಗೆ ಹಾಗೂ ಅವರೊಂದಿಗೆ ಕೆಲಸ ಮಾಡಿದ ಎಲ್ಲಾ ಕಲಾವಿದರಿಗೆ ಸೇರಬೇಕು. ನೀವೇ ಹೇಳಿ, ಗುಣಕ್ಕೆ ಮತ್ಸರವೇಕೆ?

ಕಡೆಗೆ, ಮೊನ್ನೆ ನಮ್ಮ ರಾಷ್ಟ್ರಪತಿ ದ್ರೌಪತಿ ಮುರ್ಮು ಅವರು ತಮ್ಮ ಸ್ವಾತಂತ್ರ್ಯ ದಿನಾಚರಣೆಯ ಹಿಂದಿನ ದಿನದ ಭಾಷಣದಲ್ಲಿ ನಮ್ಮ **ರಾಷ್ಟ್ರಕವಿ ಕುವೆಂಪು** ಅವರು ಭಾರತೀಯರಿಗೆ ನೀಡಿದ ತಮ್ಮ ಆಶಯದ ಕರೆಯನ್ನು ಉಲ್ಲೇಖಿಸಿದ್ದನ್ನು ನೆನಪಿಸಿಕೊಳ್ಳೋಣ:

"ನಾನಳಿವೆ, ನೀನಳಿವೆ, ನಮ್ಮೆಲುಬುಗಳ ಮೇಲೆ ಮೂಡುವುದು, ಮೂಡುವುದು ನವಭಾರತದ ಲೀಲೆ!"

email : voice@starofmysore.com

****

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರಲ್ಲಿ 75ನೇ ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವ ಸಂಭ್ರಮ

● ನೆರೆದ ಸಾವಿರಾರು ಮಂದಿಗೆ ಮುದ ನೀಡಿದ ಶಾಲಾ-ಕಾಲೇಜು ಮಕ್ಕಳ ಗಾಯನ-ನೃತ್ಯ ● ಮನಸೂರೆಗೊಂಡ ಆಕರ್ಷಕ ಪಥ ಸಂಚಲನ







ಮೈಸೂರು, ಆ.16(ಎಂಟಿವೈ)- ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತ್ ಮೈದಾನದಲ್ಲಿ ಸೋಮವಾರ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ರಾಷ್ಟ್ರ ಧ್ವಜಾರೋಹಣ ನೆರವೇರಿಸಿದರು.

ಜಿಲ್ಲಾಡಳಿತದ ವತಿಯಿಂದ ಎರಡು ವರ್ಷದ ಬಳಿಕ ಅದ್ಧೂರಿಯಾಗಿ ಆಯೋಜಿಸಿದ್ದ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ವಿವಿಧ ಶಾಲಾ-ಕಾಲೇಜುಗಳ ಸಾವಿರಾರು ವಿದ್ಯಾರ್ಥಿಗಳು, ನಾಗರಿಕರು ಪಾಲ್ಗೊಂಡು ಭಾರತಾಂಬೆಗೆ ಜೈಕಾರ ಹಾಕಿ, ದೇಶಭಕ್ತಿ ಪ್ರದರ್ಶಿಸಿದರು.

ಕೋವಿಡ್ ಹಿನ್ನೆಲೆಯಲ್ಲಿ ಕಳೆದ 2 ವರ್ಷದಿಂದ ಸ್ವಾತಂತ್ರ್ಯೋತ್ಸವ ದಿನವನ್ನು ಸರಳವಾಗಿ ಆಚರಿಸಲಾಗಿತ್ತು. ಧ್ವಜಾರೋಹಣ ಹಾಗೂ ಗೌರವ ವಂದನೆ ಗಷ್ಟೇ ಈ ಹಿಂದೆ ಕಾರ್ಯಕ್ರಮ ಸೀಮಿತ ಗೊಳಿಸಲಾಗಿತ್ತು. ಆದರೆ ಈ ಬಾರಿ ಸಡಗರ, ಸಂಭ್ರಮದಿಂದ ಸ್ವಾತಂತ್ರ್ಯ ದಿನ ವನ್ನು ಆಚರಿಸಿ, ದೇಶಭಕ್ತಿ ಪ್ರದರ್ಶಿಸಲಾಯಿತು.

ಆಕರ್ಷಕ ಪಥಸಂಚಲನ: ಧ್ವಜಾರೋಹಣ ನೆರವೇರಿಸಿದ ಬಳಿಕ ಸಚಿವ ಎಸ್.ಟಿ.ಸೋಮಶೇಖರ್ ಅವರು ತೆರೆದ ಜೀಪ್‌ನಲ್ಲಿ ಪಥಸಂಚಲನ ನಡೆ ಸಲು ಅಣಿಯಾಗಿದ್ದ ಪೊಲೀಸ್ ತುಕಡಿ ಗಳ ಬಳಿ ತೆರಳಿ ಪರೇಡ್ ಪರಿವೀಕ್ಷಿಸಿ, ಧ್ವಜಸ್ತಂಭದ ಬಳಿ ಆಗಮಿಸಿದ ನಂತರ ನಡೆದ ಆಕರ್ಷಕ ಪಥಸಂಚಲನದಲ್ಲಿ ಅಶ್ವಾರೋಹಿದಳ, ಕೆಎಸ್‌ಆರ್‌ಪಿ, ಸಿಎಆರ್, ಡಿಎಆರ್, ನಗರ ಪೊಲೀಸ್, ನಗರ ಸಂಚಾರ ಪೊಲೀಸ್, ಮಹಿಳಾ ಪೊಲೀಸ್, ಗೃಹ ರಕ್ಷಕ ದಳ, ಅಬಕಾರಿ, ಕೆಎಸ್‌ಆರ್‌ಪಿ-2, ಅಗ್ನಿಶಾಮಕ ದಳ, ಅರಣ್ಯ, ಮಹಿಳಾ ಗೃಹ ದಳ, ಎನ್‌ಸಿಸಿ ಭೂ ಸೇನೆ, ಎನ್‌ಸಿಸಿ ನೌಕದಳ, ಎನ್‌ಸಿಸಿ ವಾಯುದಳ, ಪೊಲೀಸ್ ಪಬ್ಲಿಕ್ ಸ್ಕೂಲ್, ಬಾಲಕರ ಸ್ಕೌಟ್ಸ್ ಗೈಡ್ಸ್, ವಿದ್ಯಾವರ್ಧಕ ಬಿಎಂಶ್ರೀ ಶಾಲೆ, ಭಾರತ ಸೇವಾದಳ ಬಾಲಕರು, ಭಾರತ ಸೇವಾದಳ ಬಾಲಕಿಯರು, ಪೊಲೀಸ್ ಬ್ಯಾಂಡ್ ಸೇರಿದಂತೆ ವಿವಿಧ ಶಾಲಾ-ಕಾಲೇಜುಗಳ ಒಟ್ಟು 23 ತಂಡಗಳ ಆಕರ್ಷಕ ಪಥ ಸಂಚಲನ ನಡೆಯಿತು. ಪಥಸಂಚಲನದಲ್ಲಿ ವಿಶೇಷ ಚೇತನರು ಭಾಗವಹಿಸಿ, ಗಮನ ಸೆಳೆದರು.



ಮನಸೂರೆಗೊಂಡ ಸಾಂಸ್ಕೃತಿಕ ಕಾರ್ಯಕ್ರಮ

ಸ್ವಾತಂತ್ರ್ಯೋತ್ಸವದ ಕಾರ್ಯಕ್ರಮದಲ್ಲಿ ವಿವಿಧ ಶಾಲೆಗಳ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ದೇಶಭಕ್ತಿ ಗೀತೆಗಳಿಗೆ ಸಾಮೂಹಿಕ ನೃತ್ಯ ಮಾಡಿ ಗಮನ ಸೆಳೆದರು.

ಎನ್.ಆರ್.ಮೊಹಲ್ಲಾದ ಸರ್ಕಾರಿ ಪ್ರೌಢಶಾಲೆ, ಪೀಪಲ್ಸ್ ಪಾರ್ಕ್ ಪ್ರೌಢ ಶಾಲೆ, ರಾಜೇಂದ್ರ ನಗರದ ಸರ್ಕಾರಿ ಪ್ರೌಢಶಾಲೆಗಳ ವಿದ್ಯಾರ್ಥಿಗಳು 'ಇದೋ ನೋಡು ನಮ್ಮ ಆ ಭುವನ ಮನ ಮೋಹಿನಿಯೋ' ಕಾರ್ಯಕ್ರಮ ದೇಶಭಕ್ತಿ ಸಾರಿತು. 'ನಮಸ್ತೆ, ನಮಸ್ತೆ ನಮ್ಮ ನಮಸ್ತೆ ಭಾರತ ಮಾತೆಗೆ ನಮ್ಮ ನಮಸ್ತೆ', 'ಆ ಬಾನಂಗಳದಲ್ಲಿ ಹಾರುತ್ತಿದೆ ರಾಷ್ಟ್ರ ಧ್ವಜ, ವಂದೇ ಮಾತರಂ', 'ಎಚ್ಚರವಾಗು ತಮ್ಮ, ಹುಚ್ಚು ತನ ಬಿಟ್ಟು, ದೇಶಕ್ಕಾಗಿ ದುಡಿಯೋಣ ನಾಡಿಗಾಗಿ ಮಡಿಯೋಣ', 'ಪುಣ್ಯ ಭೂಮಿ ಇದು' ಗೀತೆಗಳಿಗೆ ನೃತ್ಯ ಪ್ರದರ್ಶಿಸಿ ಗಮನ ಸೆಳೆದರು.

ಬಳಿಕ ವಿಜಯನಗರದ ಸದ್ವಿದ್ಯಾ ಪ್ರಾಥಮಿಕ ಮತ್ತು ಪ್ರೌಢಶಾಲೆಯ 250ಕ್ಕೂ ಹೆಚ್ಚು ವಿದ್ಯಾರ್ಥಿಗಳು 'ತೀನ್ ಮೆರಂಗ್ ದೇ ಏಕೀ ಚಕ್ರ ಹೈ' ಕಾರ್ಯಕ್ರಮ ನೀಡುವ ಮೂಲಕ ಪ್ರತಿಯೊಬ್ಬರಲ್ಲೂ ದೇಶಪ್ರೇಮದ ಬಗ್ಗೆ ಸಂದೇಶ ಸಾರಿದರು. ನಂತರ ವಿಜಯನಗರದ ಭಾರತೀಯ ವಿದ್ಯಾಭವನ ಶಾಲೆಯ 375 ವಿದ್ಯಾರ್ಥಿಗಳ 'ರಾಷ್ಟ್ರೀಯ ಭಾವೈಕ್ಯತಾ ಗೀತೆ' ಕಾರ್ಯಕ್ರಮ ವಿಶೇಷವಾಗಿತ್ತು. ರಾಷ್ಟ್ರ ಸಂಸ್ಕೃತಿಯನ್ನು ಬಿಂಬಿಸುವ ಹಾಡುಗಳಿಗೆ ಹೆಜ್ಜೆ ಹಾಕಿ ಗಮನ ಸೆಳೆದರು.

ಕಾರ್ಯಕ್ರಮದಲ್ಲಿ ಸಂಸದ ಪ್ರತಾಪ್ ಸಿಂಹ, ಪ್ರಭಾರ ಮೇಯರ್ ಸುನಂದಾ ಪಾಲನೇತ್ರ, ಶಾಸಕರಾದ ಜಿ.ಟಿ.ದೇವೇಗೌಡ, ತನ್ವೀರ್ ಸೇಠ್, ಎಲ್.ನಾಗೇಂದ್ರ, ವಿಧಾನಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಸಿ.ಎನ್.ಮಂಜೇಗೌಡ, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ನಗರ ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತರೆಡ್ಡಿ, ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ, ಎಸ್ಪಿ ಆರ್.ಚೇತನ್, ಡಿಸಿಪಿಗಳಾದ ಪ್ರದೀಪ್ ಗುಂಟಿ, ಗೀತಾ ಪ್ರಸನ್ನ, ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ.ಶಿವಣ್ಣ, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಎಂ.ಕೆ.ಶ್ರೀನಿವಾಸ್, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಕಾ.ಪು.ಸಿದ್ದಲಿಂಗಸ್ವಾಮಿ, ಮೈಸೂರು ಬಣ್ಣ ಮತ್ತು ಅರಗು ಕಾರ್ಖಾನೆ ಅಧ್ಯಕ್ಷ ರಘು ಕೌಟಿಲ್ಯ ಹಾಗೂ ಇತರರಿದ್ದರು.

ಅ.2ರಂದು ಯಶಸ್ವಿನಿ ಆರೋಗ್ಯ ವಿಮಾ ಯೋಜನೆ ಪುನರಾರಂಭ

ಮೈಸೂರು, ಆ.16(ಎಂಟಿವೈ)- ಯಶಸ್ವಿನಿ ಆರೋಗ್ಯ ವಿಮಾ ಯೋಜನೆ ಪುನರಾರಂಭಿಸಲು ಮಾರ್ಗಸೂಚಿ ಸಿದ್ಧಪಡಿಸಲಾಗುತ್ತಿದ್ದು, ಅಕ್ಟೋಬರ್ 2ರಂದು ಯೋಜನೆಗೆ ಚಾಲನೆ ನೀಡಲು ಉದ್ದೇಶಿಸಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದ್ದಾರೆ.

ಮೈಸೂರಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಯಶಸ್ವಿನಿ ಯೋಜನೆಯನ್ನು ಪುನರಾರಂಭಿಸಲು ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿದೆ. ಅದಕ್ಕಾಗಿ 300 ಕೋಟಿ ರೂ. ಮೀಸಲಿಡಲಾಗಿದೆ. ಈಗಾಗಲೇ 100 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಯಶಸ್ವಿನಿ ಯೋಜನೆಯು ರೈತರ ಆರೋಗ್ಯದ ಆಶಾಕಿರಣವಾಗಿ ಪರಿಣಮಿಸಲಿದೆ. ಇದಕ್ಕೆ ಸಂಬಂಧಿಸಿದ ಮಾರ್ಗಸೂಚಿಯನ್ನು ಸಿದ್ಧಪಡಿಸಲಾಗುತ್ತಿದೆ ಎಂದರು. ರಾಜ್ಯದ ಸುಮಾರು 28 ಸಾವಿರ ಗ್ರಾಮಗಳಲ್ಲಿ ತಲಾ ಒಂದು ವಿವೇಕಾನಂದ ಸ್ವಸಹಾಯ ಸಂಘಗಳನ್ನು ರಚಿಸಿ, ಯುವಕರಿಗೂ ಆರ್ಥಿಕ ನೆರವು, ಬ್ಯಾಂಕ್ ವ್ಯವಸ್ಥೆ, ತರಬೇತಿ ಹಾಗೂ ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲು ಸ್ವಾಮಿ ವಿವೇಕಾನಂದ ಯುವಶಕ್ತಿ ಯೋಜನೆಯನ್ನು ಜಾರಿಗೆ ತರಲಾಗಿದೆ. ವಿದ್ಯಾನಿಧಿ ಯೋಜನೆಯನ್ನು ನೇಕಾರರ ಮಕ್ಕಳಿಗೆ, ಟ್ಯಾಕ್ಸಿ ಚಾಲಕರ ಮಕ್ಕಳಿಗೆ ಹಾಗೂ ಮೀನುಗಾರರ ಮಕ್ಕಳಿಗೂ ವಿಸ್ತರಿಸಲಾಗಿದೆ. 10 ರಿಂದ 12 ಸಾವಿರ ನೇಕಾರರ ಮಕ್ಕಳಿಗೆ, 50 ಸಾವಿರ ಟ್ಯಾಕ್ಸಿ ಚಾಲಕರ ಮಕ್ಕಳಿಗೆ ಹಾಗೂ ಮೀನುಗಾರರ ಮಕ್ಕಳಿಗೆ ಇದರ ಲಾಭ ದೊರೆಯಲಿದೆ. ರೈತರ ಮಕ್ಕಳ ಉನ್ನತ ಶಿಕ್ಷಣವನ್ನು ಪ್ರೋತ್ಸಾಹಿಸಲು ಬಸವರಾಜ ಬೊಮ್ಮಾಯಿ ಅವರು 'ಮುಖ್ಯಮಂತ್ರಿ ರೈತ ವಿದ್ಯಾನಿಧಿ' ಕಾರ್ಯಕ್ರಮವನ್ನು ಜಾರಿಗೆ ತಂದಿದ್ದಾರೆ. ಈ ಕಾರ್ಯಕ್ರಮದಲ್ಲಿ 2022ರ ಮಾರ್ಚ್ ಅಂತ್ಯದವರೆಗೆ 38,060 ವಿದ್ಯಾರ್ಥಿಗಳಿಗೆ 1707 ಲಕ್ಷ ರೂ. ವಿದ್ಯಾರ್ಥಿ ವೇತನವನ್ನು ನೀಡಲಾಗಿದೆ ಎಂದರು.

ನಮ್ಮ ಸರ್ಕಾರ ನುಡಿದಂತೆ ನಡೆದಿದೆ...: ಮನೆ ಬಾಗಿಲಿಗೆ ಕಂದಾಯ ದಾಖಲೆ

ಮೈಸೂರು ಜಿಲ್ಲೆಯಲ್ಲಿ ಇದುವರೆಗೆ 24.52 ಲಕ್ಷ ದಾಖಲೆ ವಿಲೇವಾರಿ

● ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಘೋಷಣೆ ● ಸ್ವಾತಂತ್ರ್ಯಕ್ಕಾಗಿ ತ್ಯಾಗ-ಬಲಿದಾನಗೈದ ಹಿರಿಯರಿಗೆ ನಮನ

ಮೈಸೂರು, ಆ.16(ಎಂಟಿವೈ)- ಸ್ವಾತಂತ್ರ್ಯ ಹೋರಾಟಗಾರರ ಆಶಯದಂತೆ ರಾಜ್ಯ ಸರ್ಕಾರ ಕಾರ್ಯನಿರ್ವಹಿಸುತ್ತಿದ್ದು, ಮನೆ ಬಾಗಿಲಿಗೆ ಕಂದಾಯ ದಾಖಲೆ ಯೋಜನೆಯಡಿ ಇದುವರೆಗೆ ಜಿಲ್ಲೆಯಲ್ಲಿ ಒಟ್ಟು 24.52 ಲಕ್ಷ ಕಂದಾಯ ದಾಖಲೆಗಳನ್ನು 2.24 ಲಕ್ಷ ಕುಟುಂಬಗಳ ಮನೆಗೆ ತಲುಪಿಸಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದ್ದಾರೆ.

ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಸೋಮವಾರ ನಡೆದ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ರೈತರು ತಮ್ಮ ಪಹಣಿ, ಜಾತಿ ಮತ್ತು ಆದಾಯ ಪ್ರಮಾಣ ಪತ್ರಕ್ಕಾಗಿ ಸರ್ಕಾರಿ ಕಚೇರಿಗಳಿಗೆ ಅಲೆದಾಡಬೇಕಾಗಿತ್ತು. ಈ ದಾಖಲೆಗಳನ್ನು ರೈತರ ಮನೆ ಬಾಗಿಲಿಗೆ ಉಚಿತವಾಗಿ ತಲುಪಿಸುವ 'ಮನೆ ಬಾಗಿಲಿಗೆ ಕಂದಾಯ ದಾಖಲೆ' ಯೋಜನೆ ಜಿಲ್ಲೆಯಲ್ಲಿ ಯಶಸ್ವಿಯಾಗಿದೆ ಎಂದರು.

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ಪ್ರಧಾನಿ ಮೋದಿ ಅವರು ಕರೆ ನೀಡಿದ 'ಹರ್ ಘರ್ ತಿರಂಗ' ಅಭಿಯಾನವೂ ಜಿಲ್ಲೆಯಲ್ಲಿ ಯಶಸ್ವಿಯಾಗಿದೆ. ದೇಶಪ್ರೇಮ ಸ್ವಾತಂತ್ರ್ಯ ದಿನಾಚರಣೆಗಷ್ಟೇ ಸೀಮಿತಗೊಳ್ಳಬಾರದು. ದೇಶಪ್ರೇಮ ನಮ್ಮಲ್ಲಿ ಪ್ರತಿದಿನವೂ, ಪ್ರತಿಕ್ಷಣವೂ ಇರಬೇಕು. ವೈವಿಧ್ಯತೆಯಲ್ಲಿ ಏಕತೆ ನಮ್ಮ ದೇಶದ ಸೌಂದರ್ಯವಾಗಿದೆ. ನಾವೆಲ್ಲರೂ ಒಂದೇ ಎಂಬ ಭಾವನೆ ನಮ್ಮನ್ನು ಬೆಸೆಯಬೇಕು. ದೇಶದ ಸ್ವಾತಂತ್ರಕ್ಕಾಗಿ ಹೋರಾಟ, ತ್ಯಾಗ, ಬಲಿದಾನಗಳನ್ನು ಮಾಡಿದ ಹಿರಿಯರನ್ನು ನಾವು ಸ್ಮರಿಸಬೇಕು ಎಂದರು. ಮೈಸೂರು ಜಿಲ್ಲೆಗೆ ನಮ್ಮ ಸರ್ಕಾರ ವಿಶೇಷ ಗಮನಹರಿಸಿದೆ. ಮೋದಿ ಅವರು ಇಲ್ಲಿ ಯೋಗ ಮಾಡಿದ ಮೇಲೆ ಪ್ರವಾಸೋದ್ಯಮ ಅಭಿವೃದ್ಧಿಯಾಗುತ್ತಿದೆ. ಜಿಲ್ಲೆಯಲ್ಲಿ ಒಟ್ಟು 59 ಲಕ್ಷ ಡೋಸ್ ಲಸಿಕೆ ಹಾಕಲಾಗಿದೆ. ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಜಿಲ್ಲೆಯಲ್ಲಿ 2.49 ಲಕ್ಷ ಕುಟುಂಬಗಳಿಗೆ ಶೌಚಗೃಹ ನಿರ್ಮಿಸಲಾಗಿದೆ. 256 ಗ್ರಾಮ ಪಂಚಾಯತಿಗಳ ಪೈಕಿ 141 ಗ್ರಾಮ ಪಂಚಾಯಿತಿಗಳಲ್ಲಿ ಕಸ ವಿಂಗಡಣೆ ಮತ್ತು ಸಂಗ್ರಹಣೆ ಮಾಡಿ ಘನ ತ್ಯಾಜ್ಯವನ್ನು ವಿಲೇವಾರಿ ಮಾಡಲಾಗುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ 2021-22ನೇ ಸಾಲಿನಲ್ಲಿ ಬಸವ ವಸತಿ ಯೋಜನೆಯಡಿಯಲ್ಲಿ 7592 ಮನೆಗಳ ಗುರಿ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ನಿವಾಸ ಯೋಜನೆಯಡಿಯಲ್ಲಿ 2468 ಮನೆಗಳ ಗುರಿ ನೀಡಲಾಗಿದ್ದು, ಪ್ರಗತಿಯಲ್ಲಿದೆ. ನಗರ ಪ್ರದೇಶದಲ್ಲಿ 2021-22ನೇ ಸಾಲಿನಲ್ಲಿ ವಾಜಪೇಯಿ ನಗರ ವಸತಿ ಯೋಜನೆ ಅಡಿಯಲ್ಲಿ 931 ಮನೆಗಳ ಗುರಿಯನ್ನು ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆ ಅಡಿಯಲ್ಲಿ 294 ಮನೆಗಳ ಗುರಿಯನ್ನು ನೀಡಲಾಗಿದ್ದು, ಪ್ರಗತಿಯಲ್ಲಿದೆ ಎಂದು ತಿಳಿಸಿದರು.

ಮೈಸೂರು ತಾಲೂಕಿನ ವ್ಯಾಪ್ತಿಯಲ್ಲಿ 3 ಏತ ನೀರಾವರಿ ಯೋಜನೆಗಳು ಹಾಗೂ ಹುಣಸೂರು, ಕೆ.ಆರ್.ನಗರ, ತಿ.ನರಸೀಪುರ, ಪಿರಿಯಾಪಟ್ಟಣ ಮತ್ತು ಎಚ್.ಡಿ ಕೋಟೆ ತಾಲೂಕಿನ ವ್ಯಾಪ್ತಿಯಲ್ಲಿ ಏತ ನೀರಾವರಿ ಯೋಜನೆಗಳ ಮೂಲಕ ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿ ಪ್ರಗತಿಯಲ್ಲಿದೆ ಎಂದರು.

14.36 ಕೋಟಿ ರೂ. ಪರಿಹಾರ: ಮುಂಗಾರು ಮಳೆಯಿಂದ 1760 ಮನೆಗಳಿಗೆ ಹಾನಿ ಆಗಿದೆ. ಈ ಪೈಕಿ 30 ಮನೆಗಳು ಪೂರ್ಣ ಹಾನಿ ಹಾಗೂ 1134 ಮನೆಗಳು ತೀವ್ರತರ ಹಾನಿಯಾಗಿದ್ದು, ಪ್ರತಿ ಪ್ರಕರಣಕ್ಕೆ ತಲಾ 95,100 ರೂ.ಗಳ ಪರಿಹಾರ ನೀಡಲಾಗಿರುತ್ತದೆ. 545 ಮನೆಗಳು ಭಾಗಶಃ ಹಾನಿಯಾಗಿದ್ದು, ಪ್ರತಿ ಪ್ರಕರಣಕ್ಕೆ 50 ಸಾವಿರ ಪರಿಹಾರವನ್ನು ಈಗಾಗಲೇ ಫಲಾನುಭವಿಗಳಿಗೆ ಪಾವತಿಸಲಾಗಿರುತ್ತದೆ. ಈವರೆಗೆ ಮಳೆ ಹಾನಿಗೆ ಒಟ್ಟು 14.36 ಕೋಟಿ ರೂ. ಪರಿಹಾರವನ್ನು ನೀಡಲಾಗಿದೆ ಎಂದರು.

ವರ್ಷದ ಅಂತ್ಯಕ್ಕೆ ದಶಪಥ: ಮೈಸೂರು-ಬೆಂಗಳೂರು ದಶಪಥ ಕಾಮಗಾರಿ ತ್ವರಿತ ಗತಿಯಲ್ಲಿ ಸಾಗಿದ್ದು, ವರ್ಷದ ಅಂತ್ಯಕ್ಕೆ ಪೂರ್ಣಗೊಳ್ಳಲಿದೆ. ಇದರಿಂದ ಬೆಂಗಳೂರು ಮತ್ತು ಮೈಸೂರು ನಡುವೆ ಸಂಚಾರ ಅತ್ಯಂತ ಸುಗಮವಾಗಲಿದ್ದು, ಪ್ರಯಾಣ ಅವಧಿ ತುಂಬಾ ಕಡಿಮೆಯಾಗಲಿದೆ. ಇದರಿಂದ ನಾಗರಿಕರಿಗೆ ತುಂಬಾ ಅನುಕೂಲವಾಗಲಿದೆ ಎಂದರು.



75ನೇ ಸ್ವಾತಂತ್ರ್ಯೋತ್ಸವ ಸಂಭ್ರಮ



- ಮಂಡ್ಯದ್ಯಂತ ಬಾನೆತ್ತರಕ್ಕೆ ಹಾರಾಡಿದ 'ತ್ರಿವರ್ಣ' ಧ್ವಜ
- ಎಲ್ಲಡೆ ಮೊಳಗಿದ 'ವಂದೇ ಮಾತರಂ' ಘೋಷ ವಾಕ್ಯ
- 'ಹರ್ ಘರ್ ತಿರಂಗಾ' ಅಭಿಯಾನಕ್ಕೆ ಉತ್ತಮ ಸ್ಪಂದನೆ
- ಸ್ವಾತಂತ್ರ್ಯ ಹೋರಾಟಗಾರರ ಗುಣಗಾನ; ಸಾಧಕರಿಗೆ ಸನ್ಮಾನ



ಮಂಡ್ಯ, ಆ.16– 75ನೇ ಸ್ವಾತಂತ್ರ್ಯೋತ್ಸವವನ್ನು ಜಿಲ್ಲಾದ್ಯಂತ ಸಡಗರ– ಸಂಭ್ರಮದಿಂದ ಆಚರಿಸಲಾಯಿತು. ಮಂಡ್ಯ, ಮಳವಳ್ಳಿ, ಮದ್ದೂರು, ಶ್ರೀರಂಗಪಟ್ಟಣ, ನಾಗಮಂಗಲ, ಕೆ.ಆರ್.ನಗರ, ಪಾಂಡವಪುರ ಸೇರಿದಂತೆ ಗ್ರಾಮೀಣ ಪ್ರದೇಶಗಳಲ್ಲಿಯೂ ಸರ್ಕಾರಿ ಕಚೇರಿ, ಶಾಲಾ–ಕಾಲೇಜು, ಸಂಘ–ಸಂಸ್ಥೆಗಳ ಆವರಣದಲ್ಲಿ ಧ್ವಜಾರೋಹಣ ನೆರವೇರಿಸುವ ಮೂಲಕ ಸ್ವಾತಂತ್ರ್ಯ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು.

ಪ್ರಧಾನಿ ನರೇಂದ್ರ ಮೋದಿ ಅವರು ಕರೆ ನೀಡಿದ್ದ 'ಹರ್ ಘರ್ ತಿರಂಗಾ' ಅಭಿಯಾನಕ್ಕೂ ಕೂಡ ಉತ್ತಮ ಬೆಂಬಲ ವ್ಯಕ್ತವಾಯಿತು. ನಗರ ಸೇರಿದಂತೆ ಗ್ರಾಮೀಣ ಪ್ರದೇಶಗಳಲ್ಲಿಯೂ ಮನೆ– ಮನೆಯಲ್ಲೂ ತ್ರಿವರ್ಣ ಧ್ವಜ ಹಾರಿಸುವ ಮೂಲಕ ಸಾರ್ವಜನಿಕರು ದೇಶಪ್ರೇಮ ವ್ಯಕ್ತಪಡಿಸಿದರು. ಒಟ್ಟಾರೆ ಜಿಲ್ಲಾದ್ಯಂತ ಸೋಮವಾರ 'ತ್ರಿವರ್ಣ ಧ್ವಜ' ಜಿಲ್ಲಾದ್ಯಂತ ಬಾನೆತ್ತರಕ್ಕೆ ಹಾರಾಡಿತ್ತು.



ಆದಿಚುಂಚನಗಿರಿ ವಿಶ್ವವಿದ್ಯಾಲಯದ ಬಿಜಿಎಸ್ ಕ್ರೀಡಾಂಗಣದಲ್ಲಿ ವಿದ್ಯಾರ್ಥಿಗಳು ತ್ರಿವರ್ಣ ಧ್ವಜವನ್ನಿಡಿದು ಸಂಭ್ರಮಿಸಿದರು.

ಮಂಡ್ಯ ವರದಿ: ನಗರದ ಭಾರತ ರತ್ನ ಸರ್.ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ನಗರ ಸಭೆಯಿಂದ ನಡೆದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಕಂದಾಯ ಸಚಿವ ಆರ್.ಅಶೋಕ್ ಅವರು ಧ್ವಜಾ ರೋಹಣ ನೆರವೇರಿಸಿದರು.

ಸ್ವಾತಂತ್ರ್ಯ ದಿನಾಚರಣೆ ಪಥಸಂಚಲನದಲ್ಲಿ ಜಿಲ್ಲಾ ಸಶಸ್ತ್ರ ಮೀಸಲು ಪಡೆ ಪ್ರಥಮ ಸ್ಥಾನ, ಅಬಕಾರಿ ಇಲಾಖೆ ದ್ವಿತೀಯ ಸ್ಥಾನ, ಜಿಲ್ಲಾ ಗೃಹ ರಕ್ಷಕ ಪುರುಷ ದಳ ತೃತೀಯ ಸ್ಥಾನ ಹಾಗೂ ಶಾಲಾ ವಿಭಾಗದ ಎರಡನೇ ಪಟ್ಟಿಯಲ್ಲಿ ಆದರ್ಶ ಪ್ರೌಢಶಾಲೆ ಪ್ರಥಮ ಸ್ಥಾನ, ಪಿಇಎಸ್ ಪ್ರೌಢಶಾಲೆ ದ್ವಿತೀಯ ಸ್ಥಾನ, ಅರಕೇಶ್ವರ ನಗರ ಪ್ರೌಢ ಶಾಲೆ ತೃತೀಯ ಸ್ಥಾನ ಪಡೆದುಕೊಂಡಿತು.

ಎನ್‌ಸಿಸಿ ವಿಭಾಗದಲ್ಲಿ ಪಿಇಎಸ್ ಬಾಲಕರ ತಂಡ ಪ್ರಥಮ ಸ್ಥಾನ, ಸರ್ಕಾರಿ ಬಾಲಕರ ಕಾಲೇಜು ದ್ವಿತೀಯ ಸ್ಥಾನ, ಸರ್ಕಾರಿ ಮಹಿಳಾ ಕಾಲೇಜು ತೃತೀಯ ಸ್ಥಾನ ಹಾಗೂ ಶಾಲಾ ವಿಭಾಗದಲ್ಲಿ ಪ್ರಥಮ ಬಹುಮಾನ ಕಾರ್ಮೆಲ್ ಕಾನ್ವೆಂಟ್ ಪ್ರೌಢಶಾಲೆ, ಸೇಂಟ್ ಜೋಸೆಫ್ ಪ್ರೌಢಶಾಲೆ ದ್ವಿತೀಯ ಸ್ಥಾನ, ರೋಟರಿ ಪ್ರೌಢಶಾಲೆ ತೃತೀಯ ಸ್ಥಾನ ಪಡೆದುಕೊಂಡಿತು.

ಶಾಸಕ ಎಂ.ಶ್ರೀನಿವಾಸ್, ಸಂಸದೆ ಸುಮಲತಾ ಅಂಬರೀಶ್, ನಗರಸಭೆ ಅಧ್ಯಕ್ಷ ಹೆಚ್.ಎಸ್. ಮಂಜು, ಉಪಾಧ್ಯಕ್ಷೆ ಇಷ್ರತ್ ಫಾತಿಮಾ, ಜಿಲ್ಲಾಧಿಕಾರಿ ಎಸ್.ಅಶ್ವಥಿ, ಎಸ್‌ಪಿ ಎನ್. ಯತೀಶ್, ಜಿಪಂ ಸಿಇಓ ಶಾಂತ ಎಲ್. ಹುಲ್ಮನಿ, ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್. ನಾಗರಾಜು, ಮುಡಾ ಅಧ್ಯಕ್ಷ ಶ್ರೀನಿವಾಸ್ ಸೇರಿದಂತೆ ಇತರ ಗಣ್ಯರು ಉಪಸ್ಥಿತರಿದ್ದರು.

ಕೆ.ಆರ್.ಪೇಟೆ ವರದಿ: ಪಟ್ಟಣದ ಟಿ.ಬಿ. ಬಡಾವಣೆ ಪುರಸಭಾ ಕಚೇರಿ ಬಳಿಯ ಮೈದಾನದಲ್ಲಿ ತಾಲೂಕು ಆಡಳಿತದಿಂದ ಆಯೋಜಿಸಿದ್ದ ಸ್ವಾತಂತ್ರ್ಯ ಮಹೋತ್ಸವದಲ್ಲಿ ತಹಸೀಲ್ದಾರ್ ಎಂ.ವಿ.ರೂಪಾ ಧ್ವಜಾರೋಹಣ ನೆರವೇರಿಸಿದರು.

ಈ ವೇಳೆ ಪುರಸಭಾ ಅಧ್ಯಕ್ಷೆ ಮಹಾದೇವಿ, ಉಪಾಧ್ಯಕ್ಷೆ ಗಾಯಿತ್ರಮ್ಮ, ಮುಖ್ಯಾಧಿಕಾರಿ ಕುಮಾರ್, ಇಂಜಿನಿಯರ್ ಅರ್ಚನಾ ಆರಾಧ್ಯ, ವ್ಯವಸ್ಥಾಪಕ ಸೋಮಶೇಖರ್, ತಾಪಂ ಇಓ ಸತೀಶ್, ಬಿಇಓ ಆರ್.ಎಸ್. ಸೀತಾರಾಂ, ತಾಲೂಕು ಆರೋಗ್ಯಾಧಿಕಾರಿ ಡಾ.ಮಧುಸೂಧನ್, ವೈದ್ಯಾಧಿಕಾರಿ ಡಾ.ಶಿವಕುಮಾರ್, ಪಶುವೈದ್ಯ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಹೆಚ್.ಎಸ್. ದೇವರಾಜು, ಕೃಷಿ ಸಹಾಯಕ ನಿರ್ದೇಶಕ ಟಿ.ಎಸ್.ಮಂಜುನಾಥ್, ಇನ್ಸ್‌ಪೆಕ್ಟರ್ ದೀಪಕ್, ಮುಖಂಡರಾದ ಆರ್.ಎಸ್. ಶಿವರಾಮೇಗೌಡ, ಕೆ.ಎಂ.ಶಿವಪ್ಪ, ಉಪ ತಹಸೀಲ್ದಾರ್ ಲಕ್ಷ್ಮೀಕಾಂತ್ ಇದ್ದರು. ಇದೇ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟಗಾರರು ಹಾಗೂ 85ವರ್ಷ ತುಂಬಿದ ಹಿರಿಯ ನಾಗರಿಕರನ್ನು ತಾಲೂಕು ಆಡಳಿತದಿಂದ ಸನ್ಮಾನಿಸಲಾಯಿತು. ಬಳಿಕ ಶಾಲಾ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.



ಪಾಂಡವಪುರದಲ್ಲಿ ನಡೆದ ಸ್ವಾತಂತ್ರ್ಯೋತ್ಸವದಲ್ಲಿ ವಿದ್ಯಾರ್ಥಿಗಳ ನೃತ್ಯ ವೈಭವ.

ಪಾಂಡವಪುರ ವರದಿ: ಪಟ್ಟಣದ ಪಾಂಡವ ಕ್ರೀಡಾಂಗಣದಲ್ಲಿ ತಾಲೂಕು ಆಡಳಿತದ ವತಿಯಿಂದ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವವನ್ನು ಸೋಮವಾರ ಅದ್ಧೂರಿಯಾಗಿ ಆಚರಿಸಲಾಯಿತು.

ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಪಟ್ಟಣದ ಮಿನಿವಿಧಾನಸೌಧದ ಮುಂಭಾಗದಿಂದ ವಿವಿಧ ಶಾಲಾ ಮಕ್ಕಳು ಪಾಂಡವ ಕ್ರೀಡಾಂಗಣದವರೆಗೆ 750ಅಡಿ ಉದ್ದ ರಾಷ್ಟ್ರಧ್ವಜ ಹಿಡಿದು ಸಾಗಿದರು. ಉಪವಿಭಾಗಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ ಧ್ವಜಾರೋಹಣ ನೆರವೇರಿಸಿದರು. ಶಾಸಕ ಸಿ.ಎಸ್.ಪುಟ್ಟರಾಜು ಅಧ್ಯಕ್ಷತೆ ವಹಿಸಿದ್ದರು. ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಈ ವೇಳೆ ಪುರಸಭಾಧ್ಯಕ್ಷೆ ಅರ್ಚನಾ ಚಂದ್ರು, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಂ.ಸಿ. ಯಶವಂತ್‌ಕುಮಾರ್, ಟಿಎಪಿಸಿಎಂಎಸ್ ಅಧ್ಯಕ್ಷ ಡಿ.ಶ್ರೀನಿವಾಸ್, ಕಿಯೋನಿಕ್ಸ್ ನಿರ್ದೇಶಕ ಮಂಜುನಾಥ್, ತಹಸೀಲ್ದಾರ್ ಎಸ್.ಎಲ್.ನಯನಾ, ಕಸಾಪ ಅಧ್ಯಕ್ಷ ಪ್ರಕಾಶ್, ಬಿಇಓ ಲೋಕೇಶ್, ಸರ್ಕಲ್ ಇನ್ಸ್‌ಪೆಕ್ಟರ್‌ಗಳಾದ ವಿವೇಕಾನಂದ, ಸುಮಾರಾಣಿ ಸೇರಿದಂತೆ ಪುರಸಭೆಯ ಎಲ್ಲಾ ಸದಸ್ಯರು, ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು.

ಮದ್ದೂರು ವರದಿ: ತಾಲೂಕಿನ ಹೆಮ್ಮನಹಳ್ಳಿ ಗ್ರಾಪಂನಿಂದ ಹುಳಗನಹಳ್ಳಿ ಗ್ರಾಮದಲ್ಲಿ ಅಮೃತ ಸರೋವರ ಯೋಜನೆಯಡಿ ಅಭಿವೃದ್ಧಿ ಮಾಡಿರುವ ರಾಮನಕಟ್ಟೆಯ ಅಂಗಳದಲ್ಲಿ ಶಾಸಕ ಡಿ.ಸಿ.ತಮ್ಮಣ್ಣ ಧ್ವಜಾರೋಹಣ ನೆರವೇರಿಸಿದರು. ಗ್ರಾಪಂ ಅಧ್ಯಕ್ಷ ಹೆಚ್.ಕೆ.ನಂದೀಶ್‌ಗೌಡ ಅಧ್ಯಕ್ಷತೆ ವಹಿಸಿದ್ದರು. ಈ ವೇಳೆ ಉಪಾಧ್ಯಕ್ಷೆ ಪದ್ಮಾ, ಸದಸ್ಯರಾದ ನಾಗೇಶ್, ಮಧುಸೂದನ್, ವೀಣಾ, ಕಮಲಾಕ್ಷಿ, ಸೌಭಾಗ್ಯ ಜ್ಯೋತಿ, ಮಹದೇವಮ್ಮ, ಅಪ್ಪಾಜಿಗೌಡ, ತಾಪಂ ಇಓ ಎಲ್.ಸಂದೀಪ್, ಆಡಳಿತಾಧಿಕಾರಿ ಧನರಾಜ್, ನರೇಗಾ ಸಹಾಯಕ ನಿರ್ದೇಶಕ ಮಂಜುನಾಥ್, ಪಿಡಿಓ ಲೀಲಾವತಿ ಇದ್ದರು.

ನಾಗಮಂಗಲ ವರದಿ: ತಾಲೂಕಿನ ಆದಿಚುಂಚನಗಿರಿ ವಿಶ್ವವಿದ್ಯಾಲಯದ ಬಿಜಿಎಸ್ ಕ್ರೀಡಾಂಗಣದಲ್ಲಿ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವನ್ನು ಅದ್ಧೂರಿಯಾಗಿ ಆಚರಿಸಲಾಯಿತು. ಈ ವೇಳೆ ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ.ಎಂ.ಎ.ಶೇಖರ್, ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಂ.ಶಿವಣ್ಣ, ಪ್ರಾಂಶುಪಾಲ ಪ್ರೊಎನ್.ರಾಮು, ಮುಖ್ಯ ಆಡಳಿತಾಧಿಕಾರಿ ಡಾ.ಎನ್.ಎಸ್. ರಾಮೇಗೌಡ ಹಾಜರಿದ್ದರು.



ಕೆ.ಆರ್.ಪೇಟೆ ತಾಲೂಕು ಆಡಳಿತದಿಂದ ಸ್ವಾತಂತ್ರ್ಯ ಹೋರಾಟರನ್ನು ಸನ್ಮಾನಿಸಲಾಯಿತು.

ಶಾಲೆಯಲ್ಲಿ ಧ್ವಜಾರೋಹಣ ಮಾಡದ ಶಿಕ್ಷಕಿ ಅಮಾನತು

ಮೇಲುಕೋಟೆ, ಆ.16– ಶಾಲೆಯಲ್ಲಿ ಧ್ವಜಾರೋಹಣ ಮಾಡದ ಹಿನ್ನೆಲೆಯಲ್ಲಿ ತಾಲೂಕಿನ ಸಿಂಗ್ರೀಗೌಡನ ಕೊಪ್ಪಲು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ನಿರ್ಮಲಾ ಮೇರಿ ಅವರನ್ನು ಬಿಇಓ ಲೋಕೇಶ್ ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ. ಶಾಲೆಯಲ್ಲಿ ಧ್ವಜಾರೋಹಣ ಮಾಡದ ಹಿನ್ನೆಲೆಯಲ್ಲಿ ಗ್ರಾಮಸ್ಥರು ಶಾಲೆ ಮುಂಭಾಗ ಮಂಗಳವಾರ ಪ್ರತಿಭಟನೆ ನಡೆಸಿ, ಶಿಕ್ಷಕಿಯನ್ನು ಅಮಾನತುಗೊಳಿಸಬೇಕು ಎಂದು ಆಗ್ರಹಿಸಿದರು. ಬೆಳಗ್ಗೆ ಶಾಲೆಗೆ ಬಂದ ಶಿಕ್ಷಕಿಯನ್ನು ಗ್ರಾಮಸ್ಥರು ತರಾಟೆಗೆ ತೆಗೆದುಕೊಂಡರು. ಸ್ಥಳಕ್ಕೆ ಬಿಇಓ ಬರಬೇಕು ಎಂದು ಪಟ್ಟು ಹಿಡಿದರು. ಬಿಇಓ ಕಚೇರಿಯ ಸಮನ್ವಯಾಧಿಕಾರಿ ಪ್ರಕಾಶ್ ಸ್ಥಳಕ್ಕೆ ಆಗಮಿಸಿ ತನಿಖೆ ನಡೆಸಿದ ಬಳಿಕ ಶಾಲೆಯಲ್ಲಿ ಧ್ವಜಾರೋಹಣ ಮಾಡದೇ ಇರುವುದು ಖಚಿತವಾಗಿದೆ. ವರದಿ ಪರಿಶೀಲನೆ ನಡೆಸಿದ ಬಿಇಓ ಅವರು ಶಿಕ್ಷಕಿ ನಿರ್ಮಲಾ ಮೇರಿ ಅವರನ್ನು ಅಮಾನತು ಮಾಡಿ ವರದಿಯನ್ನು ಮೇಲ್ಪಟ್ಟ ಅಧಿಕಾರಿಗಳಿಗೆ ಕಳುಹಿಸಿದ್ದಾರೆ.

ಜೆಡಿಎಸ್ ಅಧಿಕಾರಕ್ಕೆ ಬಂದರೆ ಸಹಕಾರಿ ಸಂಘದ ಎಆರ್, ಡಿಆರ್ ವ್ಯವಸ್ಥೆ ರದ್ದು



ಮಳವಳ್ಳಿ, ಆ.16– ಸಹಕಾರ ಸಂಘಗಳಲ್ಲಿನ ಭ್ರಷ್ಟಾಚಾರಕ್ಕೆ ಎಆರ್ ಮತ್ತು ಡಿಆರ್ ಹಂತದ ಅಧಿಕಾರಗಳು ಸಹಕಾರ ನೀಡುತ್ತಿದ್ದು, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಆ ವ್ಯವಸ್ಥೆ ತೆಗೆಯಲು ಮುಂದಾಗುತ್ತೇನೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ತಾಲೂಕಿನ ವಡ್ಡರಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಬಿಎಂಸಿ ಕೇಂದ್ರ ಹಾಗೂ ಕೆಎಂಎಫ್ ನಿರ್ದೇಶಕ ವಿ.ಎಂ. ವಿಶ್ವನಾಥ್ ಅವರ ಆಯೋಜಿಸಿದ್ದ ತಾಲೂಕಿನ ಹಾಲು ಉತ್ಪಾದಕರ ಸಹಕಾರ ಸಮ್ಮಿಲನ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬಹುತೇಕ ಸಹಕಾರ ಸಂಘಗಳು ಲಾಭದಾಯಕವಾಗಿ ನಡೆಯುತ್ತಿವೆ. ಕೆಲವೆಡೆ ಕಾರ್ಯದರ್ಶಿಗಳು ಹಾಗೂ ಕೆಲವರು ಹಣ ಲೂಟಿ ಹೊಡೆಯುತ್ತಿದ್ದು, ಇದನ್ನು ತಡೆಗಟ್ಟಲು ಎಆರ್ ಮತ್ತು ಡಿಆರ್ ಅಧಿಕಾರಿಗಳು ವಿಫಲವಾಗಿದ್ದಾರೆ. ಈ ಬಗ್ಗೆ ಚನ್ನಪಟ್ಟಣದಲ್ಲಿ ನನ್ನ ಗಮನಕ್ಕೆ ಬಂದಿದೆ. ಇಂತಹ ವ್ಯವಸ್ಥೆಯನ್ನು ತೆಗೆಯಬೇಕು ಎನ್ನುವುದು ನನ್ನ ತೀರ್ಮಾನವಾಗಿದೆ. ಹಾಲು ಉತ್ಪಾದನೆಯಿಂದ ಗ್ರಾಮೀಣ ಭಾಗದ ಜನರು ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಹಲವು ಯೋಜನೆಗಳನ್ನು ಜಾರಿಗೆ ತರುವೆ ಎಂದರು.

ಕೆಎಂಎಫ್ ನಿರ್ದೇಶಕ ವಿ.ಎಂ.ವಿಶ್ವನಾಥ್ ಮಾತನಾಡಿ, ಕಾಂಗ್ರೆಸ್ ಕಿಡಿಗೇಡಿಗಳು ಹಾಲು ನೀರು ಹಗರಣದ ಬಗ್ಗೆ ಅಪಪ್ರಚಾರ ಮಾಡುತ್ತಿದ್ದರು. ಆ ಹಗರಣವನ್ನು ಬಯಲಿಗೆ ಎಳೆದಿದ್ದು ನಮ್ಮ ಆಡಳಿತ ಮಂಡಳಿ ಎನ್ನುವುದನ್ನು ಅವರ ಮರೆಯಬಾರದು. ರಾಜ್ಯದಲ್ಲಿ ಸ್ಥಾಪನೆಯಾಗಲಿರುವ ಕ್ಷೀರ ಬ್ಯಾಂಕ್‌ಗೆ ಹೆಚ್ಚಿನ ಅನುದಾನ ಸೇರಿದಂತೆ ನಿಮಗೆ ನೀಡಿರುವ ಭರವಸೆಗಳನ್ನು ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿ ಈಡೇರಿಸುತ್ತಾರೆ ಎಂದರು.

ಜೆಡಿಎಸ್ ಯುವ ಘಟಕದ ರಾಜ್ಯ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಶಾಸಕರಾದ ಡಾ.ಕೆ.ಅನ್ನದಾನಿ, ಕೆ.ಸುರೇಶ್‌ಗೌಡ ಮಾತನಾಡಿದರು. ವೇದಿಕೆಯಲ್ಲಿ ಮನ್‌ಮುಲ್ ಅಧ್ಯಕ್ಷ ಬಿ.ಆರ್.ರಾಮಚಂದ್ರ, ಉಪಾಧ್ಯಕ್ಷ ಎಂ.ಎಸ್.ರಘುನಂದನ್, ನಿರ್ದೇಶಕರಾದ ಹೆಚ್.ಟಿ.ಮಂಜು, ಕೆ.ರವಿ, ಎನ್.ಬಾಲಕೃಷ್ಣ, ಕೆ.ರಾಮಚಂದ್ರ, ರೂಪಾ, ವಿ.ಸುಜತಾ ಕೃಷ್ಣ, ವ್ಯವಸ್ಥಾಪಕ ನಿರ್ದೇಶಕ ಪಿ.ಆರ್. ಮಂಜೇಶ್, ರಾಜ್ಯ ಒಕ್ಕಲಿಗ ಸಂಘ ಹಾಗೂ ಬಮುಲ್ ನಿರ್ದೇಶಕ ಜಯ ಮುತ್ತು, ಡಿಸಿಸಿ ಬ್ಯಾಂಕ್ ನಿರ್ದೇಶಕ ಕಾಳೇಗೌಡ, ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಡಿ.ರಮೇಶ್, ಜಿಪಂ ಮಾಜಿ ಸದಸ್ಯ ಎಂ.ಸಿ.ವೀರೇಗೌಡ, ಪುರಸಭೆ ಉಪಾಧ್ಯಕ್ಷ ಎಂ.ಟಿ.ಪ್ರಶಾಂತ್, ಸ್ಥಾಯಿ ಸಮಿತಿ ಅಧ್ಯಕ್ಷ ಪುಟ್ಟಸ್ವಾಮಿ, ಮಾಜಿ ಅಧ್ಯಕ್ಷ ದೊಡ್ಡಯ್ಯ ಇದ್ದರು.

ಮನ್‌ಮುಲ್‌ನಿಂದ ಬೆಲ್ಲದ ಬರ್ಫಿ, ಖೋವಾ ಲಾಡು ಬಿಡುಗಡೆ



ಮಂಡ್ಯ, ಆ.16– 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಮನ್‌ಮುಲ್‌ನಿಂದ ಹೊಸದಾಗಿ ತಯಾರಿಸಿದ ಬೆಲ್ಲದ ಬರ್ಫಿ ಹಾಗೂ ಖೋವಾ ಲಾಡು ನಂದಿನಿ ಸಿಹಿ ಉತ್ಪನ್ನವನ್ನು ಮನ್‌ಮುಲ್ ಅಧ್ಯಕ್ಷ ಬಿ.ಆರ್.ರಾಮಚಂದ್ರ ಮಾರುಕಟ್ಟೆಗೆ ಬಿಡುಗಡೆ ಮಾಡಿದರು.

ನಗರದ ಕೆರೆ ಅಂಗಳದಲ್ಲಿರುವ ಜಿಲ್ಲಾ ಸಹಕಾರ ಸಂಘಗಳ ಒಕ್ಕೂಟದ ಉಪಕಚೇರಿಯಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಬೆಲ್ಲದ ಬರ್ಫಿ ಹಾಗೂ ಖೋವಾ ಲಾಡು ಉತ್ಪನ್ನವನ್ನು ಸಗಟು ಹಾಗೂ ಚಿಲ್ಲರೆ ಮಾರಾಟಗಾರರು ಗ್ರಾಹಕರಿಗೆ ಹೆಚ್ಚು ತಲುಪುವಂತೆ ಮಾಡಬೇಕು ಎಂದು ತಿಳಿಸಿದರು. ಮನ್‌ಮುಲ್ ಉಪಾಧ್ಯಕ್ಷ ಎಂ.ಎಸ್.ರಘುನಂದನ್ ಮಾತನಾಡಿದರು. ಈ ಸಂದರ್ಭದಲ್ಲಿ ಮನ್‌ಮುಲ್ ನಿರ್ದೇಶಕ ಯು.ಸಿ.ಶಿವಕುಮಾರ್, ಉಪ ವ್ಯವಸ್ಥಾಪಕ ಡಾ.ಮಂಜೇಶ್‌ಗೌಡ, ಯೂನಿಯನ್ ಒಕ್ಕೂಟದ ಶಿವಕುಮಾರ್ ಸೇರಿದಂತೆ ಇತರರು ಹಾಜರಿದ್ದರು.

ಮಲ್ಟಿ ಲೆವೆಲ್ ಪಾರ್ಕಿಂಗ್ ಲಾಟ್ ಪರಿಶೀಲಿಸಿದ ಶಾಸಕ ನಾಗೇಂದ್ರ

ದಸರಾ ವೇಳೆಗೆ ಮೊದಲ ಹಂತ ಪೂರ್ಣಗೊಳಿಸಲು ಸೂಚನೆ



ಮೈಸೂರು, ಆ.16(ಜಿಎ)– ದಸರಾ ಮಹೋತ್ಸವ ಆರಂಭಕ್ಕೂ ಮುನ್ನವೇ ಮಲ್ಟಿ ಲೆವೆಲ್ ಪಾರ್ಕಿಂಗ್ ಕಾಮಗಾರಿ ಪೂರ್ಣಗೊಳಿಸಿ ಸಾರ್ವಜನಿಕರ ಸೇವೆಗೆ ನೀಡುವಂತೆ ಶಾಸಕ ಎಲ್.ನಾಗೇಂದ್ರ ಗುತ್ತಿಗೆದಾರರು ಮತ್ತು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಮೈಸೂರಿನ ಪುರಭವನ (ಟೌನ್ ಹಾಲ್) ಆವರಣದಲ್ಲಿ ಸ್ಥಗಿತಗೊಂಡಿದ್ದ ಮಲ್ಟಿ ಲೆವೆಲ್ ಪಾರ್ಕಿಂಗ್ ಲಾಟ್ ಕಾಮಗಾರಿ ಕೆಲ ತಿಂಗಳ ಹಿಂದೆ ಮತ್ತೆ ಆರಂಭವಾಗಿರುವ ಹಿನ್ನೆಲೆಯಲ್ಲಿ ಮಂಗಳವಾರ ಸ್ಥಳ ಪರಿಶೀಲನೆ ನಡೆಸಿದ ಅವರು, ಕಾಮಗಾರಿ ನಿಧಾನಗತಿಯಲ್ಲಿ ಸಾಗುತ್ತಿರುವುದನ್ನು ಕಂಡು ಸಿಟ್ಟಾದರು.


ಕಸ, ಹಳೆ ಕಟ್ಟಡಗಳ ತ್ಯಾಜ್ಯವನ್ನು ಕೂಡಲೇ ಸ್ಥಳಾಂತರಿಸಿ ಭೂಮಿಯನ್ನು ಸಮತಟ್ಟುಗೊಳಿಸಿ ವಾಹನ ನಿಲುಗಡೆಗೆ ಸೂಕ್ತ ವ್ಯವಸ್ಥೆ ಮಾಡುವಂತೆ ಇದೇ ವೇಳೆ ವಲಯ ಕಚೇರಿ ಇಂಜಿನಿಯರ್‌ಗಳಿಗೆ ಸೂಚನೆ ನೀಡಿದರು. ಈ ವೇಳೆ ಪಾಲಿಕೆ ಸದಸ್ಯ ಎಂ.ಡಿ.ನಾಗರಾಜು, ಪಾಲಿಕೆ ಉಪ ಆಯುಕ್ತ ಮಹೇಶ್, ವಲಯ ಕಚೇರಿ ಸಹಾಯಕ ಆಯುಕ್ತ ಮಂಜುನಾಥ್, ಇಂಜಿನಿಯರ್ ಕವಿತ, ಮುಖಂಡರಾದ ದಿನೇಶ್ ಗೌಡ, ಅರವಿಂದ್, ಪಂಕಜ್ ಪಾರೀಕ್ ಉಪಸ್ಥಿತರಿದ್ದರು. ಮೈಸೂರಿನಲ್ಲಿ ಜನಸಂಖ್ಯೆಯ ಜೊತೆಗೆ ವಾಹನಗಳ ಸಂಖ್ಯೆಯೂ ಹೆಚ್ಚಾಗುತ್ತಿದ್ದು, ಸಾರ್ವಜನಿಕರು ತಮ್ಮ ವಾಹನಗಳನ್ನು ಸಿಕ್ಕ ಸಿಕ್ಕ ಸ್ಥಳಗಳಲ್ಲಿ ಪಾರ್ಕಿಂಗ್ ಮಾಡುವುದು ಮಾಮೂಲಾಗಿದೆ. ಇದನ್ನು ತಪ್ಪಿಸುವ ಉದ್ದೇಶದಿಂದ ಟೌನ್ ಹಾಲ್ ಆವರಣದಲ್ಲಿ ಕಳೆದ 10 ವರ್ಷದ ಹಿಂದೆ ಆರಂಭವಾದ ಮಲ್ಟಿ ಲೆವೆಲ್ ಪಾರ್ಕಿಂಗ್ ಕಾಮಗಾರಿ ಕುಂಟುತ್ತಲೇ ಸಾಗಿತ್ತು ಫೆಬ್ರವರಿ ತಿಂಗಳಿನಲ್ಲಿ ಕಾಮಗಾರಿ ಪುನಃ ಆರಂಭವಾಗಿದ್ದು, ಮತ್ತೆ ಕುಂಟುತ್ತಲೇ ಸಾಗಿದೆ.

ಬಹುಹಂತದ ಪಾರ್ಕಿಂಗ್ ಸ್ಥಳದಲ್ಲಿ 600 ಕ್ಕೂ ಹೆಚ್ಚು ನಾಲ್ಕು–ಚಕ್ರ ವಾಹನಗಳು ಮತ್ತು ಸಾವಿರಕ್ಕೂ ಹೆಚ್ಚು ದ್ವಿಚಕ್ರ ವಾಹನಗಳ ನಿಲುಗಡೆಗೆ ಅವಕಾಶ ಕಲ್ಪಿಸಲಾಗುತ್ತದೆ. ನಗರ ಪಾಲಿಕೆಯು ಮೊದಲು ಈ ಕಾಮಗಾರಿಯನ್ನು ಹೈದರಾಬಾದ್ ಮೂಲದ ಭಾಬ್ರಿಯಾ ಅಸೋಸಿಯೇಟ್ಸ್ ಸಂಸ್ಥೆಗೆ 18.28 ಕೋಟಿ ರೂ. ಮೊತ್ತಕ್ಕೆ ಟೆಂಡರ್ ನೀಡಿತ್ತು. ಆದರೆ ಭಾಬ್ರಿಯಾ ಅಸೋಸಿಯೇಟ್ಸ್ ಕಾಮಗಾರಿಯನ್ನು ಅರ್ಧಕ್ಕೆ ನಿಲ್ಲಿಸಿ ಸದ್ದಿಲ್ಲದೆ ಕಾಲ್ಕಿತ್ತಿತು. ನಂತರ ಬಿಲ್ಲಿಂಗ್ ವಿಚಾರವಾಗಿ ಭಾಬ್ರಿಯಾ ಅಸೋಸಿಯೇಟ್ಸ್, ಮೈಸೂರು ಪಾಲಿಕೆಯ ವಿರುದ್ಧವೇ ಎರಡು ಕೇಸ್‌ಗಳನ್ನು ದಾಖಲಿಸಿತ್ತು. ಮೊದಲ ಪ್ರಕರಣದ ತೀರ್ಪು ಭಾಬ್ರಿಯಾ ಅಸೋಸಿಯೇಟ್ಸ್ ಪರವಾಗಿ ಬಂದಿದೆ. ಎರಡನೇ ಪ್ರಕರಣ ಇನ್ನೂ ವಿಚಾರಣೆ ಹಂತದಲ್ಲಿದೆ. ಎಲ್ಲವೂ ಸರಿ ಇದ್ದಿದ್ದರೆ ಯೋಜನೆಯು 2012 ರೊಳಗೆ ಪೂರ್ಣಗೊಳ್ಳಬೇಕಿತ್ತು.

ಕಾರು ಮತ್ತು ಬೈಕ್ ಪಾರ್ಕಿಂಗ್‌ಗೆ ವ್ಯವಸ್ಥೆ : ಮೈಸೂರು ಮೂಲದ ಒಂದು ಸಂಸ್ಥೆಗೆ ಮಲ್ಟಿ ಲೆವೆಲ್ ಪಾರ್ಕಿಂಗ್ ಬಾಕಿ ಕಾಮಗಾರಿಯ ಟೆಂಡರ್ ನೀಡಿದ್ದು, ಅವರು ಕಳೆದ ಫೆಬ್ರವರಿ ತಿಂಗಳಿನಿಂದ ಕಾಮಗಾರಿ ಕೈಗೊಂಡಿದ್ದಾರೆ. ಪ್ರಸ್ತುತ ನಿರ್ಮಾಣಗೊಂಡಿರುವ ಕಟ್ಟಡದಲ್ಲಿ 200 ನಾಲ್ಕು ಚಕ್ರ ವಾಹನಗಳು ಹಾಗೂ 100 ದ್ವಿಚಕ್ರವಾಹನಗಳ ನಿಲುಗಡೆಗೆ ಶೀಘ್ರವಾಗಿ ಕಾಮಗಾರಿ ಮುಗಿಸಿ, ಈ ಬಾರಿಯ ದಸರಾ ವೇಳೆಗೆ ಸಾರ್ವಜನಿಕರ ಸೌಲಭ್ಯಕ್ಕೆ ನೀಡುವ ಸಾಧ್ಯತೆ ಇದೆ. ಕಾಮಗಾರಿ ಒಂದು ಹಂತಕ್ಕೆ ಮುಗಿದಿದ್ದು, ಈ ಬಾರಿ ದಸರಾ ವೇಳೆಯಲ್ಲಿ ಮೊದಲ ಅಂತಸ್ತಿನಲ್ಲಿ ಪಾರ್ಕಿಂಗ್ ಮಾಡಬಹುದಾಗಿದೆ. ಕಾಮಗಾರಿಗೆ ಅನೇಕ ತಾಂತ್ರಿಕ ಸಮಸ್ಯೆಗಳು ಎದುರಾಗುತ್ತಿವೆ ನೆಲ ಮಹಡಿಯಲ್ಲಿ ಒಂದು ಅಡಿ ಅಗೆಯುತ್ತಿದ್ದಂತೆ ಕೊಳಚೆ ನೀರು ನಿರಂತರವಾಗಿ ಬರುತ್ತಿದ್ದು, ಅದನ್ನು ಹೊರ ಹಾಕುವುದರಲ್ಲಿಯೇ ಸಮಯ ವ್ಯರ್ಥವಾಗುತ್ತಿದೆ ಎಂದು ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಭಾರತದ 75ನೇ ಸ್ವಾತಂತ್ರ್ಯ ದಿನಾಚರಣೆಯ ಮುನ್ನಾ ದಿನ (ಭಾನುವಾರ ರಾತ್ರಿ) ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಾಷ್ಟ್ರವನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ರಾಷ್ಟ್ರಕವಿ ಕುವೆಂಪು ಅವರು ಕನ್ನಡ ಭಾಷೆಯ ಮೂಲಕ ಭಾರತೀಯ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. 'ನಾನಳಿವೆ ನೀನಳಿವೆ ನಮ್ಮೆಲುಬುಗಳ ಮೇಲೆ ಮೂಡುವುದು, ಮೂಡುವುದು ನವಭಾರತದ ಲೀಲೆ! ಎಂದು ಮಾತೃಭೂಮಿಗಾಗಿ ಬಲಿದಾನ ಮಾಡಲು ಹಾಗೂ ಸಹ ನಾಗರಿಕರ ಏಳ್ಗೆಗಾಗಿ ಶ್ರಮಿಸುವಂತೆ ಅವರು ಕರೆ ನೀಡಿದ್ದಾರೆ. 2047ರ ಭಾರತವನ್ನು ನಿರ್ಮಿಸಲು ಸಜ್ಜಾಗಿರುವ ನಮ್ಮ ದೇಶದ ಯುವ ಜನತೆಯು ಕುವೆಂಪು ಅವರು ಹೇಳಿದ ಆದರ್ಶಗಳನ್ನು ಅನುಸರಿಸಬೇಕು ಎಂಬುದು ನನ್ನ ವಿಶೇಷ ಮನವಿಯಾಗಿದೆ ಎಂದು ರಾಷ್ಟ್ರಪತಿಗಳು ಕರೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ಸಹಜವಾಗಿಯೇ ಕುವೆಂಪು ಅವರ ಈ ಪಾಂಚಜನ್ಯ ಕವನ ಸಂಕಲನದ ಬಗ್ಗೆ ದೇಶಾದ್ಯಂತ ಈಗ ತೀವ್ರ ಕುತೂಹಲ ಮೂಡಿದೆ. ನಮ್ಮ ಓದುಗರಿಗಾಗಿ ಕವನ ಸಂಕಲನದ ಪೂರ್ಣ ಪಾಠವನ್ನು ಪ್ರಕಟಿಸುತ್ತಿದ್ದೇವೆ:





ಪಾಂಚಜನ್ಯ

–ಕುವೆಂಪು

ನಡೆ ಮುಂದೆ, ನಡೆ ಮುಂದೆ,
ನುಗ್ಗಿ ನಡೆ ಮುಂದೆ!
ಜಗ್ಗದೆಯೆ, ಕುಗ್ಗದೆಯೆ,
ಹಿಗ್ಗಿ ನಡೆ ಮುಂದೆ!

ಬೆಚ್ಚ ಬಿಡು, ನೆಚ್ಚ ನೆಡು
ಕೆಚ್ಚದೆಯ ಗುಡಿಯಲ್ಲಿ;
ಸೆರೆಯ ಹರಿ, ಅರಿಯನಿರಿ,
ಹುಟ್ಟಳಿಸು ಹುಡಿಯಲ್ಲಿ!
ನಾನಳಿವೆ, ನೀನಳಿವೆ,
ನಮ್ಮೆಲುಬುಗಳ ಮೇಲೆ
ಮೂಡುವುದು, ಮೂಡುವುದು
ನವಭಾರತದ ಲೀಲೆ!
ನೊಂದ ದನಿ, ಕಣ್ಣಪನಿ,
ಬರಿದೆ ಎಂದೊರೆಯದಿರು!
ತೆತ್ತ ಹಣ, ಸತ್ತ ಹೆಣ
ಹೋಯ್ತೆಂದು ಮೊರೆಯದಿರು!
ಪೊಡವಿಯೊಳಡಗಿರುವ
ತಳಹದಿಯ ತೆಗಳುವರೆ?
ಮೆರೆಯುತಿರುವರಮನೆಯ
ಸಿರಿಯೊಂದ ಹೊಗಳುವರೆ?
ಎಲ್ಲ ಇದೆ, ಎಲ್ಲ ಇದೆ
ನಿತ್ಯತೆಯ ಗಬ್ಬದಲಿ;
ಮುಂದೆಯದು ತೋರುವುದು
ಬಿಡುಗಡೆಯ ಹಬ್ಬದಲಿ!
ನೆಚ್ಚುಗೆಡಬೇಡ ನಡೆ,
ಕೆಚ್ಚದೆಯ ಕಲಿಯೆ!

ಬೆಚ್ಚಿದರೆ, ಬೆದರಿದರೆ,
ಕಾಳಿಗದು ಬಲಿಯೆ?

ಭರತಖಂಡದ ಹಿತವೆ
ನನ್ನ ಹಿತ ಎಂದು,
ಭರತಮಾತೆಯ ಮತವೆ
ನನ್ನ ಮತ ಎಂದು.
ಭಾರತಾಂಬೆಯ ಸುತರೆ
ಸೋದರರು ಎಂದು
ಭಾರತಾಂಬೆಯ ಮುಕ್ತಿ
ಮುಕ್ತಿ ನನಗದೆಂದು,
ನುಗ್ಗು ಮುಂದಕೆ, ಧೀರ,
ಕಾಳೆಗದ ಕೊಲೆಗೆ!
ನುಗ್ಗು ಮರಣಕೆ, ವೀರ,
ಸಗ್ಗದಾ ನೆಲೆಗೆ!
ನೋಡದೋ ನೋಡಲ್ಲಿ:
ದರ್ಪರಥದಡಿಯಲ್ಲಿ
ಹೊರಳುತಿರುವಳು ತಾಯಿ
ನೆತ್ತರಿನ ಪುಡಿಯಲ್ಲಿ !
ಬಾಳನೊರೆಯಿಂದ ಹಿರಿ!

ನುಗ್ಗು, ನಡೆ, ಕಟ್ಟ ಹರಿ!
ತಡೆಯ ಬಂದವರ ಇರಿ!
ಒಲಿಯುವಳು ಜಯದ ಸಿರಿ!
ಜನ್ಮವೊಂದಳಿದರೇಂ?
ನೂರಿಹವು ಬಲಿಗೆ!
ಕಾಳೆಗದೊಳಳಿಯಲೇಂ?
ಸಾವೆ ಸಿರಿ ಕಲಿಗೆ!

ನಿಂತೇನು ನೋಡುತಿಹೆ?
ಹದುಗುವರೆ ಇಲ್ಲಿ?
ಮಸಣವಾಗಲಿ ಎದೆಯು
ರಣರಂಗದಲ್ಲಿ!
ನೆತ್ತರನು ನೋಡುವೆಯ?
ಸತ್ತವರ ನೋಡುವೆಯ?
ಕಂಕಾಲಗಳ ಗೂಡೆ?
ಮರಳುಗಳ ನೆಲೆಬೀಡೆ?
ಕಾಳಿಯಳಕುವಳೇನು
ರಕ್ಕಸರ ಬಲಿಗೆ?
ಸಮರ ರಂಗದ ನಡುವೆ
ಬೆದರಿಕೆಯೆ ಕಲಿಗೆ?

ಹಾ ನೋವು! ಹಾ ನೋವು!
ಎಂದೆಲ್ಲ ಕೂಗುವರೆ?
ಹಾ ನೀರು! ಹಾ ನೀರು!
ಎಂದಸುವ ನೀಗುವರೆ?
ಕೂಗಿಗೆದೆಗರಗದಿರು!
ಬೇನೆಯಿರೆ ಮರುಗದಿರು!
ಕಂಬನಿಯ ಕರೆಯದಿರು,
ಗುರಿಯ ಮರೆಯದಿರು,
ಕಲಿಯೆ, ಹಿಂಜರಿಯದಿರು,
ತಾಯ ತೊರೆಯದಿರು!
ಎಲುಬುಗಳ ತೊಲೆಗಳಲಿ
ಮಾಂಸದಾ ಮಣ್ಣಿನಲಿ
ನೆತ್ತರಿನ ನೀರಿನಲಿ
ಬೇನೆ ಬಿಸುಸುಯ್ಲಿನಲಿ
ಬಿಡುಗಡೆಯ ಸಿರಿಗುಡಿಯ
ಮಸಣದಲಿ ಕಟ್ಟು!
ಪಾವನದ ತಾಯಡಿಯ
ಬಲ್ಮೆಯಲಿ ಮುಟ್ಟು!
ಆತ್ಮವಚ್ಯುತವೆಂದು
ಜನ್ಮಗಳು ಬಹವೆಂದು
ಮೃತ್ಯ ನಶ್ವರವೆಂದು
ಭಾರತಿಗೆ ಜಯ ಎಂದು
ನಡೆ ಮುಂದೆ, ನಡೆ ಮುಂದೆ,
ನುಗ್ಗಿ ನಡೆ ಮುಂದೆ!
ಜಗ್ಗದೆಯೆ ಕುಗ್ಗದೆಯೆ,
ಹಿಗ್ಗಿ ನಡೆ ಮುಂದೆ!

20–9–1929

ಸುವರ್ಣ ವಿಶ್ವನಾಥ್‌ರವರ 'ಕನ್ನಡ ನಾಡಿನ ಬಣ್ಣದ ಬಾನಾಡಿಗಳು' ಪುಸ್ತಕ ಬಿಡುಗಡೆ



ಮೈಸೂರು, ಆ.16(ಎಸ್‌ಪಿಎನ್)– ವನ್ಯಜೀವಿ ಛಾಯಾಗ್ರಾಹಕ ಸುವರ್ಣ ವಿಶ್ವನಾಥ್ ರಚಿತ 'ಕನ್ನಡ ನಾಡಿನ ಬಣ್ಣದ ಬಾನಾಡಿ'ಗಳು ಪುಸ್ತಕವನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಂಗಳವಾರ ಬಿಡುಗಡೆಗೊಳಿಸಿದರು.

ಮೈಸೂರು ಜೆಎಸ್‌ಎಸ್ ಆವರಣದ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಕರ್ನಾಟಕ ಕಾವಲು ಪಡೆ ಹಾಗೂ ಸುವರ್ಣ ಪಬ್ಲಿಕೇಷನ್ ಸಹಯೋಗದೊಂದಿಗೆ ಆಯೋಜಿಸಿದ್ದ ಸಮಾರಂಭದಲ್ಲಿ ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದ ಶ್ರೀಗಳು, ನಗರದ ವಿವಿಧ ಬಡಾವಣೆಗಳಲ್ಲಿ ಶೇಖರಣೆಯಾಗುವ ತ್ಯಾಜ್ಯವನ್ನು ಹೊರವಲಯದಲ್ಲಿ ಮೈಸೂರು ನಗರ ಪಾಲಿಕೆ ಸುರಿಯುತ್ತಿದೆ. ಆದರೆ, ಪಕ್ಷಿಗಳು ಈ ತ್ಯಾಜ್ಯದಲ್ಲಿ ಸಿಗುವ ಆಹಾರ ತಿಂದು, ಪರಿಸರ ಮಾಲಿನ್ಯ ಕಡಿಮೆ ಮಾಡಲು ಸಹಕರಿಸುತ್ತಿವೆ ಎಂದರು.

ಛಾಯಾಗ್ರಾಹಕ ಸುವರ್ಣ ವಿಶ್ವನಾಥ್ ಅವರು, ಮೈಸೂರಿಂದ ಬೆಂಗಳೂರಿಗೆ ತೆರಳಿ ತಮ್ಮ ವೃತ್ತಿಯಲ್ಲಿ ಬ್ಯೂಸಿಯಾಗಿದ್ದಾರೆ. ಇದರ ನಡುವೆಯೂ ಪಕ್ಷಿಗಳ ಜೀವನ ಶೈಲಿ ಬಿಂಬಿಸುವ ಛಾಯಾಚಿತ್ರಗಳನ್ನು ತೆಗೆಯುವ ಹವ್ಯಾಸ ಬೆಳೆಸಿಕೊಂಡಿದ್ದಾರೆ. ಅದನ್ನು ಪುಸ್ತಕ ರೂಪದಲ್ಲಿ ಹೊರತಂದಿರುವುದು ಸಂತೋಷ ಸಂಗತಿ ಎಂದರು. ವನ್ಯಜೀವಿ ಛಾಯಾಚಿತ್ರಕಾರ ಕೃಪಾಕರ ಮಾತನಾಡಿ, ಮನುಷ್ಯನ ಪ್ರಯಾಣ, ಸುತ್ತಾಟಗಳು ನೀಡಿದ ಅನುಭವಗಳನ್ನು ಹಣದಲ್ಲಿ ಅಳೆಯಲಾಗದು. ಮನುಷ್ಯ ತನಗೆ ಇಷ್ಟವಾದದ್ದನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಲೇಖಕ ಕಲ್ಗುಂಡಿ ನವೀನ್ ಮಾತನಾಡಿ, '1ರಿಂದ 10ನೇ ತರಗತಿವರೆಗಿನ ಪಠ್ಯಪುಸ್ತಕಗಳಲ್ಲಿ ವನ್ಯಜೀವಿ, ಪಕ್ಷಿಗಳ ದೇಹದ ಪರಿಚಯ ಮಾಡಿಕೊಡಲಾಗುತ್ತದೆ. ಆದರೆ, ಅವುಗಳ ವರ್ತನೆ, ಜೀವನ ಕ್ರಮದ ಕುತೂಹಲ ಹುಟ್ಟಿಸುವ ಅಂಶಗಳನ್ನು ಸೇರಿಸಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು. ಶಾಂತವೇರಿ ಗೋಪಾಲಗೌಡ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಡಾ.ಸಂತೃಪ್ತ್, ಕೃತಿಯ ಲೇಖಕ ವಿಶ್ವನಾಥ್ ಸುವರ್ಣ, ಕರ್ನಾಟಕ ಕಾವಲು ಪಡೆ ಅಧ್ಯಕ್ಷ ಮೋಹನ್ ಕುಮಾರ್ ಗೌಡ, ಛಾಯಾಗ್ರಾಹಕ ಎಸ್.ಆರ್.ಮಧುಸೂದನ್, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಉಪಸ್ಥಿತರಿದ್ದರು.

ಅಂತರ ಪ್ರೌಢಶಾಲಾ ಕನ್ನಡ ಚರ್ಚಾ ಸ್ಪರ್ಧೆ

ಮೈಸೂರು, ಆ.16– ದಿನೇಶ್ ಕೋಚಿಂಗ್ ಸೆಂಟರ್ ವತಿಯಿಂದ ಜಿಲ್ಲಾ ಮಟ್ಟದ ಅಂತರ ಪ್ರೌಢಶಾಲಾ ಕನ್ನಡ ಚರ್ಚಾ ಸ್ಪರ್ಧೆಯನ್ನು ಆ.21ರ ಭಾನುವಾರ ಬೆಳಗ್ಗೆ 9.30 ಗಂಟೆಗೆ ಸರಸ್ವತಿಪುರಂ ರೋಟರಿ ಪಶ್ಚಿಮ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಸಮಾರಂಭವನ್ನು ಕೈಗಾರಿಕೋದ್ಯಮಿ ಕೆ.ವಿ.ಅನಂತ ಶಯನ ಉದ್ಘಾಟಿಸಲಿದ್ದಾರೆ. 'ಚುನಾವಣಾ ಸಮಯದಲ್ಲಿ ರಾಜಕೀಯ ಪಕ್ಷಗಳು ಘೋಷಿಸುವ ಉಚಿತ ಭಾಗ್ಯಗಳು ದೇಶದ ಅಭಿವೃದ್ಧಿಗೆ ಮಾರಕ' ಚರ್ಚಾ ವಿಷಯವಾಗಿದ್ದು, ಚಾರ್ಟೆಡ್ ಅಕೌಂಟೆಂಟ್ ಎ.ವಿಶ್ವನಾಥ್ ವಿಷಯ ಸೂಚಕರಾಗಿದ್ದಾರೆ. ಪ್ರಥಮ ಬಹುಮಾನ 3 ಸಾವಿರ ರೂ., ದ್ವಿತೀಯ ಬಹುಮಾನ 2 ಸಾವಿರ, ತೃತೀಯ ಬಹುಮಾನ ಸಾವಿರ ಹಾಗೂ ಸಮಾಧಾನಕರ (2) ತಲಾ 500 ರೂ. ವಿಜೇತ ಶಾಲೆಗೆ ಆಕರ್ಷ ಪಾರಿತೋಷಕ ನೀಡಲಾಗುವುದು. ಹೆಚ್ಚಿನ ವಿಷಯಗಳಿಗೆ ಆಯಾಯ ಶಾಲೆಯ ಮುಖ್ಯಸ್ಥರನ್ನು ಭೇಟಿಯಾಗುವುದೆಂದು ಸೆಂಟರ್‌ನ ಎನ್.ವಿ.ದಿನೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕೋಟೆಯಲ್ಲಿ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಆಚರಣೆ

ದೇಶದ ಐಕ್ಯತೆ, ಸಮಗ್ರತೆ, ಸಂಸ್ಕೃತಿ, ಪರಂಪರೆಗಳ ರಕ್ಷಣೆಗೆ ಕೈ ಜೋಡಿಸೋಣ: ಸಚಿವ ಬಿ.ಸಿ. ನಾಗೇಶ್



ಮಡಿಕೇರಿ, ಆ.16– ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಅಂಗವಾಗಿ ಕೊಡಗು ಜಿಲ್ಲಾಡಳಿತದ ವತಿಯಿಂದ 76ನೇ ಸ್ವಾತಂತ್ರ್ಯ ದಿನಾಚರಣೆ ನಗರದ ಕೋಟೆ ಆವರಣದಲ್ಲಿ ನಡೆಯಿತು. ಪ್ರಾಥಮಿಕ, ಪ್ರೌಢ ಶಿಕ್ಷಣ ಮತ್ತು ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ.ನಾಗೇಶ್ ಧ್ವಜಾರೋಹಣ ನೆರವೇರಿಸಿ, ಸ್ವಾಂತ್ರ್ಯೋತ್ಸವದ ಸಂದೇಶ ನೀಡಿದರು.

ಸ್ವಾತಂತ್ರ್ಯಕ್ಕಾಗಿ ತ್ಯಾಗ–ಬಲಿದಾನಗೈದ ಮಹನೀಯರ ಆದರ್ಶವನ್ನು ಗೌರವಿಸಿ ಸಾಮರಸ್ಯದಿಂದ ಬಾಳ್ವೆ ನಡೆಸುವ ಜವಾಬ್ದಾರಿ ನಮ್ಮದಾಗಿದೆ. ಇದೇ ಸಂದರ್ಭದಲ್ಲಿ ನಮ್ಮ ದೇಶದ ಐಕ್ಯತೆ, ಸಮಗ್ರತೆ, ಸಂಸ್ಕೃತಿ, ಪರಂಪರೆಗಳ ರಕ್ಷಣೆಗೆ ನಾವೆಲ್ಲರೂ ಕೈ ಜೋಡಿಸೋಣ ಎಂದು ಸಚಿವರು ಕರೆ ನೀಡಿದರು. ಸ್ವಾತಂತ್ರ್ಯ ಹೋರಾಟದ ಶತಮಾನದ ಇತಿಹಾಸವು ದೇಶದ ಅಭಿವೃದ್ಧಿಗೆ ಮುನ್ನೋಟವಾಗಲಿ ಎಂದು ಆಶಿಸಿದರು.

ಭಾರತದ ಸ್ವಾತಂತ್ರ್ಯ ಚಳವಳಿಯ ಸಂದರ್ಭ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಕೊಡಗಿಗೆ ಭೇಟಿ ನೀಡಿದ್ದು, ಆ ಸಂದರ್ಭ ಮಹಾತ್ಮರ ವಿಚಾರಧಾರೆ ಹಾಗೂ ಚಿಂತನೆಗಳು ಕೊಡಗಿನಲ್ಲಿ ಸ್ವಾತಂತ್ರ್ಯ ಹೋರಾಟದ ಕಿಡಿ ಹಚ್ಚಿಸಿತ್ತೆಂದು ಅಭಿಪ್ರಾಯಿಸಿದರು.

ಅಭಿವೃದ್ಧಿಯತ್ತ ದೃಢ ಹೆಜ್ಜೆ: ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಕರ್ನಾಟಕದ ಅಭಿವೃದ್ಧಿಗೆ ಹೊಸ ಆಯಾಮ ನೀಡಲು ದೃಢ ಸಂಕಲ್ಪದಿಂದ ಮುಂದಡಿಯಿಡಲಾಗುತ್ತಿದೆ ಎಂದು ವಿಶ್ವಾಸದಿಂದ ನುಡಿದರು. ಕೊಡಗು ಜಿಲ್ಲೆಯಲ್ಲಿ 'ವಿವೇಕ' ಯೋಜನೆಯಡಿ ಸರ್ಕಾರಿ ಶಾಲೆಗಳ 60 ಕೊಠಡಿಗಳ ನಿರ್ಮಾಣಕ್ಕೆ 9 ಕೋಟಿ ರೂಪಾಯಿ ಅನುದಾನಕ್ಕೆ ಅನುಮೋದನೆ ನೀಡಲಾಗಿದೆ. ಆರೋಗ್ಯ ಕೇಂದ್ರಗಳನ್ನು ಉನ್ನತೀಕರಿಸುವ ಯೋಜನೆಯಡಿ ಜಿಲ್ಲೆಯ ಮೂರ್ನಾಡಿನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ, ಕುಶಾಲನಗರ ಮತ್ತು ಪೊನ್ನಂಪೇಟೆ ಆಸ್ಪತ್ರೆಗಳನ್ನು ತಾಲೂಕು ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲಾಗುತ್ತದೆಂದು ತಿಳಿಸಿದರು.

ರಾಜ್ಯಕ್ಕೆ ಪ್ರಥಮ: ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಡಿ ಕೊಡಗು ಜಿಲ್ಲೆಯಲ್ಲಿ 3.28 ಲಕ್ಷ ಮಂದಿಗೆ ಆರೋಗ್ಯ ಕಾರ್ಡ್ ವಿತರಿಸಲಾಗಿದ್ದು, ಕೊಡಗು ಜಿಲ್ಲೆಯು ಶೇಕಡಾ 77ರಷ್ಟು ಪ್ರಗತಿ ಸಾಧಿಸಿ, ರಾಜ್ಯದಲ್ಲಿ ಪ್ರಥಮ ಸ್ಥಾನದಲ್ಲಿದೆ ಎಂದು ನಾಗೇಶ್ ಮೆಚ್ಚುಗೆಯ ನುಡಿಗಳನ್ನಾಡಿದರು.

ಸನ್ಮಾನ: ಸಮಾರಂಭದಲ್ಲಿ ಭಾರತೀಯ ಮಹಿಳಾ ಹಾಕಿ ತಂಡದ ತರಬೇತುದಾರರಾದ ಅಂಕಿತಾ ಸುರೇಶ್ ಅವರನ್ನು ಉಸ್ತುವಾರಿ ಸಚಿವರು ಸನ್ಮಾನಿಸಿ ಗೌರವಿಸಿದರು. ಇದೇ ಸಂದರ್ಭ ಸರಕಾರಿ ಶಾಲೆಗಳಲ್ಲಿ ಎಸ್ಎಸ್ಎಲ್‌ಸಿಯಲ್ಲಿ ಉನ್ನತ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ಸಚಿವರು ಹಾಗೂ ಶಾಸಕರುಗಳಾದ ಕೆ.ಜಿ. ಬೋಪಯ್ಯ, ಅಪ್ಪಚ್ಚು ರಂಜನ್ ಅವರು ವಿತರಿಸಿದರು.

ಆಕರ್ಷಕ ಪಥ ಸಂಚಲನ: ಪರೇಡ್ ಕಮಾಂಡರ್ ಚೆನ್ನಕೇಶವ ಅವರ ಮುಂದಾಳತ್ವದಲ್ಲಿ ಜಿಲ್ಲಾ ಪೊಲೀಸ್ ಹಾಗೂ ವಿವಿಧ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು, ಎನ್‌ಸಿಸಿ, ಸ್ಕೌಟ್ಸ್ ಮತ್ತು ಗೈಡ್ಸ್ ಸೇರಿದಂತೆ 18 ತಂಡಗಳಿಂದ ಆಕರ್ಷಕ ಪಥ ಸಂಚಲನ ನಡೆಯಿತು.

ಸಮಾರಂಭದಲ್ಲಿ ಕರ್ನಾಟಕ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷರಾದ ನಾಪಂಡ ಎಂ.ರವಿಕಾಳಪ್ಪ, ನಗರಸಭೆ ಅಧ್ಯಕ್ಷರಾದ ಅನಿತಾ ಪೂವಯ್ಯ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷರಾದ ಎಂ.ಪಿ.ಕೇಶವ ಕಾಮತ್, ಜಿಲ್ಲಾಧಿಕಾರಿ ಡಾ.ಬಿ.ಸಿ. ಸತೀಶ, ಕೊಡಗು ವೃತ್ತ ಮುಖ್ಯ ಅರಣ್ಯ ನಿರಂಜನ ಮೂರ್ತಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕ್ಯಾಪ್ಟನ್ ಮಲ್ಚಿರ ಎ.ಅಯ್ಯಪ್ಪ ಮೊದಲಾದವರು ಪಾಲ್ಗೊಂಡಿದ್ದರು.

ವಿರಾಜಪೇಟೆಯಲ್ಲಿ ಸ್ವಾತಂತ್ರ್ಯೋತ್ಸವ ಆಚರಣೆ



ವಿರಾಜಪೇಟೆ, ಆ.16– 76ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ವಿರಾಜಪೇಟೆ ಕರ್ನಾಟಕ ಸಂಘದ ವತಿಯಿಂದ ಏರ್ಪಡಿಸಲಾಗಿದ್ದ ಸಮಾರಂಭದಲ್ಲಿ ಅಧ್ಯಕ್ಷ ಮಾಳೇಟಿರ ಎಂ.ಬೆಲ್ಲು ಬೋಪಯ್ಯ ಅವರು ಧ್ವಜಾರೋಹಣ ನೆರವೇರಿಸಿದರು.

ಬಳಿಕ ಮಾತನಾಡಿ ಗಡಿ ಭಾಗವಾದ ವಿರಾಜಪೇಟೆ ಕರ್ನಾಟಕ ಸಂಘ ಕಳೆದ ನಾಲ್ಕು ವರ್ಷಗಳಿಂದಲೂ ಪ್ರಕೃತಿ ವಿಕೋಪ ಮತ್ತು ಕೊರೊನಾ ಕಾರಣದಿಂದ ಕನ್ನಡ ಪರ ಕಾರ್ಯಕ್ರಮಗಳನ್ನು ನಡೆಸಲು ಸಾಧ್ಯವಾಗಿಲ್ಲ. ಆದ್ದರಿಂದ ಕನ್ನಡ ನಾಡ, ಭಾಷೆಯ ಉಳಿವಿಗಾಗಿ ಮುಂದಿನ ನವೆಂಬರ್ ತಿಂಗಳಲ್ಲಿ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಕನ್ನಡ ನುಡಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಅದ್ದೂರಿಯ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಗುವುದು ಎಂದು ತಿಳಿಸಿದರು. ಧ್ವಜಾರೋಹಣ ಸಂದರ್ಭದಲ್ಲಿ ಕರ್ನಾಟಕ ಸಂಘದ ಉಪಾಧ್ಯಕ್ಷ ಸಿ.ಈ.ಗಿರೀಶ್ ಪೂಣಚ್ಚ, ಕಾರ್ಯದರ್ಶಿಗಳಾದ ಎಂ.ಬಿ.ಅರುಣ್ ಅಪ್ಪಣ್ಣ ಮತ್ತು ಎಂ.ಸಿ.ಅಶೋಕ್, ಕೋಶಾಧಿಕಾರಿ ಕೆ.ಯು.ಗಣೇಶ್ ತಮ್ಮಯ್ಯ, ಆಡಳಿತ ಮಂಡಳಿಯ ನಿರ್ದೇಶಕರಾದ ಸಿ.ಪಿ.ಕಾವೇರಪ್ಪ, ಎಂ.ಕುಸುಮ ಸೋಮಣ್ಣ, ಎ.ಎಂ.ಜೋಯಪ್ಪ, ಪಿ.ಎಸ್.ನಂದ, ಬಿ.ಎಂ.ಸುರೇಶ್, ಎಂ.ಜಿ.ಪೂಣಚ್ಚ, ಬಿ.ಆರ್. ಗಣೇಶ್, ಬಿ.ಗಣೇಶ್ ಬಿದ್ದಪ್ಪ ಮತ್ತು ಕಚೇರಿ ಕಾರ್ಯದರ್ಶಿ ಬಿ.ವಿ.ದೀಪಿಕಾ ಉಪಸ್ಥಿತರಿದ್ದರು.

ಕಾರುಗಳ ಮುಖಾಮುಖಿ ಡಿಕ್ಕಿ: ಹಲವರಿಗೆ ಗಾಯ



ಮಡಿಕೇರಿ, ಆ.16– ಮಡಿಕೇರಿ–ಕುಶಾಲನಗರ ರಸ್ತೆಯ ಸಂಪಿಗೆಕಟ್ಟೆ ಬಳಿ ಎರಡು ಕಾರುಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಸಣ್ಣ–ಪುಟ್ಟ ಗಾಯಗಳಿಂದ ಪ್ರಯಾಣಿಕರು ಪಾರಾಗಿದ್ದಾರೆ.

ಅಪಘಾತದಲ್ಲಿ ಎರಡು ಕಾರುಗಳ ಮುಂಭಾಗ ಜಖಂಗೊಂಡಿದೆ. ನಗರ ಸಂಚಾರಿ ಪೊಲೀಸರು ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿ ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ. ಎರಡು ಕಾರುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಬೀಟೆ ಮರ ಕಡಿದ ಪ್ರಕರಣ: ಇಬ್ಬರ ಬಂಧನ

ಮಡಿಕೇರಿ, ಆ.16– ಸೋಮವಾರಪೇಟೆ ತಾಲೂಕಿನ ಬಾಣಾವರ ವ್ಯಾಪ್ತಿಯ ದೊಡ್ಡೊಬ್ಬರು ಗ್ರಾಮದ ನಿವಾಸಿಯೊಬ್ಬರ ಜಾಗದಲ್ಲಿದ್ದ ಬೀಟೆ ಮರವನ್ನು ಅಕ್ರಮವಾಗಿ ಕಡಿದ ಆರೋಪದ ಮೇಲೆ ಇಬ್ಬರು ಆರೋಪಿಗಳನ್ನು ಅರಣ್ಯ ಅಧಿಕಾರಿಗಳು ಬಂಧಿಸಿದ್ದಾರೆ.

ಬಸವಹಳ್ಳಿ ನಿವಾಸಿ ಎ.ಜೆ.ಅಜಿತ್(34) ಹಾಗೂ ಕಲ್ಕಂದೂರು ಗ್ರಾಮದ ಕೆ.ಎಂ.ನಿಖಿಲ್(28) ಬಂಧಿತ ಆರೋಪಿಗಳಾಗಿದ್ದಾರೆ. ಪ್ರಕರಣದಲ್ಲಿ ಶಾಮೀಲಾಗಿರುವ ಎ.ಟಿ.ಸೋಮಶೇಖರ್(27) ಎಂಬಾತ ತಲೆಮರೆಸಿಕೊಂಡಿದ್ದು, ಅವನಿಗಾಗಿ ಶೋಧ ನಡೆಸಲಾಗುತ್ತಿದೆ. ಬೀಟೆ ಮರದ 5 ನಾಟಾಗಳು ಮತ್ತು ಮರ ಸಾಗಾಟಕ್ಕೆ ಬಳಸಿದ್ದ ಟಿಪ್ಪರ್ ಲಾರಿಯನ್ನು ವಶಕ್ಕೆ ಪಡೆಯಲಾಗಿದ್ದು, ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಕಾರ್ಯಾಚರಣೆಯಲ್ಲಿ ಸೋಮವಾರಪೇಟೆ ಆರ್‌ಎಫ್‌ಒ ಚೇತನ್ ಹೆಚ್.ಪಿ, ಡಿವೈಆರ್‌ಎಫ್‌ಒ ರಾಕೇಶ್ ಹೆಚ್.ಎಂ, ಅರಣ್ಯ ರಕ್ಷಕರಾದ ಸದಾನಂದ ಹಿಪ್ಪರಗಿ, ಪ್ರಸಾದ್ ಕುಮಾರ್, ಪ್ರಕಾಶ್, ಅರಣ್ಯ ವೀಕ್ಷಕರಾದ ಆಂಥೋನಿ ಹಾಗೂ ಕೆ.ವಿಕಾಸ್ ಪಾಲ್ಗೊಂಡಿದ್ದರು.

ದೇಶ ಸೇವೆ ಮಾಡದೆ ತಾಯ್ನಾಡಿನ ಋಣ ತೀರಿಸಲಾಗದು

ಕುಶಾಲನಗರದಲ್ಲಿ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ



ಕುಶಾಲನಗರ, ಆ.16– ದೇಶ ಸೇವೆ ಮಾಡದ ಹೊರತು ತಾಯ್ನಾಡಿನ ಋಣ ತೀರಿಸಲಾಗದು ಎಂದು ಭಾರತೀಯ ಸೇನೆಯ ನಿವೃತ್ತ ಸೇನಾಧಿಕಾರಿ ಕ್ಯಾಪ್ಟನ್ ಸುಬ್ಬಯ್ಯ ಎ.ಪಿ. ತಿಳಿಸಿದರು.

ಜ್ಞಾನ ಕಾವೇರಿ ಸ್ನಾತಕೋತ್ತರ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಚಿಕ್ಕ ಅಳುವಾರ, ಕೊಡಗು ವತಿಯಿಂದ 75ನೇ ಅಜ಼ಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ನಡೆದ ಧ್ವಜಾರೋಹಣವನ್ನು ನೆರವೇರಿಸಿ ವೇದಿಕೆಯನ್ನುದ್ದೇಶಿಸಿ ಅವರು ಮಾತನಾಡಿದರು.

ದೇಶದ ವಿಚಾರದಲ್ಲಿ ಎಲ್ಲರೂ ಒಂದಾಗಿರಬೇಕು. ನಮ್ಮ ದೇಶದಲ್ಲಿ ಪ್ರತಿಯೊಬ್ಬರೂ ಸುರಕ್ಷಿತವಾಗಿದ್ದೇವೆ. ನಮ್ಮೆಲ್ಲರ ರಕ್ಷಣೆಯ ಜವಾಬ್ದಾರಿಯನ್ನು ದೇಶದ ಗಡಿಯಲ್ಲಿ ಹಗಲಿರುಳು ಶ್ರಮಿಸುತ್ತಾ ಸೈನಿಕರು ಕಾಯುತ್ತಿದ್ದಾರೆ. ಸಮಯಕ್ಕೆ ಬೆಲೆ ಕೊಟ್ಟು ಮುನ್ನಡೆಯಬೇಕು. ದೇಶದಲ್ಲಿ ಮುಕ್ತ ಆಯ್ಕೆ ಇದೆ. ಉತ್ತಮ ಪರಿಸರ, ಜಲಸಂಪನ್ಮೂಲ ನಮ್ಮ ದೇಶದ ಅಮೂಲ್ಯವಾದ ಆಸ್ತಿ. ಭಾರತದ ಸ್ವಾತಂತ್ರಕ್ಕಾಗಿ ದುಡಿದವರು ಮತ್ತು ಅಂದಿನಿಂದ ಇಂದಿನವರೆಗೆ ದೇಶದ ಉನ್ನತಿಗೆ ದುಡಿದವರನ್ನು ಗೌರವಿಸುವುದು ದೇಶವಾಸಿಗಳಾದ ನಮ್ಮಗಳ ಕರ್ತವ್ಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಸ್ಥೆಯ ಪ್ರಭಾರ ನಿರ್ದೇಶಕರಾದ ಪ್ರೊ.ಕೆಎಸ್. ಚಂದ್ರಶೇಖರಯ್ಯರವರು, ನಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಡಲು ಹಲವಾರು ಮಹನೀಯರು ಶ್ರಮಿಸಿದ್ದಾರೆ. ಹಲವು ಜನ ತಮ್ಮ ಪ್ರಾಣವನ್ನೇ ತ್ಯಾಗ ಮಾಡಿದ್ದಾರೆ. ಅವರೆಲ್ಲರ ತ್ಯಾಗ ಮತ್ತು ಬಲಿದಾನದ ಪರಿಣಾಮವಾಗಿ ನಾವು ಇಂದು ಸ್ವಾತಂತ್ರ್ಯದ ಸವಿಯನ್ನು ಸವಿಯುತ್ತಿದ್ದೇವೆ. ಈ ಸ್ವಾತಂತ್ರವನ್ನು ಉಳಿಸಿಕೊಂಡು ಹೋಗುವುದು ಹಾಗೂ ದೇಶವನ್ನು ಶಕ್ತಿಯುತಗೊಳಿಸುವುದು ನಮ್ಮ ಕರ್ತವ್ಯ ಆಗಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಸುಬೇದಾರ್ ಜಿ.ಟಿ. ತಿಮ್ಮಯ್ಯ, ಸುಬೇದಾರ್ ಈರಪ್ಪ, ಹವಾಲದ್ದಾರ್ ಉಮೇಶ, ಹವಾಲ್ದಾರ್ ಲವ, ಸಿಆರ್‌ಪಿಎಫ್ ನಿವೃತ್ತ ಸೈನಿಕರಾದ ಯತೀಶ್ ಮತ್ತು ಪ್ರಗತಿಪರ ರೈತ ಬೇಬಿ ಅವರನ್ನು ಸನ್ಮಾನಿಸಲಾಯಿತು. ಸಮಾರಂಭದ ಬಳಿಕ ಅಮೃತ ಕಲಾ ಮಹೋತ್ಸವ ಕಾರ್ಯಕ್ರಮ ಜರುಗಿತು.

ಜ್ಞಾನ ಕಾವೇರಿ ಸ್ನಾತಕೋತ್ತರ ಕೇಂದ್ರದ ಅಭಿವೃದ್ಧಿ ಸಲಹಾ ಸಮಿತಿಯ ಸದಸ್ಯರಾದ ಕೆಬಿ. ದೇವರಾಜ್, ವಿವಿಧ ವಿಭಾಗದ ಬೋಧಕ ವರ್ಗ, ಬೋಧಕೇತರ ವರ್ಗ, ಸಂಶೋಧನಾ ವಿದ್ಯಾರ್ಥಿಗಳು ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಉಪನ್ಯಾಸಕಿ ಡಾ. ಪುಷ್ಪಾಂಜಲಿ ನಿರೂಪಿಸಿ, ಉಪನ್ಯಾಸಕ ಜ಼ಮೀರ್ ಅಹಮದ್ ಸ್ವಾಗತಿಸಿ, ಸಿಬ್ಬಂದಿ ಗಣೇಶ್ ವಂದಿಸಿದರು.

ಅಕ್ರಮ ಲಾಟರಿ, ಗೋಮಾಂಸ ಮಾರಾಟ

ಗೋಣಿಕೊಪ್ಪ ಪೊಲೀಸರಿಂದ ಇಬ್ಬರ ಸೆರೆ

ಗೋಣಿಕೊಪ್ಪ, ಆ.16– ಪ್ರತ್ಯೇಕ ಪ್ರಕರಣಗಳಲ್ಲಿ ಅಕ್ರಮ ಲಾಟರಿ ಮತ್ತು ಗೋಮಾಂಸ ಮಾರಾಟ ದಂಧೆಯನ್ನು ಪತ್ತೆ ಹಚ್ಚಿರುವ ಗೋಣಿಕೊಪ್ಪ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

ಆ.14 ರಂದು ಕೇರಳ ರಾಜ್ಯದ ಅಕ್ರಮ ಲಾಟರಿ ಮಾರಾಟ ಆರೋಪದಡಿ ತಿತಿಮತಿ ದೇವರಕಾಡು ಪೈಸಾರಿಯ ಪಿ. ಚಂದ್ರ (48)ನನ್ನು ಬಂಧಿಸಿರುವ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಕ್ರಮಗೊಂಡಿದ್ದಾರೆ. ಆರೋಪಿಯಿಂದ 7,400 ರೂ. ಮೌಲ್ಯದ 148 ಲಾಟರಿಯನ್ನು ವಶಕ್ಕೆ ಪಡೆದು, ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ. ಕಾರ್ಯಾಚರಣೆಯಲ್ಲಿ ಪೊಲೀಸ್ ಉಪ ನಿರೀಕ್ಷಕ ದೀಕ್ಷಿತ್ ಕುಮಾರ್, ಸಹಾಯಕ ಉಪನಿರೀಕ್ಷಕ ಸುಬ್ರಮಣಿ, ಸಿಬ್ಬಂದಿ ಕೃಷ್ಣ, ಕೃಷ್ಣಪ್ಪ ಇದ್ದರು.

ಗೋಮಾಂಸ ವಶ: ಹುಣಸೂರು ಭಾಗದಿಂದ ತಂದು ಗೋಮಾಂಸ ಮಾರಾಟ ಮಾಡುತ್ತಿದ್ದ ಆರೋಪದಡಿ ಬಾಳೆಲೆ ಕೊಪ್ಪಲು ನಿವಾಸಿ ಎಚ್.ಎಂ. ಅಜಯ್ (35) ಮಾಂಸ ಸಮೇತ ವಶಕ್ಕೆ ಪಡೆದು ಬಂಧಿಸಿದ್ದಾರೆ.

ಮಾಯಮುಡಿ ರಸ್ತೆ ಜಂಕ್ಷನ್‌ನಲ್ಲಿ ಅಜಯ್ ಸ್ಕೂಟರ್‌ನಲ್ಲಿ ಗೋಮಾಂಸ ಸಾಗಾಟ ಮಾಡುತ್ತಿದ್ದ ಸಂದರ್ಭ ದಾಳಿ ನಡೆಸಲಾಗಿದೆ. ಈ ಸಂದರ್ಭದಲ್ಲಿ ಸುಮಾರು 12 ಸಾವಿರ ಮೌಲ್ಯದ 40 ಕೆ. ಜಿ. ಮಾಂಸ ವಶಕ್ಕೆ ಪಡೆದು ಪ್ರಕರಣ ದಾಖಲಿಸಲಾಗಿದೆ. ಆರೋಪಿಯನ್ನು ಪೊನ್ನಂಪೇಟೆ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ನ್ಯಾಯಾಂಗ ಬಂಧನ ವಿಧಿಸಿದೆ. ಕಾರ್ಯಾಚರಣೆ ಸಂದರ್ಭ ಪೊಲೀಸ್ ಉಪನಿರೀಕ್ಷಕ ದೀಕ್ಷಿತ್ ಕುಮಾರ್, ಸಹಾಯಕ ಉಪನಿರೀಕ್ಷಕ ಸುಬ್ರಮಣಿ, ಸಿಬ್ಬಂದಿ ಕೃಷ್ಣ, ಹನೀಫ್, ದೇವೇಂದ್ರ ನಾಯಕ್, ಕೃಷ್ಣಪ್ಪ, ಬಾಳೆಲೆ ಉಪ ಠಾಣೆ ಸಿಬ್ಬಂದಿ ಸಂತೋಷ್ ಇದ್ದರು.

ಕುರುಬನಕಟ್ಟೆ ಶ್ರೀಚನ್ನಯ್ಯ, ಶ್ರೀಲಿಂಗಯ್ಯ ಕಂಡಾಯಗಳ ಅದ್ದೂರಿ ಮೆರವಣಿಗೆ



ಚಾಮರಾಜನಗರ ಆ.15– ನಗರದ 15 ನೇ ವಾರ್ಡ್‌ನ ಬಾಬುಜಗಜೀವನ್ ರಾಂ ಬಡಾವಣೆಯ ಶ್ರೀ ಮಂಟೇಸ್ವಾಮಿ ದೇವಸ್ಥಾನ ಅಭಿವೃದ್ಧಿ ಸಮಿತಿ ವತಿಯಿಂದ 6ನೇ ವರ್ಷದ ಕುರುಬನಕಟ್ಟೆ ಕ್ಷೇತ್ರದ ಶ್ರೀ ಚನ್ನಯ್ಯ ಮತ್ತು ಶ್ರೀ ಲಿಂಗಯ್ಯ ಕಂಡಾಯಗಳ ಮಹೋತ್ಸವ ನಗರದ ಪ್ರಮುಖ ಬೀದಿಗಳಲ್ಲಿ ಸೋಮವಾರ ಸಂಜೆ ಅದ್ದೂರಿಯಾಗಿ ನಡೆಯಿತು.

ನಗರದ ದೊಡ್ಡ ಅರಸನ ಕೊಳದ ದೇವಾಲಯದ ಮುಂಭಾಗ ನಾನಾ ಗ್ರಾಮದ ಕಂಡಾಯಗಳ ಸತ್ತಿಗೆ ಸುರಪಾನಿಯೊಂದಿಗೆ ಹೂವು ಹೊಂಬಾಳೆ ಅಲಂಕಾರ ಮಾಡಿಕೊಂಡು, ಬೆಳ್ಳಿ ರಥ ಸಾರೋಟಿನಲ್ಲಿ ಶ್ರೀ ಮಂಟೇಸ್ವಾಮಿ ಭಾವಚಿತ್ರದೊಂದಿಗೆ ನಗಾರಿ, ಪೂಜಾಕುಣಿತ, ಡೊಳ್ಳು ಕುಣಿತ, ಗೊರವರ ಕುಣಿತ, ವೀರಗಾಸೆ, ಚಿಲಿಪಿಲಿ, ಗಾಡಿಗೊಂಬೆ, ಬ್ಯಾಂಡ್‌ಸೆಟ್, ಮಂಗಳವಾದ್ಯ, ಕೊಂಬು ಕಹಳೆ, ಜಾನಪದ ಕಲಾ ತಂಡಗಳೊಂದಿಗೆ ನಗರದ ಪ್ರಮುಖ ಬೀದಿಗಳಲ್ಲಿ ಅದ್ದೂರಿ ಮೆರವಣಿಗೆ ನಡೆಯಿತು. ಇದೇ ವೇಳೆ ಶ್ರೀ ಮಂಟೇಸ್ವಾಮಿ ದೇವಸ್ಥಾನ ಅಭಿವೃದ್ಧಿ ಸಮಿತಿ ಪದಾಧಿಕಾರಿಗಳು, ಮುಖಂಡರು, ಕುಲಸ್ಥರು ಭಾಗವಹಿಸಿದ್ದರು.

ಚಾ.ನಗರದಲ್ಲಿ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ



ಚಾಮರಾಜನಗರ, ಆ.16– ವಸತಿ, ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ವಿ. ಸೋಮಣ್ಣ ಅವರು ಜಿಲ್ಲಾಡಳಿತದ ವತಿಯಿಂದ ನಗರದ ಡಾ. ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ 76ನೇ ಸ್ವಾತಂತ್ರ್ಯ ದಿನಾಚರಣೆಯ ಅಮೃತ ಮಹೋತ್ಸವದ ಧ್ವಜಾರೋಹಣ ನೆರವೇರಿಸಿ ವಿವಿಧ ಇಲಾಖೆಗಳ ತುಕಡಿಗಳಿಂದ ಗೌರವ ವಂದನೆ ಸ್ವೀಕರಿಸಿದರು.

ಡಿ.ಆರ್. ಕೇಂದ್ರ ಸ್ಥಾನದ ಪೊಲೀಸ್, ಸಿವಿಲ್ ಪೊಲೀಸ್ ತುಕಡಿ, ಅಬಕಾರಿ, ಅರಣ್ಯ, ಗೃಹರಕ್ಷಕ ದಳ, ಬಂಜಾರ ಇಂಡಿಯನ್ ಶಾಲೆ, ಜೆಎಸ್‌ಎಸ್ ಹಾಗೂ ಸಂತ ಜೋಸೆಫರ ಪ್ರೌಢಶಾಲೆ, ಕೇಂದ್ರೀಯ ವಿದ್ಯಾಲಯ, ನವೋದಯ ವಿದ್ಯಾಲಯ, ಸ್ಕೌಟ್ಸ್ ಮತ್ತು ಗೈಡ್ಸ್, ಎಂ.ಸಿ.ಎಸ್. ಪ್ರೌಢಶಾಲೆ, ಸಂತ ಪೌಲರ ಪ್ರಾಥಮಿಕ ಶಾಲೆ, ಎಂ.ಇ.ಟಿ ಪ್ರೌಢಶಾಲೆ, ಆದರ್ಶ ವಿದ್ಯಾಲಯ, ಸೇವಾಭಾರತಿ ಪ್ರೌಢಶಾಲೆ, ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳು ಜಿಲ್ಲಾ ಸಶಸ್ತ್ರ ಪೊಲೀಸ್ ಪಡೆಯ ಹಿಮ್ಮೇಳದೊಂದಿಗೆ ನಡೆಸಿಕೊಟ್ಟ ಆಕರ್ಷಕ ಪಥಸಂಚಲನ ಎಲ್ಲರ ಗಮನ ಸೆಳೆಯಿತು.

ಇದೇ ವೇಳೆ ಗಣ್ಯರು ರಾಷ್ಟ್ರ ನಾಯಕರಾದ ಮಹಾತ್ಮ ಗಾಂಧೀಜಿ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಭಾವಚಿತ್ರಗಳಿಗೆ ಪುಷ್ಪಾರ್ಚನೆ ನೆರವೇರಿಸಿದರು. ಸ್ವಾತಂತ್ರ್ಯಕ್ಕಾಗಿ ಪ್ರಾಣತ್ಯಾಗ ಮಾಡಿದ ಹೋರಾಟ ಮಾಡಿದ ರಂಗಯ್ಯ, ಮರಿಯ ಪ್ರಕಾಶ್ ಅವರುಗಳ ಕುಟುಂಬಕ್ಕೆ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸ್ಮರಣಿಕೆ ನೀಡಿ ಸನ್ಮಾನಿಸಲಾಯಿತು. ಅಲ್ಲದೇ ಅರ್ಚರಿ, ಫೆನ್ಸಿಂಗ್ ಹಾಗೂ ಕತ್ತಿವರಸೆ ಕ್ರೀಡೆಗಳಲ್ಲಿ ರಾಷ್ಟ್ರಮಟ್ಟದಲ್ಲಿ ಭಾಗವಹಿಸಿ ವಿಜೇತರಾದ ಕ್ರೀಡಾಪಟುಗಳನ್ನು ಹಾಗೂ 2022ರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತಿಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಮತ್ತು ಆಯುಷ್ಮಾನ್ ಭಾರತ್ ಪ್ರಧಾನಮಂತ್ರಿ ಜನ ಆರೋಗ್ಯ ಯೋಜನಾ ಆರೋಗ್ಯ ಕರ್ನಾಟಕ ಅನುಷ್ಠಾನದಲ್ಲಿ ಉತ್ತಮ ಸಾಧನೆಗೈದ ಚಾಮರಾಜನಗರ ವೈದ್ಯಕೀಯ ಕಾಲೇಜಿಗೆ ಪ್ರಶಂಸನಾ ಪತ್ರ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಪ್ರೌಢಶಾಲೆ, ಯುನಿವರ್ಸ್ ಆಂಗ್ಲ ಮಾಧ್ಯಮ ಶಾಲೆ, ಸೇವಾ ಭಾರತಿ ವಿದ್ಯಾಸಂಸ್ಥೆ, ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಹಾಗೂ ಸಂತ ಜೋಸೆಫರ ಪ್ರೌಢಶಾಲೆಯ ವಿದ್ಯಾರ್ಥಿಗಳು ನಡೆಸಿಕೊಟ್ಟ ದೇಶಭಕ್ತಿ ಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ವಸತಿ ನಿಲಯಗಳ ವಿದ್ಯಾರ್ಥಿಗಳು ನಡೆಸಿಕೊಟ್ಟ ಒಬವ್ವ ಆತ್ಮರಕ್ಷಣಾ ಕಲೆ ಕರಾಟೆ ಪ್ರದರ್ಶನ ಎಲ್ಲರ ಮನಸೂರೆಗೊಂಡವು. ಪಥಸಂಚಲನದಲ್ಲಿ ಪಾಲ್ಗೊಂಡು ವಿಜೇತರಾದ ತುಕಡಿಗಳಿಗೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿದ ವಿದ್ಯಾರ್ಥಿಗಳಿಗೆ ಗಣ್ಯರು ನೆನಪಿನ ಕಾಣಿಕೆ ಹಾಗೂ ಪ್ರಮಾಣ ಪತ್ರ ವಿತರಿಸಿದರು. ಬಳಿಕ ಕ್ರೀಡಾಂಗಣದ ಎಡಭಾಗದಲ್ಲಿ ಸ್ವಸಹಾಯ ಸಂಘಗಳು ತಯಾರಿಸಿದ್ದ ಕಿರು ಉತ್ಪನ್ನಗಳ ಪ್ರದರ್ಶನವನ್ನು ವೀಕ್ಷಿಸಿದ ಜಿಲ್ಲಾ ಉಸ್ತುವಾರಿ ಸಚಿವರು ಸ್ವಸಹಾಯ ಗುಂಪುಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಸಂಘದ ಸದಸ್ಯರಿಂದ ಕಿರುಉತ್ಪನ್ನಗಳನ್ನು ಖರೀದಿಸಿದರು.

ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಅಧ್ಯಕ್ಷತೆ ವಹಿಸಿದ್ದರು. ಕಾವೇರಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜಿ. ನಿಜಗುಣರಾಜು, ನಗರಸಭೆ ಅಧ್ಯಕ್ಷ ಸಿ.ಎಂ. ಆಶಾ, ಡಿಸಿ ಚಾರುಲತಾ ಸೋಮಲ್, ಎಸ್ಪಿ ಟಿ.ಪಿ. ಶಿವಕುಮಾರ್, ಜಿಪಂ ಸಿಇಓ ಕೆ.ಎಂ. ಗಾಯಿತ್ರಿ, ಎಡಿಸಿ ಎಸ್. ಕಾತ್ಯಾಯಿನಿದೇವಿ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್. ಸುಂದರರಾಜು. ಅಧಿಕಾರಿಗಳು, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಇಂದು ನಗರಕ್ಕೆ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷರ ಭೇಟಿ



ಚಾಮರಾಜನಗರ, ಆ.16– ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷರಾದ ಎಂ. ಶಿವಣ್ಣ (ಕೋಟೆ) ಅವರು ಆಗಸ್ಟ್ 17ರಂದು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಆಗಸ್ಟ್ 17ರಂದು ಮಧ್ಯಾಹ್ನ 12 ಗಂಟೆಗೆ ಚಾಮರಾಜನಗರಕ್ಕೆ ಆಗಮಿಸಿ ಪೌರಕಾರ್ಮಿಕರು ಮತ್ತು ಮುಖಂಡರ ಜೊತೆ ಚರ್ಚೆ ನಡೆಸುವರು. ಮಧ್ಯಾಹ್ನ 3 ಗಂಟೆಗೆ ಪೌರಕಾರ್ಮಿಕರ ಕುಂದು ಕೊರತೆಗಳ ಬಗ್ಗೆ ಅಧಿಕಾರಿಗಳೊಡನೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಭೆ ನಡೆಸುವರು. ಸಂಜೆ 5 ಗಂಟೆಗೆ ಬೆಂಗಳೂರಿಗೆ ತೆರಳುವರು ಎಂದು ಪ್ರಕಟಣೆ ತಿಳಿಸಿದೆ.

ನಾಳೆ ಉಸ್ತುವಾರಿ ಸಮಿತಿ ಪರಿಶೀಲನಾ ಸಭೆ

ಚಾಮರಾಜನಗರ, ಆ.16– ಜಿಲ್ಲಾ ಮಟ್ಟದ ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ ಪರಿಶೀಲನಾ ಸಭೆಯು ಲೋಕಸಭಾ ಸದಸ್ಯ ವಿ. ಶ್ರೀನಿವಾಸ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಆ. 18 ರಂದು ಬೆಳಗ್ಗೆ 11 ಗಂಟೆಗೆ ಜಿಪಂ ಸಭಾಂಗಣದಲ್ಲಿ ನಿಗದಿಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುಡಿಗುಂಡ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಹಣ ದುರ್ಬಳಕೆ ಆರೋಪ: ಮಹಿಳೆಯರ ಪ್ರತಿಭಟನೆ

• 2 ಗಂಟೆಗಳ ಕಾಲ ಪ್ರತಿಭಟನೆ ಹಿನ್ನೆಲೆ ಒಂದು ಸಂಘಕ್ಕೆ 50 ಸಾವಿರ ನೀಡಿ ಸಾಗ ಹಾಕಿದ ಅಧ್ಯಕ್ಷ • ಉಳಿದ ಸಂಘದ ಹಣ ಒಂದು ವಾರದಲ್ಲಿ ನೀಡುವುದಾಗಿ ಅಧ್ಯಕ್ಷರ ಭರವಸೆ



ಕೊಳ್ಳೇಗಾಲ ಪಟ್ಟಣದ ಮುಡಿಗುಂಡ ಪಿಎಸಿಸಿ ಬ್ಯಾಂಕ್ ಮುಂಭಾಗ ಮಹಿಳೆಯರು ತಮ್ಮ ಖಾತೆಯಲ್ಲಿರುವ ಹಣ ಹಿಂತಿರುಗಿಸುವಂತೆ ಆಗ್ರಹಿಸಿ ಪ್ರತಿಭಟಿಸಿದರು

ಕೊಳ್ಳೇಗಾಲ, ಆ.16– ಮಹಿಳಾ ಸ್ವಸಹಾಯ ಸಂಘಗಳ ಹಣವನ್ನು ಮುಡಿಗುಂಡ ಕೃಷಿ ಪತ್ತಿನ ಸಹಕಾರ ಸಂಘ ದುರ್ಬಳಕೆ ಮಾಡಿಕೊಂಡಿದ್ದು, ಕಳೆದ ಒಂದು ತಿಂಗಳಿಂದಲೂ ನಮ್ಮ ಖಾತೆಯಲ್ಲಿನ ಹಣ ನೀಡಲು ಸತಾಯಿಸುತ್ತಿದ್ದಾರೆ ಎಂದು ಆರೋಪಿಸಿ ಮಹಿಳಾ ಸದಸ್ಯರು ಮಂಗಳವಾರ ಪ್ರತಿಭಟನೆ ನಡೆಸಿದರಲ್ಲದೆ ತಮ್ಮ ಉಳಿತಾಯದ ಹಣ ನೀಡುವವರೆಗೂ ಸ್ಥಳ ಬಿಟ್ಟು ಕದಲುವುದಿಲ್ಲ ಎಂದು ಪಟ್ಟು ಹಿಡಿದು ಆಕ್ರೋಶ ವ್ಯಕ್ತಪಡಿಸಿದರು.

ಕುಣಗಳ್ಳಿ ರಂಗಸ್ವಾಮಿ ನೇತೃತ್ವದಲ್ಲಿ ಗ್ರಾಮದ ನಂಜುಂಡೇಶ್ವರ ಮಹಿಳಾ ಸಂಘ, ಅರೇಪಾಳ್ಯ ಮಹದೇಶ್ವರ ಸಂಘದ ಪ್ರತಿನಿಧಿಗಳು ಸುಮಾರು ಎರಡು ಗಂಟೆಗಳ ಕಾಲ ಪ್ರತಿಭಟನೆ ನಡೆಸಿ ತಮ್ಮ ಹಣ ಹಿಂತಿರುಗಿಸುವಂತೆ ಆಗ್ರಹಿಸಿದರು. ಈ ವೇಳೆ ಅರೇಪಾಳ್ಯದ ಮಹಿಳಾ ಪ್ರತಿನಿಧಿ ಶಿಲ್ಪಾ ಮಾತನಾಡಿ, ಸಬೂಬು ಹೇಳುವುದೇ ಇವರ ಖಯಾಲಿಯಾಗಿದೆ. ಹೇಳುವವರು, ಕೇಳುವವರೆ ಇಲ್ಲದಾಗಿದೆ. ನಾವೆಲ್ಲರೂ ನಮ್ಮ ಕೆಲಸ ಕಾರ್ಯ ಬಿಟ್ಟು ದಿನ ಬರುತ್ತಿದ್ದೆವೆ, ಜುಲೈ 15ರಂದು, ಬ್ಯಾಂಕ್ ಖಾತೆಗೆ 20 ಮಂದಿ 59 ಸಾವಿರ ಹಣ ಕಟ್ಟಿದ್ದೆವೆ, ಕಳೆದ 17 ದಿನದಿಂದಲೂ ಹಣ ತೆಗೆದುಕೊಳ್ಳಲು ಬಂದರೆ, ಇಂದು ಬನ್ನಿ, ನಾಳೆ ಬನ್ನಿ ಎಂದು ಸಬೂಬು ಹೇಳುತ್ತಿದ್ದಾರೆ, ಹಾಗಾಗಿ ಹಣ ದುರ್ಬಳಕೆ ಮಾಡಿಕೊಂಡ ವ್ಯವಸ್ಥಾಪಕರು, ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಬೇಕು, ನಮಗೆ ಈ ದಿನವೇ ನಮ್ಮ ಖಾತೆಯಲ್ಲಿರುವ ಹಣವನ್ನು ಹಿಂತಿರುಗಿಸಿ ನಮ್ಮ ಖಾತೆ ಮುಕ್ತಾಯಗೊಳಿಸಿಬೇಕು ಎಂದು ಆಗ್ರಹಿಸಿದರು,

ಅಧ್ಯಕ್ಷರು ಅಸಹಾಯಕರಾಗಿದ್ದಾರೆ: ನಮ್ಮ ಹಣ ದುರ್ಬಳಕೆಯಾಗಿದ್ದರಿಂದಲೇ, ಸಂಜೆ ಬನ್ನಿ, ನಾಳೆ ಬನ್ನಿ ಅನ್ನುತ್ತಿದ್ದಾರೆ. ಈ ಸಂಬಂಧ ಸಂಘದ ಅಧ್ಯಕ್ಷರಾದ ಮರಿಸ್ವಾಮಿ ಅವರು ವರಲಕ್ಷ್ಮಿ ಹಬ್ಬ ಆಗಲಿ, ಕುಳಿತು ಮಾತನಾಡಿ ಸಮಸ್ಯೆ ಬಗೆಹರಿಸೋಣ ಅಂದಿದ್ದರು. ಆದರೆ ಈಗ ಅವರು ಅಸಹಾಯಕರಾಗಿದ್ದಾರೆ. ಹಾಗಾಗಿ ನಾವು ಇಂದು ಪ್ರತಿಭಟನೆ ನಡೆಸಬೇಕಾಯಿತು. ಈ ದಿನ ನಮ್ಮ ಬ್ಯಾಂಕ್‌ಗೆ ವಿಶೇಷ ರಜೆ ಎಂದು ಮ್ಯಾನೇಜರ್ ರಾಮು ಹೇಳುತ್ತಿದ್ದಾರೆ, ನಮಗೆ ಈದಿನ ಹಣ ನೀಡದಿದ್ದಲ್ಲಿ ಈ ಸಂಬಂಧ ಪೊಲೀಸ್ ಠಾಣೆಗೆ ದೂರು ನೀಡಿ ಮುಂದಿನ ಹೋರಾಟ ನಡೆಸುತ್ತೇವೆ ಎಂದು ಎಚ್ಚರಿಸಿದರು. ಕುಣಗಳ್ಳಿ ಸಂಘಕ್ಕೂ 76 ಸಾವಿರ ನೀಡಬೇಕಿದೆ ಎಂದರು.

ಪ್ರತಿಭಟನೆ ಹಿನ್ನೆಲೆ ಎಚ್ಚೆತ್ತ ಸಂಘದ ಅಧ್ಯಕ್ಷ, ನಿರ್ದೇಶಕರು ಹಾಗೂ ವ್ಯವಸ್ಥಾಪಕರು ಅರೇಪಾಳ್ಯ ಸಂಘಕ್ಕೆ 50 ಸಾವಿರ ನಗದು ನೀಡಿ ಸಮಾಧಾನ ಪಡಿಸಿದರು. ಕುಣಗಳ್ಳಿ ಸಂಘಕ್ಕೆ ಒಂದು ವಾರದಲ್ಲಿ ಹಣ ನೀಡಲಾಗುವುದು ಎಂದು ಭರವಸೆ ನೀಡಿದರು. ಅಧ್ಯಕ್ಷ ಮರಿಸ್ವಾಮಿ ಪ್ರತಿಭಟನಾಕಾರರ ಮನವೊಲಿಸಿ ಅರೇಪಾಳ್ಯ ಸಂಘದ ಸದಸ್ಯರಿಗೆ 50 ಸಾವಿರ ನಗದು ನೀಡಿ, ಶೀಘ್ರದಲ್ಲೇ ಇನ್ನುಳಿದ ಹಣ ನೀಡಿ ನಿಮ್ಮ ಖಾತೆ ಮುಕ್ತಾಯಗೊಳಿಸುವುದಾಗಿ ಭರವಸೆ ನೀಡಿದರು.

ಇದೇ ವೇಳೆ ಕೆಲ ರೈತರಿಂದ ಸಾಲಮನ್ನಾದ ಹಣ ದುರ್ಬಳಕೆ ಕುರಿತು ಆರೋಪವೂ ಕೇಳಿ ಬಂದಿತು. ಈ ಸಂದರ್ಭದಲ್ಲಿ ಮಹಿಳಾ ಸ್ವಸಹಾಯ ಸಂಘ ಪ್ರತಿನಿಧಿ ಸೌಮ್ಯ, ವಿದ್ಯಾಂಭ, ನೇತ್ರ, ನಂಜಮ್ಮ, ಜಯಮ್ಮ, ಶಿಲ್ಪಾ, ಶಾರದಾ ಮಣಿ, ಸುಮತಿ, ಚನ್ನಾಜಮ್ಮ, ಮಹದೇವಮ್ಮ, ಸೌಮ್ಯ ಇನ್ನಿತರರು ಇದ್ದರು.

ಬಾಲಕಿ ಮೇಲೆ ಅತ್ಯಾಚಾರ: ವೃದ್ಧನ ಸೆರೆ

ಬೇಗೂರು(ಗುಂಡ್ಲುಪೇಟೆ), ಆ.16– ವೃದ್ಧನೋರ್ವ ಬಾಲಕಿ ಮೇಲೆ ಅತ್ಯಾಚಾರವೆಸಗಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ಬೇಗೂರಿನಲ್ಲಿ ನಡೆದಿದೆ.

ಗ್ರಾಮದ ವಾಸಿ ಮಹದೇವಶೆಟ್ಟಿ (60) ಎಂಬಾತ ಈ ಕೃತ್ಯವನ್ನು ಎಸಗಿದ್ದಾನೆ. ಮನೆಯಲ್ಲಿ ಈತನ ಪತ್ನಿ ಮತ್ತು ಬಾಲಕಿಯ ತಾಯಿ ಇಬ್ಬರು ಕೆಲಸಕ್ಕೆ ತೆರಳಿದ್ದ ವೇಳೆ 15 ವರ್ಷದ ಬಾಲಕಿಯನ್ನು ತನ್ನ ಮನೆಗೆ ಕರೆದೊಯ್ದು ಅತ್ಯಾಚಾರ ಎಸಗಿ ಗಾಯಗೊಳಿಸಿದ್ದಾನೆ ಎನ್ನಲಾಗಿದೆ. ಬಾಲಕಿಯ ತಾಯಿ ನೀಡಿದ ದೂರಿನ ಮೇರೆಗೆ ಬಾಲಕಿಯನ್ನು ಆಸ್ಪತ್ರೆಗೆ ದಾಖಲು ಮಾಡಿದ ಪೊಲೀಸರು ಆರೋಪಿಯನ್ನು ವಶಕ್ಕೆ ಪಡೆದು ಪ್ರಕರಣ ದಾಖಲು ಮಾಡಿಕೊಂಡು ತನಿಖೆ ಮುಂದುವರೆಸಿದ್ದಾರೆ.

ನಾಳೆ ತಾಲೂಕು ಮಟ್ಟದ ದಸರಾ ಕ್ರೀಡಾಕೂಟ

ಚಾಮರಾಜನಗರ, ಆ.16– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಂಯುಕ್ತಾಶ್ರಯದಲ್ಲಿ ಚಾಮರಾಜನಗರ ತಾಲೂಕು ಮಟ್ಟದ ದಸರಾ ಕ್ರೀಡಾಕೂಟವನ್ನು ಆ.18 ರಂದು ಬೆಳಿಗ್ಗೆ 10ಗಂಟೆಗೆ ನಗರದ ಡಾ. ಬಿ.ಆರ್ ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಅಧ್ಯಕ್ಷತೆ ವಹಿಸಿ ಉದ್ಘಾಟನೆ ನೆರವೇರಿಸುವರು. ನಗರಸಭೆ ಅಧ್ಯಕ್ಷರಾದ ಆಶಾ ನಟರಾಜು, ಕಾವೇರಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಜಿ. ನಿಜಗುಣರಾಜು, ನಗರಸಭೆ ಉಪಾಧ್ಯಕ್ಷರಾದ ಪಿ. ಸುಧಾ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ವಿಶ್ವಶಾಂತಿ ನಿಕೇತನ ಆಶ್ರಮದ ಸ್ವಾಮಿ ಪ್ರಣವಾನಂದ ನಿಧನ



ಚಾಮರಾಜನಗರ, ಆ.16– ಬಿಳಿಗಿರಿರಂಗನ ಬೆಟ್ಟದ ವಿಶ್ವಶಾಂತಿ ನಿಕೇತನ ಆಶ್ರಮದ ಸ್ವಾಮಿ ಪ್ರಣವಾನಂದ (84) ಅವರು ಮಂಗಳವಾರ ಬೆಳಗ್ಗೆ ನಿಧನರಾದರು.

ಕಳೆದ ಮೂರು ನಾಲ್ಕು ದಿನಗಳಿಂದ ಆರೋಗ್ಯದಲ್ಲಿ ಸ್ವಲ್ಪ ವ್ಯತ್ಯಾಸವಾದ ಹಿನ್ನೆಲೆಯಲ್ಲಿ ಚಾಮರಾಜನಗರದ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಉಡುಪಿ ಜಿಲ್ಲೆ ಕಟ್ಟಪಾಡಿ ಗ್ರಾಮದವರಾದ ಸ್ವಾಮೀಜಿ ಅವರು ಕಳೆದ 18 ವರ್ಷಗಳಿಂದ ಈ ಆಶ್ರಮದಲ್ಲಿ ಇದ್ದರು. ವಿಶ್ವಶಾಂತಿ ನಿಕೇತನದ ಸ್ವಾಮಿ ನಿರ್ಮಲಾನಂದರ ನಿಧನದ ನಂತರ ಇದ್ದಂತ ಬ್ರಹ್ಮದೇವರ ನಂತರ ಇವರು ಇಲ್ಲಿ ಇದ್ದರು. ನಾಳೆ (ಬುಧವಾರ) ಬೆಳಗ್ಗೆ 10 ಗಂಟೆಗೆ ಬಿಳಿಗಿರಿರಂಗನ ಬೆಟ್ಟದಲ್ಲಿ ಇವರ ಅಂತ್ಯಕ್ರಿಯೆ ನಡೆಯಲಿದೆ ಇವರ ನಿಧನದ ಸುದ್ದಿ ತಿಳಿಯುತ್ತಿದ್ದಂತೆ ಕೊಳ್ಳೇಗಾಲ ಶಾಸಕ ಎನ್ ಮಹೇಶ್, ವನ್ಯಜೀವಿ ಮಂಡಳಿಯ ಮಲ್ಲೇಶಪ್ಪ, ರಾಮಕೃಷ್ಣಾಶ್ರಮದ ಸ್ವಾಮಿ ಗುರುಚರಣ್ ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು ಅಂತಿಮ ದರ್ಶನ ಪಡೆದರು.

ಮೈಸೂರು ಮಿತ್ರ ಬುಧವಾರ 17 ಆಗಸ್ಟ್ 2022

ಸಿದ್ದರಾಮಯ್ಯ ಸಿಎಂ ಆಗಬೇಕು ಎಂದು ಆಸೆ ಪಡುವವರಲ್ಲಿ ನಾನೂ ಒಬ್ಬ

ಬಿಜೆಪಿಗೆ ಆಘಾತ ಉಂಟು ಮಾಡಿದ ಸಚಿವ ಶ್ರೀರಾಮುಲು ಹೇಳಿಕೆ





ಬಳ್ಳಾರಿ, ಆ. 16– ಭಗವಂತ ಅವಕಾಶ ಕೊಟ್ಟರೆ ಕಾಂಗ್ರೆಸ್ ಪಕ್ಷದಿಂದ ಸಿದ್ದರಾಮಯ್ಯ ಅವರು ಮತ್ತೆ ಮುಖ್ಯಮಂತ್ರಿಯಾಗಲಿ ಎಂದು ಆಸೆಪಡುವ ವ್ಯಕ್ತಿಗಳಲ್ಲಿ ನಾನೂ ಒಬ್ಬ. ಹಿಂದುಳಿದ ಸಮುದಾಯ ಎಂಬುದು ಬಂದಾಗ ನಾನು ಮತ್ತು ಸಿದ್ದರಾಮಯ್ಯ ಒಂದೇ ಎಂದು ಸಚಿವ ಬಿ. ಶ್ರೀರಾಮುಲು ಅವರು, ಪ್ರತಿಪಕ್ಷ ನಾಯಕನನ್ನು ಹಾಡಿ ಹೊಗಳಿದ್ದಾರೆ. ಬಳ್ಳಾರಿ ನಗರದಲ್ಲಿ ಕುರುಬ ಸಂಘದ ವಾಣಿಜ್ಯ ಮಳಿಗೆ ಹಾಗೂ ವಿದ್ಯಾರ್ಥಿ ನಿಲಯ ಉದ್ಘಾಟಿಸಿ ಮಾತನಾಡಿದ ಶ್ರೀರಾಮುಲು, ಸಿದ್ದರಾಮಯ್ಯ ಮತ್ತೊಮ್ಮೆ ಸಿಎಂ ಆಗಬೇಕು ಅನ್ನೋ ಆಸೆ ನನಗೂ ಇದೆ ಎಂದು ಹೇಳುವ ಮೂಲಕ ಅಚ್ಚರಿ ಮೂಡಿಸಿದರು.

ನಾವು ರಾಜಕೀಯಕೋಸ್ಕರ ಮಾತನಾಡುತ್ತೇವೆ. ವೈಯಕ್ತಿಕವಾಗಿ ನನಗೂ ಸಿದ್ದರಾಮಯ್ಯ ಅವರಿಗೂ ಏನು ಇರೋದಿಲ್ಲ ಶ್ರೀರಾಮುಲು ಕುರುಬ ಸಮುದಾಯ ಹಾಗೂ ಸಿದ್ದರಾಮಯ್ಯ ವಿರೋಧಿಯಲ್ಲ. ಅವಕಾಶ ಬಂದರೆ ಸಿದ್ದರಾಮಯ್ಯ ಮತ್ತೊಮ್ಮೆ ಮುಖ್ಯಮಂತ್ರಿ ಆಗಬೇಕು ಎಂಬ ಆಸೆ ನನಗೂ ಇದೆ. ನಾನು ಮುಖ್ಯಮಂತ್ರಿ ಆಗಬೇಕು ಎನ್ನುವುದನ್ನು ಸಿದ್ದರಾಮಯ್ಯ ಕೂಡಾ ಒಪ್ಪುತ್ತಾರೆ. ದೊಡ್ಡ ರಾಜಕೀಯ ವ್ಯವಸ್ಥೆಯಲ್ಲಿ ರಾಜಕೀಯ ತಂತ್ರ ಗಳನ್ನು ಮಾಡಲೇ ಬೇಕು. ಮುಂದೊಂದು ದಿನ ನಾನು ಹಾಗೂ ಸಿದ್ದರಾಮಯ್ಯ ಒಂದೇ ವೇದಿಕೆಯಲ್ಲಿ ಬರುತ್ತೇವೆ. ಹಿಂದುಳಿದ ಜಾತಿಗಳನ್ನು ಒಂದು ಮಾಡುವ ಪ್ರಯತ್ನವನ್ನು ನಾನು ಮತ್ತು ಸಿದ್ದರಾಮಯ್ಯ ಮಾಡುತ್ತಿದ್ದೇವೆ ಎಂದು ಹೇಳಿ ದ್ದಾರೆ. ಹಿಂದುಳಿದ ಸಮುದಾಯಗಳು ಒಂದಾದರೆ ರಾಜ್ಯ ಮತ್ತು ದೇಶದಲ್ಲಿ ಕ್ರಾಂತಿ ಮಾಡ ಬಹುದು. ನಮ್ಮಲ್ಲಿ ಒಗ್ಗಟ್ಟು ಪ್ರದರ್ಶನ ಆಗಬೇಕು. ಹಿಂದುಳಿದ ವಿಚಾರ ಬಂದಾಗ ನಾನು ಮತ್ತು ಸಿದ್ದರಾಮಯ್ಯ ಎಲ್ಲರೂ ಕೂಡ ಒಂದೇ ಎಂದು ಶ್ರೀರಾಮುಲು ಪದೇ ಪದೇ ಹೇಳುವ ಮೂಲಕ ವೇದಿಕೆ ಮೇಲೆ ನೆರೆದಿದ್ದ ನಾಯಕರು ಮಾತ್ರವಲ್ಲ ಜನರಲ್ಲೂ ಅಚ್ಚರಿ ಮೂಡಿಸಿದ್ದಾರೆ. ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಸಿದ್ದರಾಮಯ್ಯನವರ ವಿರುದ್ಧ ಬಾದಾಮಿಯಲ್ಲಿ ನಾನು ಸ್ಪರ್ಧಿಸಿದ್ದೆ. ಸಿದ್ದರಾಮಯ್ಯನವರು ಅಲ್ಪ ಅಂತರದಲ್ಲಿ ಹೇಗೆ ಗೆಲುವು ಸಾಧಿಸಿದರು ಎಂಬುದನ್ನು ಅವರನ್ನೇ ಕೇಳಿ. ಅದ ರಲ್ಲೂ ರಾತ್ರಿ ವೇಳೆ ಕೇಳಿ ನೋಡಿ ಎಂದು ಹೇಳುವ ಮೂಲಕ ಮತ್ತೊಂದು ಮಹಾಪ್ರಶ್ನೆ ಹುಟ್ಟು ಹಾಕಿದ್ದಾರೆ ಎಂದು ಖಾಸಗಿ ವಾಹಿನಿಯೊಂದು ವರದಿ ಮಾಡಿದೆ.

ಕ್ರೀಡಾಪಟುಗಳಿಗೆ ನೇಮಕಾತಿಯಲ್ಲಿ ಶೇ.2 ಮೀಸಲಾತಿ ಎಲ್ಲಾ ಇಲಾಖೆಗೂ ವಿಸ್ತರಣೆ

- ಮುಖ್ಯಮಂತ್ರಿ ಬೊಮ್ಮಾಯಿ ಭರವಸೆ
- ಇದುವರೆಗೆ ಪೊಲೀಸ್, ಅರಣ್ಯ ಇಲಾಖೆಯಲ್ಲಿ ಮಾತ್ರ ಅವಕಾಶವಿತ್ತು
- ಕಾಮನ್ವೆಲ್ತ್ ಗೇಮ್ಸ್ ಪದಕ ವಿಜೇತರಿಗೆ ಅಭಿನಂದನೆ



ಬೆಂಗಳೂರು, ಆ.16(ಕೆಎಂಶಿ)– ರಾಜ್ಯ ಸರ್ಕಾರ ಈಗಾಗಲೇ ಕ್ರೀಡಾಪಟುಗಳಿಗೆ ಪೊಲೀಸ್ ಮತ್ತು ಅರಣ್ಯ ಇಲಾಖೆಗಳಲ್ಲಿ ಮೀಸಲಿಟ್ಟಿರುವ ಶೇ.2 ರಷ್ಟು ಮೀಸಲಾತಿಯನ್ನು ಇತರೆ ಇಲಾಖೆಗಳಿಗೂ ವಿಸ್ತರಣೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಬರ್ಮಿಂಗ್ ಹ್ಯಾಂ ಕಾಮನ್ವೆಲ್ತ್ ಗೇಮ್ಸ್‌ನಲ್ಲಿ ಭಾಗವಹಿಸಿ ಪದಕ ಪಡೆದ ಕರ್ನಾಟಕದ ಕ್ರೀಡಾಪಟುಗಳಿಗೆ ಹಾಗೂ ಅಮೃತ ಕ್ರೀಡಾ ದತ್ತು ಯೋಜನೆಯಡಿಯಲ್ಲಿ ಆಯ್ಕೆಯಾಗಿರುವ 75 ಕ್ರೀಡಾಪಟುಗಳಿಗೆ ಏರ್ಪಡಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕ್ರೀಡಾಪಟುಗಳ ಜೀವನಕ್ಕೆ ಭದ್ರತೆ ಬೇಕು ಎನ್ನುವುದನ್ನು ಸರ್ಕಾರ ಮನಗಂಡಿದೆ. ಮನಸ್ಸಿನಲ್ಲಿ ಕ್ರೀಡೆಯನ್ನು ನನಗೋಸ್ಕರ ಹಾಗೂ ದೇಶಕ್ಕಾಗಿ ಪದಕ ಗೆಲ್ಲಲು ಆಡುತ್ತಿದ್ದೇನೆ ಎನ್ನುವುದನ್ನು ಮಾತ್ರ ಕ್ರೀಡಾಪಟುಗಳು ಮರೆಯಬಾರದು ಎಂದರು.

ಒಂದನೇ ಪುಟದಿಂದ

ಮತ್ತೊಂದು ನಿರ್ಮಾಣ ತೆರವು

ಕಟ್ಟಡದ ಕೆಲ ಭಾಗವನ್ನು ಸೂಕ್ತ ಪರಿಹಾರ ನೀಡಿದ ನಂತರ ಕೆಡವಿ ಈಗಾಗಲೇ ರಸ್ತೆ ಅಗಲೀಕರಣಗೊಳಿಸಲಾಗಿದೆ. ಕೆಲ ತಾಂತ್ರಿಕ ಕಾರಣದಿಂದಾಗಿ ನೆಹರು ಸರ್ಕಲ್‌ನ ಎಸ್‌ಬಿಐ ಪಕ್ಕದಲ್ಲಿರುವ ಧಾರ್ಮಿಕ ಕಟ್ಟಡ ಹಾಗೂ ಮತ್ತೊಂದು ಖಾಸಗಿ ಕಟ್ಟಡವನ್ನು ಕೆಲ ತಾಂತ್ರಿಕ ಕಾರಣದಿಂದ ತೆರವುಗೊಳಿಸಿರಲಿಲ್ಲ ಎಂದರು. ಇದೀಗ ವಕ್ಫ್ ಬೋರ್ಡ್ ಅಧಿಕಾರಿಗಳು ಹಾಗೂ ಸದಸ್ಯರೊಂದಿಗೆ ಮಾತನಾಡಿ, ಸೌಹಾರ್ದಯುತವಾಗಿ ಗುರ್ತಿಸಿರುವ ಕಟ್ಟಡದ ಜಾಗವನ್ನು ಅವರೇ ತೆರವುಗೊಳಿಸಿ ರಸ್ತೆ ಅಗಲೀಕರಣ ಗೊಳಿಸಲು ಸಹಕಾರ ನೀಡಿದ್ದಾರೆ. ಕಾಮಗಾರಿ ಆರಂಭವಾಗಿದ್ದು, ವಾರದೊಳಗಾಗಿ ಅಗಲೀಕರಣ ಕೆಲಸ ಪೂರ್ಣಗೊಳ್ಳಲಿದೆ ಎಂದು ನಾಗೇಂದ್ರ ತಿಳಿಸಿದರು.

ಉಳಿದ ಕಾಂಪೌಂಡ್ ಭಾಗವನ್ನಷ್ಟೇ ಪಾಲಿಕೆಯಿಂದ ನೆಲಸಮಗೊಳಿಸಲಾಗಿದ್ದು, ಮತ್ತೊಂದು ಖಾಸಗಿ ಒಡೆತನದ ಕಟ್ಟಡದ ಭಾಗವನ್ನೂ ಇಷ್ಟರಲ್ಲೇ ತೆರವುಗೊಳಿಸಿ ಇರ್ವಿನ್ ರಸ್ತೆ ಅಗಲೀಕರಣದ ಉಳಿಕೆ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಲಾಗುವುದು ಎಂದು ನಾಗೇಂದ್ರ ತಿಳಿಸಿದರು. ಎರಡೂ ಕಡೆ ಕಾಂಕ್ರೀಟ್ ಬಾಕ್ಸ್ ಡ್ರೇನ್, ರಸ್ತೆ ವಿಭಜಕ, ಸ್ಟ್ರೀಟ್ ಲೈಟ್ಸ್, ಡಾಂಬರೀಕರಣ ಕಾಮಗಾರಿ ಪೂರ್ಣಗೊಳಿಸಿದಲ್ಲಿ ಇರ್ವಿನ್ ರಸ್ತೆಯಲ್ಲಿ ವಾಹನಗಳು ಸರಾಗವಾಗಿ ಸಂಚರಿಸಲು ಸಾಧ್ಯವಾಗುತ್ತದೆ ಎಂದ ಅವರು, ಕಟ್ಟಡ ತೆರವಿಗೆ ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು. ದೇವರಾಜ ಉಪವಿಭಾಗದ ಎಸಿಪಿ ಎಂ.ಎನ್. ಶಶಿಧರ್, ದೇವರಾಜ ಠಾಣೆ ಇನ್ಸ್‌ಪೆಕ್ಟರ್ ಪಿ.ಪಿ. ಸಂತೋಷ್ ಹಾಗೂ ಸಿಬ್ಬಂದಿ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಮಾಡಿದ್ದರು.

ಗಜಪಡೆಗೆ ನಿತ್ಯವೂ ರಸಗವಳ!

ಈರುಳ್ಳಿ ಹಾಗೂ ವಿವಿಧ ತರಕಾರಿ ಕತ್ತರಿಸಿ ಬೆರೆಸಲಾಗುತ್ತದೆ. ಬಳಿಕ ಬೆಣ್ಣೆ ಸೇರಿಸಿ ಆನೆಗಳಿಗೆ ನೀಡಲಾಗುತ್ತಿದೆ. ಇದರೊಂದಿಗೆ ಒಂದೊಂದು ಆನೆಗೆ 300 ರಿಂದ 500 ಕೆಜಿ ಆಲ ಹಾಗೂ ಅರಳಿ ಸೊಪ್ಪನ್ನು ನೀಡಲಾಗುತ್ತಿದೆ. ಪೌಷ್ಠಿಕ ಆಹಾರವನ್ನು ದಿನಕ್ಕೆ ಎರಡು ಬಾರಿ ಎರಡು ಕೆ.ಜಿ.ಯಷ್ಟು ನೀಡಲಾಗುತ್ತಿದ್ದು, ಒಂದು ವಾರದ ನಂತರ 5 ಕೆ.ಜಿ.ಗೆ ಹೆಚ್ಚಿಸಲಾಗುವುದು. ಆರಂಭದಲ್ಲಿ ಪೌಷ್ಠಿಕ ಆಹಾರವನ್ನು ಹೆಚ್ಚಾಗಿ ತಿಂದರೆ ಆನೆಗಳಿಗೆ ಭೇದಿಯಾಗುವ ಸಂಭವ ಹೆಚ್ಚಾಗಿರುವುದರಿಂದ ಒಂದೊಂದು ಆನೆಗೆ ತಲಾ 2 ಕೆಜಿ ಪೌಷ್ಠಿಕ ಆಹಾರದ ಉಂಡೆ ನೀಡಲಾಗುತ್ತಿದೆ. ಈಗಾಗಲೇ ಪೌಷ್ಠಿಕ ಆಹಾ ರಕ್ಕೆ ಹೊಂದಿಕೊಂಡಿರುವ ಆನೆಗಳಿಗೆ ಜೀರ್ಣ ಪ್ರಕ್ರಿಯೆಯೂ ಉತ್ತಮವಾಗಿರುವುದರಿಂದ ಹಂತ ಹಂತವಾಗಿ ಪೌಷ್ಠಿಕ ಆಹಾರದ ಪ್ರಮಾಣ ಹೆಚ್ಚಿಸಲಾಗುತ್ತದೆ. ಇನ್ನೊಂದು ವಾರದಲ್ಲಿ ಒಂದೊಂದು ಆನೆಗೆ 5 ಕೆಜಿವರೆಗೆ ಪೌಷ್ಠಿಕ ಆಹಾರ ನೀಡಲಾಗುತ್ತದೆ. ಪ್ರತಿದಿನ ಮುಂಜಾನೆ 4.30ಕ್ಕೆ ಒಮ್ಮೆ ಹಾಗೂ ಸಂಜೆ 7 ಗಂಟೆಗೆ ಮತ್ತೊಮ್ಮೆ ಕಾಳು ಹಾಗೂ ತರಕಾರಿಯಿಂದ ತಯಾರಿಸಿರುವ ಪೌಷ್ಠಿಕ ಆಹಾರ ನೀಡಲಾಗುತ್ತದೆ.

ಕುಸುರೆ: ಪೌಷ್ಠಿಕ ಆಹಾರದೊಂದಿಗೆ ಆನೆಗಳಿಗೆ ಭತ್ತ, ಉಪ್ಪು, ಬೆಲ್ಲ, ತೆಂಗಿನಕಾಯಿ ಮಿಶ್ರಣ ಮಾಡಿ ಭತ್ತದ ಹುಲ್ಲಿನಲ್ಲಿ ಉಂಡೆ(ಕುಸುರೆ) ಕಟ್ಟಿ ಆನೆಗಳಿಗೆ ತಿನ್ನಿಸುವ ಪ್ರಕ್ರಿಯನ್ನು ಆರಂಭಿಸಲಾಗಿದೆ. ಇದರಿಂದ ದಸರಾ ಗಜಪಡೆಗೆ ಬೇಕಾಗುವ ಪೌಷ್ಠಿಕಾಂಶವನ್ನು ಆಹಾರ ಪದಾರ್ಥಗಳ ಮೂಲಕ ನೀಡಿ ಜಂಬೂಸವಾರಿಗೆ ಸಜ್ಜುಗೊಳಿಸಲಾಗುತ್ತದೆ.

ಈ ಸಾಲಿನ ದಸರಾ ಮಹೋತ್ಸವ ಸೆ.26ರಂದು ಆರಂಭವಾಗಿ ಅ.5 ಜಂಬೂ ಸವಾರಿಯ ಮೂಲಕ ಸಮಾಪ್ತಿಗೊಳ್ಳಲಿದೆ. ಈ ಸಾಲಿನ ದಸರಾ ಮಹೋತ್ಸವದಲ್ಲಿ 14 ಆನೆಗಳು ಪಾಲ್ಗೊಳ್ಳಲಿವೆ. ಆ.7ರಂದು ವಿವಿಧ ಕ್ಯಾಂಪ್‌ಗಳಿಂದ ಮೊದಲ ತಂಡದಲ್ಲಿ 9 ಆನೆಗಳನ್ನು ಮೈಸೂರಿಗೆ ಕರೆತರಲಾಗಿದೆ. ಆ.10ರಂದು ಮೈಸೂರು ಅರಮನೆ ಆವರಣಕ್ಕೆ ಕಾಲಿಟ್ಟಿದ್ದ ಗಜಪಡೆಗೆ ಇದೀಗ ಪೌಷ್ಠಿಕ ಆಹಾರ ನೀಡಲು ಕ್ರಮ ಕೈಗೊಳ್ಳಲಾಗಿದೆ.

ಮೂರು ತರದ ಸ್ಪೆಷಲ್ ಡಯಟ್

"ತಾಲೀಮು ನಡೆಸಬೇಕಾದರೆ ಆನೆಗಳಿಗೆ ಪ್ರೋಟೀನ್‌ಯುಕ್ತ ಆಹಾರ ಪದಾರ್ಥ ನೀಡಬೇಕಾಗಿದೆ. ಹಾಗಾಗಿ ಹಸಿ ಹುಲ್ಲು, ಆಲ ಮತ್ತು ಅರಳಿ ಸೊಪ್ಪು, ಕಬ್ಬನ್ನು ನೀಡಲಾಗುತ್ತಿದೆ. ಒಣಹುಲ್ಲು, ಬೆಲ್ಲ, ತೆಂಗಿನಕಾಯಿ, ಉಪ್ಪು ಮಿಶ್ರಣದ ಕುಸುರೆ ತಯಾರಿಸಿ ನೀಡಲಾಗುತ್ತದೆ. ಇದರೊಂದಿಗೆ ಹಸಿರು ಕಾಳು, ಉದ್ದಿನ ಕಾಳು, ಕುಸುಬಲು ಹಕ್ಕಿ, ಬೆಣ್ಣೆ ಹಾಗೂ ತರಕಾರಿ ಮಿಶ್ರಣದಿಂದ ತಯಾರಿಸಿರುವ ಪೌಷ್ಠಿಕ ಆಹಾರವನ್ನು ಆನೆಗಳಿಗೆ ನೀಡಲಾಗುತ್ತಿದೆ. ಪ್ರತಿದಿನ ಆನೆಗಳ ಲದ್ದಿ, ಮೂತ್ರ ತಪಾಸಣೆ ಮಾಡಲಾಗುತ್ತಿದೆ. ಇದರಿಂದ ಪೌಷ್ಠಿಕ ಆಹಾರ ಸೇವನೆಯಿಂದ ಜೀರ್ಣ ಪ್ರಕ್ರಿಯೆ ಸರಿಯಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳಲಾಗುತ್ತದೆ. ಮೂರು ಬಗೆಯ ಪೌಷ್ಠಿಕ ಆಹಾರ ನೀಡುವುದರಿಂದ ಆನೆಗಳಿಗೆ ಬೇಕಾದ ಎಲ್ಲಾ ಬಗೆಯ ಪೌಷ್ಠಿಕಾಂಶ ದೊರೆತು ಆನೆಗಳ ಶಕ್ತಿ ವೃದ್ಧಿಯಾಗುತ್ತದೆ. ಹಾಗಾಗಿ ಆನೆಗಳ ಆರೋಗ್ಯ ಕಾಪಾಡುವುದರೊಂದಿಗೆ ಜಂಬೂಸವಾರಿಗೆ ಅವುಗಳನ್ನು ಅಣಿಗೊಳಿಸಲು ಸಹಕಾರಿಯಾಗಲಿದೆ. – ಡಾ.ವಿ.ಕರಿಕಾಳನ್, ಡಿಸಿಎಫ್

ಮುಂದೆ ಬರುತ್ತಿಲ್ಲ!


ಹಟ್ಟಿ ಮೈನ್ಸ್ ಮತ್ತು ಕೆ.ಎಸ್.ಎಂ.ಐ.ಎಲ್‌ಗೆ ಅನುಮತಿ ನೀಡಲಾಗಿದೆ. ಈ ಪೈಕಿ ಹಟ್ಟಿ ಮೈನಿಂಗ್‌ಗೆ ಹದಿನೈದು ಜಿಲ್ಲೆಗಳಲ್ಲಿ ಮರಳು ಪೂರೈಕೆ ಮಾಡಲು ಅನುಮತಿ ನೀಡಿದ್ದು, ಉಳಿದಂತೆ ಹದಿನಾರು ಜಿಲ್ಲೆಗಳಲ್ಲಿ ಕೆ.ಎಸ್.ಎಂ.ಐ.ಎಲ್ ಮರಳು ಪೂರೈಸಲಿದೆ. ರಾಜ್ಯದ ಕೆರೆ, ಹಳ್ಳ, ತೊರೆಗಳಲ್ಲಿ ಸಿಗುವ ಮರಳನ್ನು ಹಂಚಿಕೆ ಮಾಡಲು ಗ್ರಾಮ ಪಂಚಾಯಿತಿಗಳಿಗೆ ಅನುಮತಿ ನೀಡಲಾಗಿದ್ದು,ಇದನ್ನು ಮೀರಿ ರಾಜ್ಯದ ಯಾವುದೇ ಭಾಗದಲ್ಲಿ ಮರಳು ಮಾಫಿಯಾ ತಲೆ ಎತ್ತಿದ್ದರೆ ಅದಕ್ಕೆ ಜಿಲ್ಲಾಡಳಿತವೇ ಹೊಣೆಯಾಗುತ್ತದೆ ಎಂದು ಎಚ್ಚರಿಸಿದರು.

ಕೇಂದ್ರ ಸರ್ಕಾರದಿಂದ ರೈತರ ನಿರ್ಲಕ್ಷ್ಯ

ತೆಲಂಗಾಣ ರೈತಬಂಧು ಸಮಿತಿ ಅಧ್ಯಕ್ಷ ಪಲ್ಲಂ ರಾಜೇಶ್ವರ ರೆಡ್ಡಿ ವಿಷಾಧ

ಮೈಸೂರು, ಆ.16(ಎಂಕೆ)– ಕೃಷಿ ಕಾಯ್ದೆಗಳ ವಿರುದ್ಧದ ಹೋರಾಟದಲ್ಲಿ ಮಡಿದ 750 ರೈತರ ಕುಟುಂಬಗಳಿಗೆ ತೆಲಂಗಾಣ ಸರ್ಕಾರ ತಲಾ 3 ಲಕ್ಷ ರೂ., ಪರಿಹಾರ ನೀಡಿದೆ. ಆದರೆ, ಕೇಂದ್ರ ಸರ್ಕಾರ ರೈತರ ಸಾವಿನ ಬಗ್ಗೆ ಕಿಂಚಿತ್ತೂ ತಲೆ ಕೆಡಿಸಿಕೊಳ್ಳುತ್ತಿಲ್ಲ ಎಂದು ತೆಲಂಗಾಣ ಸರ್ಕಾರದ ರೈತಬಂಧು ಸಮಿತಿ ಅಧ್ಯಕ್ಷ ಪಲ್ಲಂ ರಾಜೇಶ್ವರ ರೆಡ್ಡಿ ವಿಷಾದಿಸಿದರು.

ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ಸಹಯೋಗದಲ್ಲಿ ಆಯೋಜಿಸಿದ್ದ ಕೇಂದ್ರದ ಮಾಜಿ ಸಚಿವ ಎಂ.ಎಸ್. ಗುರುಪಾದಸ್ವಾಮಿ, ವಿಧಾನ ಸಭೆ ಮಾಜಿ ಸ್ಪೀಕರ್ ಬಿ.ಜಿ.ಬಣಕರ್ ಹಾಗೂ ರೈತ ನಾಯಕ ಪ್ರೊ.ಎಂ.ಡಿ.ನಂಜುಂಡಸ್ವಾಮಿ ಅವರ ಸಂಸ್ಮರಣಾ ದಿನ ಮತ್ತು 75ರ ಕೃಷಿಕರ ಬದುಕು ಚರ್ಚಾ ಸಂಕಿರಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.



ತೆಲಂಗಾಣದ ಹೈದರಾಬಾದ್‌ನಲ್ಲಿರುವ ರೈತ ಬಂಧು ಕಚೇರಿಯಲ್ಲಿ ಹೃದಯಾಘಾತದಿಂದ ಮೃತಪಟ್ಟ ಟಿ.ನರಸೀಪುರ ರೈತ ಸಂಘಟನೆಯ ಕಾರ್ಯಕರ್ತ ವಿಮಲ್ ಕುಮಾರ್ ಅವರ ತಾಯಿ ತಂಗಮಣಿಯವರಿಗೆ ತೆಲಂಗಾಣ ಸರ್ಕಾರದ ವತಿಯಿಂದ ರೈತ ಬಂಧು ಸಮಿತಿ ಅಧ್ಯಕ್ಷ ಪಲ್ಲಂ ರಾಜೇಶ್ವರ ರೆಡ್ಡಿ 10 ಲಕ್ಷ ರೂ.ಪರಿಹಾರದ ಚೆಕ್ ಅನ್ನು ವಿತರಿಸಿದರು.

ತೆಲಂಗಾಣ ರಾಜ್ಯದಲ್ಲಿ ಬೋರ್‌ವೆಲ್ ಮತ್ತು ಬಾವಿಗೆ ಪಂಪ್ ಅಳವಡಿಸಿಕೊಂಡು ಕೃಷಿಗೆ ನೀರಾವರಿ ವ್ಯವಸ್ಥೆಯನ್ನು ಮಾಡಿಕೊಂಡಿರುವ 38 ಲಕ್ಷ ರೈತರಿಗೆ 24 ಗಂಟೆ ಉಚಿತ ವಿದ್ಯುತ್ ನೀಡಲಾಗುತ್ತಿದೆ. ಅಲ್ಲದೇ, ರೈತರು ಬಿತ್ತನೆ ಬೀಜ ಮತ್ತು ರಸಾಯನಿಕ ಗೊಬ್ಬರ ಖರೀದಿಸಲು ಯಾವುದೇ ಅರ್ಜಿ ಆಹ್ವಾನಿಸದೆ ಎಲ್ಲಾ ರೈತರಿಗೂ ಎರಡು ಹಂತದಲ್ಲಿ 10 ಸಾವಿರ ರೂ.ಗಳ ಸಹಾಯಧನವನ್ನು ನೇರವಾಗಿ ಅವರ ಖಾತೆಗೆ ಹಾಕಲಾಗುತ್ತಿದೆ ಎಂದರು.

ಕೇಂದ್ರ ಸರ್ಕಾರ ವಿದ್ಯುತ್ ಮಸೂದೆಯನ್ನು ಜಾರಿಗೆ ತಂದು ಖಾಸಗೀಕರಣ ಮಾಡುತ್ತಿದೆ. ಕೃಷಿ ಸಂಬಂಧಿ ವಿದ್ಯುತ್‌ಗೂ ಮೀಟರ್ ಅಳವಡಿಸಲು ಮುಂದಾಗುತ್ತಿದೆ. ಇದಕ್ಕೆ ತೆಲಂಗಾಣದಲ್ಲಿ ವಿರೋಧವಿದ್ದು, ಯಾವುದೇ ಮೀಟರ್ ಅನ್ನು ಅಳವಡಿಸುವುದಿಲ್ಲ ಎಂದು ಕೇಂದ್ರ ಸರ್ಕಾರಕ್ಕೆ ಸವಾಲು ಹಾಕಿದ್ದೇವೆ ಎಂದರು.

ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡಿ, ರಾಜ್ಯ ಸರ್ಕಾರ ರೈತರ ಬಗ್ಗೆ ಆಲೋಚಿಸುತ್ತಿಲ್ಲ. ತೆಲಂಗಾಣದ ಮುಖ್ಯಮಂತ್ರಿ ಕೆಸಿಆರ್ ಅವರಿಗೆ ರೈತರ ಅಭಿವೃದ್ಧಿ ಸಾಧ್ಯವಾಗುತ್ತದೆ ಎನ್ನುವುದಾದರೆ ಇಲ್ಲಿ ಯಾಕೆ ಸಾಧ್ಯವಿಲ್ಲ ಎಂದು ಪ್ರಶ್ನಿಸಿದರು.

ರೈತರು ಆತ್ಮಹತ್ಯೆ ಹಾದಿ ಹಿಡಿದಿದ್ದಾರೆ. ರೈತ ಯುವಕರಿಗೆ ಮದುವೆಯಾಗಲು ಹೆಣ್ಣು ನೀಡುತ್ತಿಲ್ಲ. ಅನೇಕರು ಕೃಷಿಯನ್ನು ಬಿಟ್ಟು ವಲಸೆ ಹೋಗುತ್ತಿದ್ದಾರೆ. ಹೀಗಿರುವಾಗ ಇದಕ್ಕೆ ಪರಿಹಾರ ನೀಡಬೇಕಾದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತರ ಮೇಲೆಯೆ ಗದಾ ಪ್ರಹಾರ ಮಾಡುತ್ತಿವೆ. ಸ್ವಾತಂತ್ರ್ಯ ಬಂದು 75 ವರ್ಷಗಳಾಗಿದ್ದರೂ ರೈತರ ಬದುಕು ಹಸನಾಗಲಿಲ್ಲ, ರೈತರಿಗೆ ಸಂತೋಷಕ್ಕೆ ಬದಲಾಗಿ ಸಂಕಷ್ಟವೇ ಜಾಸ್ತಿಯಾಗಿದೆ ಎಂದರು.

ಸಂಯುಕ್ತ ಕಿಸಾನ್ ಮೋರ್ಚಾ ಮುಖಂಡ ನರಸಿಂಹ ನಾಯ್ಡು, ತೋಟಗಾರಿಕೆ ವಿವಿ ವಿಶ್ರಾಂತ ಕುಲಪತಿ ಡಾ.ಎಸ್.ಬಿ.ದಂಡಿನ್, ಕಮ್ಮಮ್ ಜಿಲ್ಲಾ ರೈತ ಬಂಧು ಸಮಿತಿ ವೆಂಕಟೇಶ್ವರ ರಾವ್, ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ನಾರಾಯಣ ರೆಡ್ಡಿ, ರೈತ ಮುಖಂಡ ಚೇತನ್ ಮತ್ತಿತರರು ಉಪಸ್ಥಿತರಿದ್ದರು.

ಬೆಮೆಲ್ ಖಾಸಗೀಕರಣ ಪ್ರಸ್ತಾಪ ಇಲ್ಲ

ಸಂಸ್ಥೆಯ ಕಾರ್ಮಿಕ ನಿಯೋಗಕ್ಕೆ ಕೇಂದ್ರ ರಕ್ಷಣಾ ಸಚಿವ ರಾಜನಾಥಸಿಂಗ್ ಭರವಸೆ

ಮೈಸೂರು,ಆ.16(ಪಿಎಂ)– ಸಾರ್ವಜನಿಕ ಉದ್ದಿಮೆಯಾದ ಬೆಮೆಲ್ (ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್) ಅನ್ನು ಖಾಸಗೀಕರಣಗೊಳಿಸುವ ಪ್ರಸ್ತಾಪ ಕೈಬಿಡಬೇಕೆಂಬ ನಮ್ಮ ಮನವಿಗೆ ಕೇಂದ್ರ ರಕ್ಷಣಾ ಸಚಿವ ರಾಜನಾಥಸಿಂಗ್ ಸ್ಪಂದಿಸಿದ್ದು, ಸದರಿ ಪ್ರಸ್ತಾಪ ಕೈಬಿಡುವ ಭರವಸೆ ನೀಡಿದ್ದಾರೆ ಎಂದು ಭಾರತ್ ಅರ್ಥ್ ಮೂವರ್ಸ್ ಎಂಪ್ಲಾಯೀಸ್ ಅಸೋಸಿಯೇಷನ್ ಪದಾಧಿಕಾರಿಗಳು ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅಸೋಸಿಯೇಷನ್ ಅಧ್ಯಕ್ಷ ಗೋವಿಂದ ರೆಡ್ಡಿ, ಇದೇ ಆ.2ರಂದು ಕೋಲಾರ ಸಂಸದ ಎಸ್.ಮುನಿಸ್ವಾಮಿ ನೇತೃತ್ವದಲ್ಲಿ ಬೆಮೆಲ್‌ನ ಎಲ್ಲಾ ಶಾಖೆಗಳ ಕಾರ್ಮಿಕ ಸಂಘಟನೆಗಳ ಪದಾಧಿಕಾರಿಗಳ ನಿಯೋಗವು ರಾಜನಾಥ ಸಿಂಗ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು. ನಮ್ಮ ಮನವಿಗೆ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಹೇಳಿದರು.

ಸ್ಟ್ರಾಟೆಜಿಕ್ ಸೇಲ್ ಮೂಲಕ ಸಂಸ್ಥೆಯಲ್ಲಿರುವ ಕೇಂದ್ರ ಸರ್ಕಾರದ ಶೇ.54ರಷ್ಟು ಷೇರಿನ ಪೈಕಿ ಶೇ.26ರಷ್ಟು ಷೇರನ್ನು ಖಾಸಗಿಯವರಿಗೆ ಮಾರಾಟ ಮಾಡುವುದನ್ನು ಕೈಬಿಡಬೇಕೆಂದು ಮನವಿ ಮಾಡಿದೆವು. ಇದಕ್ಕೆ ಸ್ಪಂದಿಸಿದ ಸಚಿವರು, ಈ ಪ್ರಕ್ರಿಯೆ ಮಾಡುವುದಿಲ್ಲ ಎಂದು ಭರವಸೆ ನೀಡಿದರು. ಅಲ್ಲದೆ, ರಕ್ಷಣಾ ವಲಯಕ್ಕೆ ಅಗತ್ಯವಿರುವ ವಾಹನಗಳು, ಏರೋಸ್ಪೇಸ್‌ಗೆ ಸಂಬಂಧಿಸಿದ ಉಪಕರಣಗಳು, ಗಣಿ ಮತ್ತು ನಿರ್ಮಾಣ ಕ್ಷೇತ್ರಕ್ಕೆ ಬೇಕಾಗುವ ವಾಹನ ಮತ್ತು ಉಪಕರಣಗಳ ಉತ್ಪಾದನೆಗೆ ಬೆಮೆಲ್‌ಗೆ ಅವಕಾಶ ಕಲ್ಪಿಸಬೇಕೆಂಬ ಮನವಿಗೂ ಸಕಾರಾತ್ಮಕವಾಗಿ ಸ್ಪಂದಿಸಿದರು ಎಂದು ತಿಳಿಸಿದರು.

ಎಲ್‌ಐಸಿ ಸೇರಿದಂತೆ ಸರ್ಕಾರಿ ಸ್ವಾಮ್ಯದ ವಿವಿಧ ಸಂಸ್ಥೆಗಳು ಹಾಗೂ ಖಾಸಗಿ ಸಂಸ್ಥೆಗಳು ಪ್ರಸ್ತುತ ಬೆಮೆಲ್‌ನ ಶೇ.46ರಷ್ಟು ಷೇರನ್ನು ಹೊಂದಿವೆ. ಈಗ ಕೇಂದ್ರ ಸರ್ಕಾರದ ಹೊಂದಿರುವ ಶೇ.54ರಷ್ಟು ಷೇರಿನಲ್ಲಿ ಶೇ.26ರಷ್ಟು ಷೇರನ್ನು ಖಾಸಗಿಯವರಿಗೆ ಮಾರಾಟ ಮಾಡಿದರೆ ಸರ್ಕಾರದ ಷೇರು ಕೇವಲ ಶೇ.28ರಷ್ಟು ಉಳಿಯಲಿದೆ. ಈ ಪ್ರಕ್ರಿಯೆ ನಡೆದರೆ ಬೆಮೆಲ್ ಸರ್ಕಾರಿ ಸ್ವಾಮ್ಯದ ಸಂಸ್ಥೆಯಾಗಿ ಉಳಿಯುವುದಿಲ್ಲ ಎಂದು ವಿವರಿಸಿದರು.

ಪಾರ್ಲಿಮೆಂಟರಿ ಸಮಿತಿ (ಡಿಫೆನ್ಸ್) ಸದಸ್ಯರೂ ಆದ ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಅವರನ್ನೂ ಭೇಟಿಯಾದ ಸಂದರ್ಭದಲ್ಲಿ ಅವರೂ ನಮಗೆ ಸ್ಪಂದಿಸಿದ್ದಾರೆ. ರಕ್ಷಣಾ ವಲಯಕ್ಕೆ ಅಗತ್ಯವಿರುವ ವಾಹನ ಮತ್ತು ಉಪಕರಣಗಳನ್ನು ಪೂರೈಸಲು ಬೆಮೆಲ್‌ಗೆ ಅವಕಾಶ ಕಲ್ಪಿಸಲು ಪ್ರಯತ್ನಿಸುವುದಾಗಿ ಭರವಸೆ ನೀಡಿದ್ದಾರೆ ಎಂದು ತಿಳಿಸಿದರು. ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ಹೆಚ್.ಎ.ನಾಗಶಯನ, ಸಹ ಕಾರ್ಯದರ್ಶಿ ಹೇಮಂತ್‌ಕುಮಾರ್, ಖಜಾಂಚಿ ಬಸವರಾಜು ಗೋಷ್ಠಿಯಲ್ಲಿದ್ದರು.

ಬೈಕ್ ಡೂಮ್‌ನಲ್ಲಿ ಅಡಗಿದ್ದ ನಾಗರಾಜ!!

ಮೈಸೂರು, ಆ. 16– ಬೈಕ್‌ನಲ್ಲಿ ಅಡಗಿ ಕುಳಿತಿದ್ದ ನಾಗರ ರಾಜ ಅದರ ಸವಾರ ಬಂದಾಗ ಮಹಾ ಶಾಕ್ ನೀಡಿದ್ದಾನೆ. ಸ್ವಲ್ಪ ಎಚ್ಚರ ತಪ್ಪಿದ್ದರೂ ಭಾರೀ ಅನಾಹುತವೇ ಸಂಭವಿಸುತ್ತಿತ್ತು. ಸದ್ಯ ನಾಗರಾಜ ಸುರಕ್ಷಿತವಾಗಿ ಸೆರೆ ಸಿಕ್ಕು, ಸಂರಕ್ಷಿತ ಪ್ರದೇಶದಲ್ಲಿ ಆಶ್ರಯ ಪಡೆದಿದ್ದಾನೆ.




ಮೈಸೂರಿನ ಮಧುವನ ಬಡಾವಣೆಯ ಮನೆಯೊಂದರ ಮುಂದೆ ರಾತ್ರಿ ನಿಲ್ಲಿಸಲಾಗಿದ್ದ ಬೈಕ್‌ನ ಮುಂಭಾಗ ಹೆಡ್‌ಲೈಟ್ ಡೂಮ್‌ನಲ್ಲಿ ಭಾರೀ ನಾಗರಹಾವು ಸೇರಿಕೊಂಡಿದೆ. ಬೆಳಗ್ಗೆ ಬಂದು ಅದರ ಸವಾರ, ಬೈಕ್‌ನ ಹ್ಯಾಂಡಲ್ ತಿರುಗಿಸಿದಾಗ 'ಬುಸ್' ಶಬ್ದ ಕೇಳಿ, ಎಚ್ಚೆತ್ತು ಸೂಕ್ಷ್ಮವಾಗಿ ಗಮನಿಸಿದಾಗ ಹಾವಿನ ಬಾಲ ಕಂಡಿದೆ. ಕೂಡಲೇ ಹಾವು ಸಂರಕ್ಷಣೆಯಲ್ಲಿ ತೊಡಗಿಸಿಕೊಂಡಿರುವ ರಮೇಶ್‌ಗೆ ಕರೆ ಮಾಡಿದ್ದಾರೆ. ಅವರು ತಕ್ಷಣ ಸ್ಥಳಕ್ಕೆ ಬಂದು ಪ್ರಯಾಸದಿಂದಲೇ ಬೈಕ್‌ನ ಡೂಮ್‌ನಿಂದ ನಾಗರಹಾವು ಹೊರಗೆಳೆದು, ಅದನ್ನು ಸುರಕ್ಷಿತ ಸ್ಥಳಕ್ಕೆ ಬಿಟ್ಟು ಬಂದಿದ್ದಾರೆ. ಮನೆ ಮುಂದೆ ನಾವು ಬಿಡುವ ಶೂ, ಹೂ ಕುಂಡ, ಗ್ಯಾಸ್ ಸಿಲಿಂಡರ್ ಇಡುವ ಸ್ಥಳ, ನಾಯಿ ಕೂರುವ ಜಾಗವಲ್ಲದೆ ಹೊತ್ತಿಲ್ಲದ ಹೊತ್ತಿನಲ್ಲಿ ಮನೆ ಬಾಗಿಲು ತೆಗೆದು ಬಿಟ್ಟಿದ್ದರೆ, ರಸ್ತೆ ಚರಂಡಿಗಳಲ್ಲಿ ಆಹಾರಕ್ಕಾಗಿ ಹರಿದಾಡುವ ಹಾವುಗಳು ನೇರವಾಗಿ ಮನೆಗಳಿಗೆ ನುಗ್ಗುವ ಸಾಧ್ಯತೆ ಇದೆ. ಒಂದು ವೇಳೆ ಇದರಿಂದ ಅನಾಹುತವೂ ಸಂಭವಿಸಬಹುದು ಎಂದು ಉರಗ ಸಂರಕ್ಷಕ ರಮೇಶ್ ನಿವಾಸಿಗಳಿಗೆ ಎಚ್ಚರಿಸಿದ್ದಾರೆ.



ಮೈಸೂರಿನ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ವೃತ್ತದಲ್ಲಿರುವ ಕೆ.ಎಂ.ಕಾರ್ಯಪ್ಪ ಅವರ ಪ್ರತಿಮೆಗೆ ಸ್ವಾತಂತ್ರ್ಯ ಅಮೃತ ಮಹೋತ್ಸವ ಪ್ರಯುಕ್ತ ಕನ್ನಡಪರ ಸಂಘಟನೆ ನಾಗರಿಕ ಹಿತರಕ್ಷಣಾ ವೇದಿಕೆ ವತಿಯಿಂದ ಪುಷ್ಪನಮನ ಸಲ್ಲಿಸಲಾಯಿತು. ವೇದಿಕೆ ಅಧ್ಯಕ್ಷ ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಬಾಲಕೃಷ್ಣೇಗೌಡ, ಉಪಾಧ್ಯಕ್ಷ ಮೆಸ್ ಬಾಬು, ಕಾರ್ಯದರ್ಶಿ ಸರ್ದಾರ್ ಮಹೇಶ್, ಮಂಜುನಾಥ್ ಹಾಜರಿದ್ದರು.

ನಾಳೆ ಡಾ.ಪಿ.ಜಯರಾಮಯ್ಯ ಸ್ಮರಣ ಸಂಚಿಕೆ ಬಿಡುಗಡೆ



ಮೈಸೂರು,ಆ.16(ಪಿಎಂ)– ಗ್ರಾಮೀಣ ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಅಪಾರ ಕೊಡುಗೆ ನೀಡಿದ ಡಾ.ಪಿ.ಜಯರಾಮಯ್ಯ ಅವರ ಕುರಿತ 'ಒಬ್ಬ ವ್ಯಕ್ತಿಯಲ್ಲ ಶಕ್ತಿ' ಸ್ಮರಣ ಸಂಚಿಕೆ ಬಿಡುಗಡೆ ಸಮಾರಂಭವನ್ನು ಡಾ.ಪಿ.ಜಯರಾಮಯ್ಯ ಅಭಿಮಾನಿಗಳ ಬಳಗದ ವತಿಯಿಂದ ಆ.18ರಂದು ಹಮ್ಮಿಕೊಳ್ಳಲಾಗಿದೆ ಎಂದು ಮುಕ್ತ ವಿವಿ ವಿಶ್ರಾಂತ ಕುಲಪತಿ ಡಾ.ಎನ್.ಎಸ್.ರಾಮೇಗೌಡ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಬೆಂಗಳೂರು–ನೀಲಗಿರಿ ರಸ್ತೆಯ ಪೈ ವಿಸ್ಟಾ ಹೋಟೆಲ್‌ನ ಸಮ್ಮಿಲನ ಹಾಲ್‌ನಲ್ಲಿ ಅಂದು ಬೆಳಗ್ಗೆ 11ಕ್ಕೆ ಸಮಾರಂಭ ಏರ್ಪಡಿಸಲಾಗಿದೆ. ಸ್ಮರಣ ಸಂಚಿಕೆಯನ್ನು ನಾನೇ ಬಿಡುಗಡೆ ಮಾಡಲಿದ್ದು, ಇದರ ಇ–ಸಂಚಿಕೆಯನ್ನು ವಿಧಾನ ಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ಹಾಗೂ ಗೋವಾ ಸರ್ಕಾರದ ನಿವೃತ್ತ ಮುಖ್ಯ ನಗರ ಯೋಜನಾಧಿಕಾರಿ ಡಾ.ಎಸ್.ಟಿ.ಪುಟ್ಟರಾಜು ಬಿಡುಗಡೆ ಮಾಡಲಿದ್ದಾರೆ ಎಂದು ಹೇಳಿದರು.

ಡಾ.ಪಿ.ಜಯರಾಮಯ್ಯ ಅವರ ಕುರಿತು ಸಾಕ್ಷ್ಯಚಿತ್ರ ಚಿತ್ರೀಕರಣಕ್ಕೆ ಶಾಸಕ ಸಿ.ಎಸ್.ಪುಟ್ಟರಾಜು ಹಾಗೂ ನಿವೃತ್ತ ಪ್ರಾಂಶುಪಾಲ ಪ್ರೊ.ಎಂ.ಕೃಷ್ಣೇಗೌಡ ಚಾಲನೆ ನೀಡಲಿದ್ದಾರೆ. ಅತಿಥಿಗಳಾಗಿ ಮೈಸೂರು ವಿವಿ ವಿಶ್ರಾಂತ ಕುಲಪತಿ ಡಾ.ಕೆ.ಎಸ್.ರಂಗಪ್ಪ, ಮೈಸೂರು ವಿವಿ ಪ್ರಸಾರಾಂಗದ ನಿವೃತ್ತ ನಿರ್ದೇಶಕ ಪ್ರೊ.ಕೆ.ಟಿ.ವೀರಪ್ಪ, ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಪಿ.ವಿಶ್ವನಾಥ್ ಪಾಲ್ಗೊಳ್ಳಲಿದ್ದಾರೆ. ರಾಜ್ಯ ಸರ್ಕಾರದ ನಿವೃತ್ತ ವಿಶೇಷ ಕಾರ್ಯದರ್ಶಿ ಡಾ.ಪಿ.ಬೋರೇಗೌಡ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಜಯರಾಮಯ್ಯನವರ ಶಿಷ್ಯರು, ಹಿತೈಷಿಗಳು ಸೇರಿದಂತೆ ಅವರನ್ನು ಹತ್ತಿರದಿಂದ ಬಲ್ಲವರ 30 ಲೇಖನಗಳನ್ನು ಸ್ಮರಣ ಸಂಚಿಕೆ ಒಳಗೊಂಡಿದೆ. 200 ಪುಟಗಳ ಈ ಸಂಚಿಕೆಯನ್ನು ಅಂದು ಸಭಿಕರಿಗೆ ಉಚಿತವಾಗಿ ವಿತರಣೆ ಮಾಡಲಾಗುವುದು. ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ನಗುವಿನಹಳ್ಳಿ ಗ್ರಾಮದಲ್ಲಿ ಎಸ್.ವಿ.ಪುಟ್ಟಯ್ಯ ಮತ್ತು ಗಂಗಮ್ಮ ದಂಪತಿ ಪುತ್ರರಾಗಿ 1935ರ ಜ.29ರಂದು ಜನಿಸಿದ ಜಯರಾಮಯ್ಯನವರು, ಮೈಸೂರು ವಿವಿಯಲ್ಲಿ ಭೂಗೋಳಶಾಸ್ತ್ರದ ಪ್ರಾಧ್ಯಾಪಕರಾಗಿ 35 ವರ್ಷಗಳು ಸೇವೆ ಸಲ್ಲಿಸಿದರು ಎಂದು ವಿವರಿಸಿದರು. ಮೈಸೂರು ವಿವಿ ಪ್ರಸಾರಾಂಗದ ನಿವೃತ್ತ ನಿರ್ದೇಶಕ ಪ್ರೊ.ಕೆ.ಟಿ. ವೀರಪ್ಪ, ಪ್ರಾಧ್ಯಾಪಕ ಡಾ.ಚಂದ್ರಶೇಖರ್, ನಿವೃತ್ತ ಪ್ರಾಧ್ಯಾಪಕ ಡಾ.ರಂಗಸ್ವಾಮಿ, ಲೇಖಕ ಬೂಕನಕೆರೆ ವಿಜೇಂದ್ರ ಗೋಷ್ಠಿಯಲ್ಲಿದ್ದರು.

ಬಹಿರಂಗ ಹರಾಜು

ಮೈಸೂರು, ಆ.16– ತೋಟಗಾರಿಕೆ ಇಲಾಖೆ ವತಿಯಿಂದ ಮೈಸೂರು ಜಿಲ್ಲೆಯ ಕೆ ಎಸ್ ಹೆಚ್ ಡಿಎ ವ್ಯಾಪ್ತಿಯ ತೋಟಗಾರಿಕೆ ಕ್ಷೇತ್ರಗಳಲ್ಲಿ ಸಪೋಟ ಮತ್ತು ಸೀಬೆ ಫಸಲುಗಳನ್ನು ಜುಲೈ 01 ರಿಂದ ಡಿಸೆಂಬರ್ 31 ರ ಅವಧಿಯವರೆಗೆ ಈ ಟೆಂಡರ್ ಬಹಿರಂಗ ಹರಾಜು ಪ್ರಕಟಣೆ ಮೂಲಕ ವಿಲೇವಾರಿ ಮಾಡಲು ಕ್ರಮ ಕೈಗೊಂಡಿದ್ದು ಇಚ್ಛೆಯುಳ್ಳವರು ಟೆಂಡರ್‌ನಲ್ಲಿ ಭಾಗವಹಿಸಿ ಫಸಲನ್ನು ಪಡೆಯಬಹುದಾಗಿರುತ್ತದೆ.



ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲೂಕಿನ ಕೆ.ಶೆಟ್ಟಹಳ್ಳಿ ಗ್ರಾಮದಲ್ಲಿ ಸಪ್ತಸಿರಿ ಗ್ರಾಮಾಭಿವೃದ್ಧಿ ಸೇವಾ ಸಮಿತಿ (ರಿ) ಹಾಗೂ ಸಪ್ತಸಿರಿ ಸೇವಾ ಸಮಿತಿ ಜಂಟಿ ಆಶ್ರಯದ ಸ್ವಾತಂತ್ರ್ಯ ಅಮೃತ ಮಹೋತ್ಸವದಲ್ಲಿ ಮುಖಂಡ ದಾಸಪ್ಪ ಧ್ವಜಾರೋಹಣ ನೆರವೇರಿಸಿದರು. ಎರಡೂ ಸಮಿತಿಗಳ ಸಂಸ್ಥಾಪಕ ಸಲಹೆಗಾರ ಎಸ್.ಎಂ.ಯೋಗ, ನಿರ್ದೇಶಕರು, ಸದಸ್ಯರು ಮತ್ತಿತರರು ಹಾಜರಿದ್ದರು.

ನಾಳೆ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರ ಜಯಂತಿ

ಸಂಸ್ಥೆಯ ನಿವೃತ್ತ ಸಿಬ್ಬಂದಿಗೆ ಸನ್ಮಾನ; ಮೃಗಾಲಯಕ್ಕೆ ನೆರವು

ಮೈಸೂರು, ಆ.16(ಎಂಟಿವೈ)– ಸುತ್ತೂರು ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠದ 23ನೇ ಪೀಠಾಧಿಪತಿ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ 107ನೇ ಜಯಂತಿಯನ್ನು ಆ.18ರಂದು ಆಚರಿಸಲಾಗುತ್ತಿದೆ ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ ತಿಳಿಸಿದ್ದಾರೆ.



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ಆವರಣದಲ್ಲಿರುವ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಎರಡು ವರ್ಷದಿಂದ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಜಯಂತಿ ಕಾರ್ಯಕ್ರಮವನ್ನು ಆನ್‌ಲೈನ್ ಮೂಲಕ ಆಚರಿಸಲಾಗಿತ್ತು. ಈ ಬಾರಿ ಜಯಂತಿ ಕಾರ್ಯಕ್ರಮವನ್ನು ಸಂಭ್ರಮದಿಂದ ಆಚರಿಸಲು ಉದ್ದೇಶಿಸಲಾಗಿದೆ. ಆ.18ರಂದು ಬೆಳಗ್ಗೆ 11 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಶಾಖಾ ಮಠದಲ್ಲಿ ಜಯಂತಿ ಕಾರ್ಯಕ್ರಮ ಜರುಗಲಿದೆ. ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ಸಿದ್ಧಗಂಗಾ ಕ್ಷೇತ್ರದ ಶ್ರೀ ಸಿದ್ಧಲಿಂಗ ಮಹಾಸ್ವಾಮಿ ಸಾನಿಧ್ಯದಲ್ಲಿ ನಡೆಯುವ ಕಾರ್ಯಕ್ರಮವನ್ನು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಉದ್ಘಾಟಿಸಲಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆ ವಹಿಸುವ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಸಂಸದ ಪ್ರತಾಪಸಿಂಹ, ಶಾಸಕ ಎಸ್.ಎ. ರಾಮದಾಸ್ ಭಾಗವಹಿಸಲಿದ್ದಾರೆ ಎಂದರು.

ನಿವೃತ್ತರಿಗೆ ಅಭಿನಂದನೆ: ಮಧ್ಯಾಹ್ನ 2 ಗಂಟೆಗೆ ಜೆಎಸ್‌ಎಸ್ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದವರಿಗೆ ಪ್ರತಿ ವರ್ಷದಂತೆ ಈ ವರ್ಷವೂ ಅಭಿನಂದನೆ ಕಾರ್ಯಕ್ರಮ ಏರ್ಪಡಿಸಲಾಗಿದೆ. ಈ ಬಾರಿ ಸುಮಾರು 131 ಮಂದಿ ನಿವೃತ್ತರಾಗಿದ್ದಾರೆ. 42 ಮಂದಿ ಕೆಲಸದಿಂದ ಬಿಡುಗಡೆ ಪಡೆದಿದ್ದಾರೆ. 16 ಮಂದಿ ಸೇವೆಯಲ್ಲಿರುವಾಗಲೇ ಮೃತಪಟ್ಟಿದ್ದಾರೆ. ಒಟ್ಟು 189 ಮಂದಿ ಹಾಗೂ ಅವರ ಕುಟುಂಬದವರನ್ನು ಅಭಿನಂದಿಸಲಾಗುತ್ತದೆ. ಇದೇ ವೇಳೆ ಜೆಎಸ್‌ಎಸ್ ವಿದ್ಯಾಸಂಸ್ಥೆಗಳಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುತ್ತದೆ ಎಂದರು.

ಜೆಎಸ್‌ಎಸ್ ಶಾಲಾ ಕಾಲೇಜುಗಳ ಉತ್ತಮ ವಾರ್ಷಿಕ ಸಂಚಿಕೆಗಳಿಗೆ ಹಾಗೂ ಪ್ರಸಾದ ದ್ವೈಮಾಸಿಕ ಪ್ರಬಂಧ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ ಮಾಡಲಾಗುತ್ತದೆ. ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘದಿಂದ ವಿದ್ಯಾರ್ಥಿನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿಭಾನ್ವಿತರಿಗೆ ವಿದ್ಯಾರ್ಥಿ ವೇತನ ನೀಡಲಾಗುವುದು ಎಂದು ತಿಳಿಸಿದರು.

ಅಮೆರಿಕಾದಲ್ಲೂ ಜಯಂತಿ

ಆ.28ರಂದು ಅಮೆರಿಕಾದ ಮೆರಿಲ್ಯಾಂಡ್‌ನ ಗೇಥರ್ಸ್‌ಬರ್ಗ್‌ನಲ್ಲಿರುವ ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್ನಿನಲ್ಲಿ ಶ್ರೀಗಳ ಜಯಂತಿ ಆಚರಿಸಲಾಗುತ್ತಿದೆ. ಅದೇ ಸಂದರ್ಭದಲ್ಲಿ ಅಲ್ಲಿ ನಿರ್ಮಿಸಲಿರುವ ದೇವಾಲಯ ಹಾಗೂ ಅದಕ್ಕೆ ಹೊಂದಿಕೊಂಡಿರುವ ಸಂಕೀರ್ಣದ ಭೂಮಿಪೂಜೆ ನೆರವೇರಿಸಲಾಗುತ್ತದೆ ಎಂದು ಡಾ. ಸಿ.ಜಿ.ಬೆಟಸೂರಮಠ ತಿಳಿಸಿದರು.

ಮೃಗಾಲಯಕ್ಕೆ ನೆರವು: ಶ್ರೀಗಳ ಜಯಂತಿಯ ದಿನ ಆ.29ರಂದು ಮೃಗಾಲಯದ ಪ್ರಾಣಿ ಪಕ್ಷಿಸಂಕುಲಕ್ಕೆ ಆಹಾರ ವಿತರಣೆ ಮಾಡಲು ಪ್ರತಿ ವರ್ಷದಂತೆ ಈ ವರ್ಷವೂ ಒಂದು ಲಕ್ಷ ರೂ. ನೆರವು ನೀಡಲಾಗುತ್ತದೆ. ಜತೆಗೆ ರಕ್ತದಾನ, ನೇತ್ರದಾನ ಹಾಗೂ ದೇಹದಾನಗಳ ಬಗ್ಗೆ ಅರಿವು ಮೂಡಿಸಲಾಗುತ್ತದೆ. ಸಮಾರಂಭದಂದು ಸಾಂಕೇತಿಕವಾಗಿ ರಕ್ತದಾನ ಕಾರ್ಯಕ್ರಮ ಏರ್ಪಡಿಸಲಾಗಿದೆ. ಜೆಎಸ್‌ಎಸ್ ಗ್ರಂಥಮಾಲೆಯ ಪ್ರಕಟಣೆಗಳಿಗೆ ಆ.18ರಿಂದ ಸೆ.30ರವರೆಗೆ ಶೇ.50ರಷ್ಟು ರಿಯಾಯಿತಿ ನೀಡಲಾಗುತ್ತದೆ ಎಂದು ಮಾಹಿತಿ ನೀಡಿದರು.

ಪ್ರತಿ ವರ್ಷದಂತೆ ಜೆಎಸ್‌ಎಸ್ ಮಹಾವಿದ್ಯಾಪೀಠದ ಎಲ್ಲ ಅಂಗಸಂಸ್ಥೆಗಳು, ವಿವಿಧ ಸಂಘಸಂಸ್ಥೆಗಳು ಹಾಗೂ ಸಾರ್ವಜನಿಕರಿಂದ ಸೆಪ್ಟೆಂಬರ್ ಅಂತ್ಯದವರೆಗೆ ವಿವಿಧೆಡೆಗಳಲ್ಲಿ ಜಯಂತಿ ಮಹೋತ್ಸವ ಆಚರಿಸಲಾಗುತ್ತದೆ. ಸಂಸ್ಥೆಗಳಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರಗಳನ್ನು ಏರ್ಪಡಿಸಲಾಗುತ್ತದೆ. ಗಾಲಿ ಕುರ್ಚಿ (ವ್ಹೀಲ್‌ಚೇರ್), ಪುಸ್ತಕಗಳು, ನೋಟ್‌ಪುಸ್ತಕಗಳು, ಶಾಲಾ ಬ್ಯಾಗ್‌ಗಳು, ವಸ್ತ್ರಗಳನ್ನು ಅಗತ್ಯವಿರುವ ವಿದ್ಯಾರ್ಥಿಗಳಿಗೆ ವಿತರಿಸಲಾಗುತ್ತದೆ. ಕಾರ್ಯಕ್ರಮದಲ್ಲಿ ನೇರವಾಗಿ ಪಾಲ್ಗೊಳ್ಳಲು ಸಾಧ್ಯವಾಗದವರು ಆನ್‌ಲೈನ್‌ನಲ್ಲಿ ಕಾರ್ಯಕ್ರಮವನ್ನು ಯುಟ್ಯೂಬ್ ಹಾಗೂ ಫೇಸ್ ಬುಕ್‌ಗಳಲ್ಲಿ ವೀಕ್ಷಿಸಬಹುದು ಎಂದರು.

ಸುದ್ದಿಗೋಷ್ಠಿಯಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಶಿವಕುಮಾರ ಸ್ವಾಮಿ, ಕಾಲೇಜು ವಿಭಾಗದ ಸಹಾಯಕ ನಿರ್ದೇಶಕ ಬಿ.ನಿರಂಜನಮೂರ್ತಿ ಇದ್ದರು.

ಮೈಸೂರು ಮಿತ್ರ ಬುಧವಾರ 17 ಆಗಸ್ಟ್ 2022

ವಿವಿಧೆಡೆ 75ನೇ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಸಂಭ್ರಮ

ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ, ಬಲಿದಾನ ದೊಡ್ಡದು

ತಿ.ನರಸೀಪುರ, ಆ.16– ದೇಶ ಸ್ವಾತಂತ್ರ್ಯ ಗಳಿಸಲು ಹೋರಾಟಗಾರರ ತ್ಯಾಗ, ಬಲಿದಾನ ದೊಡ್ಡದು ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು ತಿಳಿಸಿದರು.

ಪಟ್ಟಣದ ಕಾಂಗ್ರೆಸ್ ಕಚೇರಿ ಎದುರು ನಡೆದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಇಡೀ ದೇಶವನ್ನು ಎಚ್ಚರಿಸಿ ಸ್ವಾತಂತ್ರ್ಯದ ಅಗತ್ಯ ಒತ್ತಿ ಹೇಳಿ, ಸತ್ಯ ಹಾಗೂ ಅಹಿಂಸೆಯನ್ನು ಹೋರಾಟದ ಅಸ್ತ್ರಗಳನ್ನಾಗಿ ಬಳಸಿ ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ದಿಕ್ಕನ್ನು ನೀಡಿದ ಮಹಾನ್ ವ್ಯಕ್ತಿ ಎಂದರು.

ಪುರಸಭಾ ಸದಸ್ಯ ಬಾದಾಮಿ ಮಂಜು ಮಾತನಾಡಿ, ವೀರ ಪುರುಷರು ಹಾಗೂ ವೀರ ವನಿತೆಯರನ್ನು ನೆನೆಯುವಾಗ ಭಗತ್ ಸಿಂಗ್, ಮಂಗಲ್ ಪಾಂಡೆ, ಚಂದ್ರಶೇಖರ ಆಜಾದ್, ಸುಭಾಷ್ ಚಂದ್ರ ಬೋಸ್, ಸರ್ದಾರ್ ವಲ್ಲಭ್ ಬಾಯಿ ಪಟೇಲ್ ಅವರನ್ನು ಮರೆಯಲಾಗದು. ಝಾನ್ಸಿ ರಾಣಿ ಲಕ್ಷ್ಮೀಬಾಯಿ ಹಾಗೂ ಕಿತ್ತೂರು ಚೆನ್ನಮ್ಮರಂಥ ಕ್ರಾಂತಿಕಾರಿ ಮಹಿಳೆಯರು ಭಾರತದ ಕೀರ್ತಿ ಪತಾಕೆ ಎತ್ತಿ ಹಿಡಿದಿದ್ದಾರೆ. ಪ್ರಸ್ತುತ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಹುತಾತ್ಮರನ್ನು ನೆನೆಯುವುದು ಅಗತ್ಯ ಎಂದರು.

ಪುರಸಭಾ ಉಪಾಧ್ಯಕ್ಷೆ ನಾಗರತ್ನ, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಶಿವಮೂರ್ತಿ, ತಾಪಂ ಮಾಜಿ ಸದಸ್ಯ ರಾಮಲಿಂಗಯ್ಯ, ತಾಲೂಕು ಕುರುಬ ಸಂಘದ ಕಾರ್ಯದರ್ಶಿ ಕೊತ್ತೇಗಾಲ ಬಸವರಾಜು, ಉಪ್ಪಾರ ಸಮುದಾಯದ ಕಾರ್ಯದರ್ಶಿ ಸಿದ್ದಶೆಟ್ಟಿ, ಆಪ್ತ ಸಹಾಯಕ ಬಸವರಾಜು, ಮುಖಂಡರಾದ ಅನುಪ್‌ಗೌಡ, ಸಂತೋಷ್, ಭೈರೇಗೌಡ, ಸ್ವಾಮಿ, ಗುರುಮಲ್ಲ, ಬಸವರಾಜು, ಲತಾ ಜಗದೀಶ್, ಗುರುಸ್ವಾಮಿ, ವಿನೋದ ಹಾಜರಿದ್ದರು.



ಹುಣಸೂರಲ್ಲಿ ಅದ್ದೂರಿ ಸ್ವಾತಂತ್ರ್ಯ ದಿನಾಚರಣೆ

19 ಮಂದಿಗೆ ಹುಣಸೂರು ರತ್ನ ಪ್ರಶಸ್ತಿ ಪ್ರದಾನ



ಹುಣಸೂರು, ಆ.16– 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ ನಗರದ ಮುನೇಶ್ವರ ಕಾವಲ್ ಮೈದಾನದಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಸೋಮವಾರ ಅದ್ದೂರಿಯಾಗಿ ಆಚರಿಸಲಾಯಿತು.

ಅಂದು ಬೆಳಗ್ಗೆ ಉಪವಿಭಾಗಾಧಿಕಾರಿ ವರ್ಣಿತ್ ನೇಗಿ ಧ್ವಜಾರೋಹಣ ನೆರವೇರಿಸಿ, ಪೊಲೀಸರು ಹಾಗೂ ವಿದ್ಯಾರ್ಥಿಗಳಿಂದ ಧ್ವಜ ವಂದನೆ ಸ್ವೀಕರಿಸಿದರು. ಈ ವೇಳೆ 20ಕ್ಕೂ ಹೆಚ್ಚು ಶಾಲಾ ಮಕ್ಕಳ ತಂಡ ಪಥಸಂಚಲನ ನಡೆಸಿದರು. ಬಳಿಕ ಶಾಲಾ ಮಕ್ಕಳಿಂದ ನಡೆದ ಸಾಂಸ್ಕೃತಿಕ ಕಾರ್ಯಕ್ರಮ ನೋಡುಗರ ಮನ ಸೆಳೆಯಿತು. ಇದೇ ವೇಳೆ ಕಾಲೇಜು ವಿದ್ಯಾರ್ಥಿಗಳು 1600 ಅಡಿ ಉದ್ದದ ತಿರಂಗ ಹಿಡಿದು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು.

19 ಮಂದಿಗೆ ಪ್ರಶಸ್ತಿ ಪ್ರದಾನ: ವಿವಿಧ ಕ್ಷೇತ್ರಗಳಲ್ಲಿ ಭ್ರಷ್ಟ ಮುಕ್ತರಾಗಿ ಸೇವೆ ಸಲ್ಲಿಸಿದ 19 ಮಂದಿಗೆ ಶಾಸಕ ಹೆಚ್.ಪಿ. ಮಂಜುನಾಥ್ ತಮ್ಮ ತಾಯಿ ರತ್ನಮ್ಮ ಅವರ ಹೆಸರಿನಲ್ಲಿ ಸ್ಥಾಪಿಸಿರುವ ಹುಣಸೂರು ರತ್ನ ಪ್ರಶಸ್ತಿಯನ್ನು ಪ್ರದಾನ ಮಾಡಿದರು.

ನಂತರ ಮಾತನಾಡಿದ ಅವರು, ಸಾಮಾಜಿಕ ಕಳಕಳಿ ಹೊಂದುವ ಮೂಲಕ ನಿಸ್ವಾರ್ಥ ಸೇವೆ ಸಲ್ಲಿಸಿದವರನ್ನು 75ನೇ ಸ್ವಾತಂತ್ರ್ಯ ದಿನಾಚರಣೆಯಂದು ಸನ್ಮಾನಿಸುತ್ತಿರುವುದು ಸಂತಸದ ವಿಚಾರ ಎಂದರು.

ಇದೇ ವೇಳೆ ಎನ್.ವೆಂಕಟಚಲಪತಿ (ನಿವೃತ್ತ ತಹಸೀಲ್ದಾರ್), ಎಸ್.ನಂಜುಂಡ (ನಿವೃತ್ತ ಡಿವೈಎಸ್‌ಪಿ), ನರಸೇಗೌಡ (ನೀರಾವರಿ), ಎಂ.ಧರ್ಮೇಂದ್ರ (ಪೊಲೀಸ್ ಅಧಿಕಾರಿ), ಗಿರೀಶ್(ತಾಪಂ ಇಓ), ಡಾ.ಲತಾ (ವೈದ್ಯೆ), ವೆಂಕಟೇಶ್(ಕೃಷಿ), ಎನ್.ಗೀತಾ (ಶಿಕ್ಷಕಿ), ಶಕೀಲಾಭಾನು (ಕಂದಾಯ), ಕುಮಾರಿ(ನೀರಾವರಿ), ಸಿ.ಎಂ.ಸುರೇಶ್ (ನೀರಾವರಿ), ಶಿವಪ್ಪ (ಶಿಕ್ಷಕ), ಶೇಖರ್ (ಚೆಸ್ಕಾಂ), ಮಾಲಿನಿ (ನರ್ಸ್), ವೆಂಕಟೇಶ್ (ಅರಣ್ಯ), ಮಹದೇವ (ಆರೋಗ್ಯ), ರಾಚಯ್ಯ(ಪೌರ ಕಾರ್ಮಿಕ), ಸರಿತಾ(ಆಶಾ ಕಾರ್ಯಕರ್ತೆ) ಅವರನ್ನು ಶಾಸಕರು ಸನ್ಮಾನಿಸಿದರು.

ಸಾಗುವಳಿ ಪತ್ರ ವಿತರಣೆ: ಅಕ್ರಮ–ಸಕ್ರಮ ಸಮಿತಿಯಿಂದ ಮಂಜೂರಾದ 27 ಫಲಾನುಭವಿಗಳಿಗೆ ಶಾಸಕ ಹೆಚ್.ಪಿ.ಮಂಜುನಾಥ್ ಹಾಗೂ ಸಮಿತಿ ಸದಸ್ಯರು ಸಾಗುವಳಿ ಪತ್ರ ವಿತರಿಸಿದರು. ಈ ವೇಳೆ ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್, ಉಪವಿಭಾಗಾಧಿಕಾರಿ ವರ್ಣಿತ್ ನೇಗಿ, ಪೌರಾಯುಕ್ತ ರವಿಕುಮಾರ್ ನಗರಸಭಾಧ್ಯಕ್ಷೆ ಸಮೀನಾ ಪರ್ವಿನ್, ಉಪಾಧ್ಯಕ್ಷ ದೇವನಾಯ್ಕ, ತಾಪಂ ಆಡಳಿತಾಧಿಕಾರಿ ನಂದ, ತಾಪಂ ಇಓ ಮನು, ನಗರಸಭಾ ಸದಸ್ಯರಾದ ಸ್ವಾಮಿಗೌಡ, ಹರೀಶ್, ಅಕ್ರಮ ಸಕ್ರಮ ಸಮಿತಿ ಸದಸ್ಯರಾದ ವೆಂಕಟಮ್ಮ, ನಾಗರಾಜ್ ಮಲ್ಲಾಡಿ, ಡಿವೈಎಸ್‌ಪಿ ರವಿಪ್ರಸಾದ್, ಉಪಸ್ಥಿತರಿದ್ದರು.

ಪ್ರತಿಯೊಬ್ಬರೂ ದೇಶಪ್ರೇಮ ಬೆಳೆಸಿಕೊಳ್ಳಿ: ಶಾಸಕ ಅನಿಲ್



ಸರಗೂರು, ಆ.16– ತಾಲೂಕಿನ ಸರ್ಕಾರಿ ಕಚೇರಿಗಳು, ಶಾಲಾ–ಕಾಲೇಜು, ಸಂಘ–ಸಂಸ್ಥೆಗಳು ಸೇರಿದಂತೆ ಪ್ರತಿ ಮನೆಗಳಲ್ಲೂ ಸ್ವಾತಂತ್ರ್ಯ ದಿನಾಚರಣೆಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ತಾಲೂಕು ಆಡಳಿತ: ಪಟ್ಟಣದ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ತಾಲೂಕು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ, ಪಪಂ ನಿಂದ ಆಯೋಜಿಸಿದ್ದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಧ್ವಜಾರೋಹಣ ನೆರವೇರಿಸಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವಿಜೇತರಾದ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಶಾಸಕ ಅನಿಲ್ ಚಿಕ್ಕಮಾದು ಬಹುಮಾನ ವಿತರಿಸಿದರು.

ನಂತರ ಮಾತನಾಡಿದ ಅವರು, ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡಲು ಮಹಾನ್ ನಾಯಕರು ತ್ಯಾಗ, ಬಲಿದಾನಗೈದಿದ್ದಾರೆ. ಪ್ರತಿಯೊಬ್ಬರೂ ದೇಶ ಪ್ರೇಮ ಬೆಳೆಸಿಕೊಳ್ಳಬೇಕು. ಸಮಾಜದಲ್ಲಿ ಜಾತೀಯತೆ ಅಳಿಸಬೇಕು. ಸಮಾನತೆ ಬೆಳೆಯಬೇಕು. ಎಲ್ಲರನ್ನೂ ಒಂದೇ ಎನ್ನುವ ಮನೋಭಾವ ಮೂಡಿಸಿಕೊಳ್ಳಬೇಕು. ಆ ಮೂಲಕ ದೇಶದ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಸಲಹೆ ನೀಡಿದರು.

ಯುವ ಪೀಳಿಗೆ ಮಹಾತ್ಮ ಗಾಂಧೀಜಿ, ಅಂಬೇಡ್ಕರ್, ರಾಜ್‌ಗುರು ಅವರ ಆದರ್ಶಗಳನ್ನು ಪಾಲಿಸಬೇಕು. ಸ್ವಾತಂತ್ರ್ಯಕ್ಕಾಗಿ ಹೋರಾಡಿದವರನ್ನು ನಿತ್ಯ ಸ್ಮರಿಸಬೇಕು ಎಂದರು.

ಪಶು ಸಂಗೋಪನಾ ಇಲಾಖೆ ಸಹಾಯಕ ನಿರ್ದೇಶಕ ವೈ.ಡಿ.ರಾಜಣ್ಣ ಮಾತನಾಡಿದರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕ ಡಾ.ಪ್ರಕಾಶ್ ಪ್ರಧಾನ ಭಾಷಣ ಮಾಡಿದರು. ತಹಶೀಲ್ದಾರ್ ಚಲುವರಾಜು ಅಧ್ಯಕ್ಷತೆ ವಹಿಸಿದ್ದರು. ಪಪಂ ಅಧ್ಯಕ್ಷೆ ರಾಧಿಕಾ, ಉಪಾಧ್ಯಕ್ಷ ವಿನಾಯಕ ಪ್ರಸಾದ್, ಸದಸ್ಯರಾದ ಹೇಮಾವತಿ, ಸಣ್ಣತಾಯಮ್ಮ, ಚೈತ್ರಾ, ಉಮಾ, ಎಸ್.ಎಲ್.ರಾಜಣ್ಣ, ಶಿವಕುಮಾರ್, ನೂರಾಳಸ್ವಾಮಿ, ಶ್ರೀನಿವಾಸ್, ದಿವ್ಯಾ, ಚಲುವಕೃಷ್ಣ, ರಂಗಸ್ವಾಮಿ, ಪ್ರತಾಪ್, ನಾರಾಯಣ್, ಬಸವರಾಜಪ್ಪ, ತಾಪಂ ಇಓ ಕೆ.ಸುಷ್ಮಾ, ಮುಖ್ಯಾಧಿಕಾರಿ ಬಿ.ಜೆ.ಸತೀಶ್, ನೀರಾವರಿ ಇಲಾಖೆ ಎಇಇ ಉಷಾ, ಎಇ ಮಧುಸೂದನ್, ಜಿಪಂ ಮಾಜಿ ಸದಸ್ಯರಾದ ಕೆ.ಚಿಕ್ಕವೀರನಾಯಕ, ಭಾಗ್ಯಲಕ್ಷ್ಮಿ, ಮುಖಂಡರಾದ ಸಿ.ಕೆ.ಗಿರೀಶ್, ಶಿವಕುಮಾರ್, ರಮೇಶ್, ಡಿ.ಟಿ.ಸುನೀಲ್, ಹರೀಶ್, ಆರ್‌ಐ ಮುಜೀಬ್, ಪ್ರಾಂಶುಪಾಲ ಮಲ್ಲೇಶ್ ಸೇರಿದಂತೆ ಇನ್ನಿತರರಿದ್ದರು. ಇದೇ ವೇಳೆ ಸಾಧಕರು, ಯೋಧರನ್ನು ಸನ್ಮಾನಿಸಲಾಯಿತು. ಶಾಲಾ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು.



ನಂಜನಗೂಡು ತಾಲೂಕಿನ ಹೆಡತಲೆ ಗ್ರಾಪಂನಲ್ಲಿ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಗ್ರಾಪಂ ಅಧ್ಯಕ್ಷ ಗೀತಾ ಧ್ವಜಾರೋಹಣ ನೆರವೇರಿಸಿದರು. ಈ ವೇಳೆ ಉಪಾಧ್ಯಕ್ಷ ಮಣಿಕಂಠ, ಸದಸ್ಯರಾದ ಕುಸುಮ, ರತ್ನಮ್ಮ, ತುಳಸಮ್ಮ, ಜೆ.ಮಹದೇವ್ ನಾಯಕ್, ಮಹದೇವಸ್ವಾಮಿ, ಪಿಡಿಓ ಸುರೇಶ್ ಹಾಗೂ ಸಿಬ್ಬಂದಿ ವರ್ಗ ಹಾಜರಿದ್ದರು.

ಸ್ವಾತಂತ್ರ್ಯ ಹೋರಾಟಗಾರರ ಹೋರಾಟ ಚರಿತ್ರಾರ್ಹ: ತಹಸೀಲ್ದಾರ್ ಚಂದ್ರಮೌಳಿ



ಪಿರಿಯಾಪಟ್ಟಣ, ಆ.16– ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂಭ್ರಮದಲ್ಲಿ ದೇಶವನ್ನು ಪರಕೀಯರ ದಾಸ್ಯದಿಂದ ಬಿಡುಗಡೆಗೊಳಿಸಲು ಹೋರಾಡಿದ ಮಹನೀಯರನ್ನು ನೆನೆಯಬೇಕಿದೆ ಎಂದು ತಹಸೀಲ್ದಾರ್ ಚಂದ್ರಮೌಳಿ ಎಂದರು.

ಪಟ್ಟಣದ ಸರ್ಕಾರಿ ಪದವಿಪೂರ್ವ ಕಾಲೇಜಿನ ಆವರಣದಲ್ಲಿ ಆಯೋಜಿಸಿದ್ದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಾತ್ಮ ಗಾಂಧೀಜಿ, ಸುಭಾಷ್ ಚಂದ್ರ ಬೋಸ್, ಸರ್ದಾರ್ ವಲ್ಲಭ ಬಾಯಿ ಪಟೇಲ್, ಭಗತ್ ಸಿಂಗ್, ಅಬುಲ್ ಕಲಾಂ ಆಜಾದ್, ಜವಾಹರ್ ಲಾಲ್ ನೆಹರೂ ಮೊದಲಾದವರ ಹೋರಾಟ ಚರಿತ್ರಾರ್ಹ. ಇಂತಹ ಮಹನೀಯರ ಆದರ್ಶ ಪಾಲಿಸದಿದ್ದಲ್ಲಿ ಇಂತಹ ಕಾರ್ಯಕ್ರಮ ಅರ್ಥಹೀನ ಎಂದರು.

ಪ್ರಧಾನ ಭಾಷಣ ಮಾಡಿದ ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಪಿ.ಎಸ್.ರಘು, ನಾಡಿನಲ್ಲಿ ಕಿತ್ತೂರು ವೀರರಾಣಿ ಚೆನ್ನಮ್ಮ, ವೀರ ಸಂಗೊಳ್ಳಿ ರಾಯಣ್ಣ ಮೊದಲಾದವರು ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೂ ಮೊದಲೇ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದ ಮಹಾನ್ ಸ್ವಾತಂತ್ರ್ಯ ಹೋರಾಟಗಾರರು. ಇವರೆಲ್ಲರ ತ್ಯಾಗದ ಫಲವಾಗಿ ದೊರೆತ ಸ್ವಾತಂತ್ರ್ಯದ ಸವಿಯುಣ್ಣುವ ಜೊತೆಗೆ ದೇಶದ ಉನ್ನತಿಗಾಗಿ ನಮ್ಮ ಕರ್ತವ್ಯ ಅರಿತು ನಿರ್ವಹಿಸುವುದೇ ಆ ಮಹನೀಯರ ತ್ಯಾಗಕ್ಕೆ ನಾವು ಸಲ್ಲಿಸುವ ನಿಜವಾದ ಗೌರವ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಕೆ.ಮಹದೇವ್ ಮಾತನಾಡಿ, ಸ್ವಾತಂತ್ರ್ಯದ 75 ವರ್ಷಗಳ ಅವಧಿಯಲ್ಲಿ ನಾವು ಅನೇಕ ಏಳು ಬೀಳುಗಳನ್ನು ಎದುರಿಸಿದ್ದೇವೆ. ನೂರಾರು ಸಮಸ್ಯೆ ಮೆಟ್ಟಿ ನಿಂತಿದ್ದೇವೆ. ವಿವಿಧ ಭಾಷೆ, ಸಂಸ್ಕೃತಿ, ಜೀವನ ಶೈಲಿ ಇದ್ದರೂ ಈ ರಾಷ್ಟ್ರೀಯ ಹಬ್ಬಗಳು ನಮ್ಮೆಲ್ಲರನ್ನೂ ಬೆಸೆಯುವ ಬಂಧವಾಗಿದೆ. ಅಂಬೇಡ್ಕರ್ ನೀಡಿದ ಸಂವಿಧಾನ ಪ್ರಜಾಪ್ರಭುತ್ವ ಬಲಪಡಿಸುವ ನಿಟ್ಟಿನಲ್ಲಿ ಸಾಗಿದೆ ಎಂದರು

ಈ ವೇಳೆ ತಾಪಂ ಇಓ ಕೃಷ್ಣಕುಮಾರ್, ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ, ತಾಲೂಕು ಆರೋಗ್ಯಾಧಿಕಾರಿ ಡಾ. ಶರತ್ ಬಾಬು, ವೈದ್ಯಾಧಿಕಾರಿ ಡಾ.ದೇವಿಕಾ. ಸಿಡಿಪಿಓ ಮಮತಾ, ಬಿಇಓ ಬಸವರಾಜ್, ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಮುಖ್ಯಾಧಿಕಾರಿ ಮಹೇಂದ್ರಾ, ಸಿಪಿಐ ಜಗದೀಶ್ ಹಾಗೂ ಪ್ರಕಾಶ್ ಪುರಸಭೆ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರು, ನೂರಾರು ಮಕ್ಕಳು ಹಾಗೂ ಶಿಕ್ಷಕರು ಭಾಗವಹಿಸಿದ್ದರು.

ಕಠಿಣ ಹೋರಾಟದ ನಂತರ ದೇಶಕ್ಕೆ ಸ್ವಾತಂತ್ರ್ಯ



ಮಲ್ಕುಂಡಿ, ಆ.16– ಅತ್ಯಂತ ಕಠಿಣ ಹೋರಾಟದ ನಂತರ ಭಾರತ ಸ್ವಾತಂತ್ರ್ಯ ಪಡೆದಿದ್ದು, ದೇಶ ಸ್ವಾವಲಂಬಿಯಾಗಬೇಕಾದ ಅವಶ್ಯಕತೆ ಇದೆ ಎಂದು ತಾಪಂ ಮಾಜಿ ಸದಸ್ಯ ಎಸ್.ಬಸವರಾಜ್ ತಿಳಿಸಿದರು. ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಮಾತನಾಡಿದ ಅವರು, ಯಾರು ಸ್ವಾತಂತ್ರ್ಯವಾಗಿರಲು ಬಯಸುತ್ತಾರೋ ಅವರು ಮೊದಲು ಸ್ವಾವಲಂಬಿಗಳಾಗಬೇಕು. ಬೇರೆ ರಾಷ್ಟ್ರಗಳೊಂದಿಗೆ ಸ್ನೇಹ ಸಂಪರ್ಕವಿರಬೇಕು ಎಂದರು. ಎಸ್‌ಡಿಎಂಸಿ ಅಧ್ಯಕ್ಷ ಎಂ.ಪಿ.ಮಹೇಶ್ ಧ್ವಜಾರೋಹಣ ನೆರವೇರಿಸಿದರು. ಈ ವೇಳೆ ಉಪಾಧ್ಯಕ್ಷೆ ನಾಗರತ್ನ, ಸದಸ್ಯರಾದ ಮಹೇಶ್, ಬಿಳಿಗಿರಯ್ಯ, ಮಲ್ಲು ಬಸವರಾಜ್, ಆಶಾರಾಣಿ, ಗ್ರಾಪಂ ಸದಸ್ಯೆ ದೇವಮ್ಮ, ಮುಖಂಡರಾದ ಸಣ್ಣಮಾದಪ್ಪ ಕೆಂಡಪ್ಪ ಗುರುಸಿದ್ದಪ್ಪ, ಪುಟ್ಟಸ್ವಾಮಿ, ಮುಖ್ಯಶಿಕ್ಷಕ ಸೋಮು ಹಾಗೂ ಶಿಕ್ಷಕರು ಹಾಜರಿದ್ದರು.

ಸ್ವಾತಂತ್ರ್ಯ ತಂದು ಕೊಟ್ಟ ಮಹಾನ್ ನಾಯಕರ ಸ್ಮರಿಸಿ




ತಿ.ನರಸೀಪುರ, ಆ.16– ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟ ಮಹಾನ್ ನಾಯಕರ ತ್ಯಾಗ, ಬಲಿದಾನಗಳನ್ನು ಸ್ಮರಿಸುವ ಮೂಲಕ ಅವರ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಬಾಬು ಜಗಜೀವನ ರಾಂ ಸಮತಾ ಆಂದೋಲನದ ರಾಜ್ಯಾಧ್ಯಕ್ಷ ಮಾಜಿ ವಿಧಾನ ಪರಿಷತ್ ಸದಸ್ಯ ಸಿ.ರಮೇಶ್ ಕರೆ ನೀಡಿದರು.

ಪಟ್ಟಣದ ಗೋಪಾಲಪುರದಲ್ಲಿರುವ ಪುರಸಭಾ ಸದಸ್ಯ ಅರ್ಜುನ್ ಅವರ ಜನ ಸಂಪರ್ಕ ಕಚೇರಿಯಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ದೇಶದ ಸ್ವಾತಂತ್ರಕ್ಕಾಗಿ ಹೋರಾಡಿದ, ತ್ಯಾಗ ಬಲಿದಾನಗಳ ಮೂಲಕ ದೇಶಾದ್ಯಂತ ಸ್ವಾತ್ರಂತ್ರ್ಯದ ಕಿಚ್ಚನ್ನು ಹಚ್ಚಿ ಚಳವಳಿಗಳ ಮೂಲಕ ದೇಶಕ್ಕೆ ಸ್ವತಂತ್ರ ತಂದುಕೊಟ್ಟ ಲಕ್ಷಾಂತರ ಹೋರಾಟಗಾರರನ್ನು 75ನೇ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದಂದು ಸ್ಮರಿಸುತ್ತಿರುವುದು ಹೆಮ್ಮೆಯ ವಿಚಾರ ಎಂದರು.

ಕಾರ್ಯಕ್ರಮದಲ್ಲಿ ತಾಲೂಕು ಬಾಬು ಜಗಜೀವನ್ ರಾಂ ಸಂಘದ ಅಧ್ಯಕ್ಷ ಮಲಿಯೂರು ಡಿ.ಶಂಕರ್, ಉಪಾಧ್ಯಕ್ಷ ಸಿದ್ದನಹುಂಡಿ ಗೋವಿಂದರಾಜು, ತಾಪಂ ಮಾಜಿ ಸದಸ್ಯ ಬಿ.ಎಲ್.ಮಹದೇವ್, ಬಿಜೆಪಿ ಮುಖಂಡ ಚೌಹಳ್ಳಿ ಸಿದ್ದರಾಜು, ಪುರಸಭಾ ಸದಸ್ಯ ಅಕ್ಕಿ ನಂಜುಂಡಸ್ವಾಮಿ, ಮುಖಂಡರಾದ ಬಿ.ಪಿ.ಮಾದೇವಣ್ಣ, ಆಲಗೂಡು ರಾಜು, ಸಂದೀಪ್, ಬಿಡ್ಡ ಎಂ.ಎಸ್.ಶ್ರೇಯಸ್, ತುಷಾರ್, ಮಹದೇವಸ್ವಾಮಿ ಇತರರಿದ್ದರು.

ಕೋಟೆಯಲ್ಲಿ 83 ರೈತರಿಗೆ ಸಾಗುವಳಿ ಪತ್ರ ವಿತರಣೆ



ಹೆಚ್.ಡಿ.ಕೋಟೆ, ಆ.16– ಹಲವು ವರ್ಷಗಳಿಂದ ವ್ಯವಸಾಯ ಮಾಡುತ್ತಿರುವ ರೈತರಿಗೆ ಸಾಗುವಳಿ ಪತ್ರ ವಿತರಿಸಿ ಅವರನ್ನು ಭೂ ಮಾಲೀಕರನ್ನಾಗಿ ಮಾಡಲಾಗಿದೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ 75ನೇ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ತಾಲೂಕು ಆಡಳಿತದಿಂದ ಆಯೋಜಿಸಿದ್ದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಧ್ವಜಾರೋಹಣ ಮಾಡಿ, 83 ಮಂದಿ ರೈತರಿಗೆ ಸಾಗುವಳಿ ಪತ್ರ ವಿತರಿಸಿ ಅವರು ಮಾತನಾಡಿದರು. ತಾಲೂಕಿನ ಜನ ಕೃಷಿಯನ್ನೇ ಅವಲಂಬಿಸಿದ್ದಾರೆ. ರೈತರಿಗೆ ಸಾಗುವಳಿ ಪತ್ರ ವಿತರಿಸಬೇಕೆಂಬುದು ನಮ್ಮ ತಂದೆ ದಿ.ಚಿಕ್ಕಮಾದು ಅವರ ಆಸೆಯಾಗಿತ್ತು. ಅವರ ಮನದಾಸೆಯಂತೆ ಇಂದು ನಾನು ರೈತರಿಗೆ ಹಕ್ಕುಪತ್ರ ವಿತರಿಸಿದ್ದೇನೆ ಎಂದರು.

ಇದೇ ವೇಳೆ ಮಾಜಿ ಶಾಸಕ ದಿ. ಚಿಕ್ಕಮಾದು ಸೇವಾ ಪ್ರತಿಷ್ಠಾನದಿಂದ ಅತೀ ಹೆಚ್ಚು ಅಂಕ ಪಡೆದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಅಲ್ಲದೇ ಸರ್ಕಾರಿ ಶಾಲೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಲಾಯಿತು. ಇದೇ ವೇಳೆ ಬೀಚನಹಳ್ಳಿ ಶಾಲೆಯ ಎಸ್.ನಂಯನಗೆ 20 ಸಾವಿರ ರೂ., ಇಂಟರ್ ನ್ಯಾಷನಲ್ ಕಿಕ್ ಬಾಕ್ಸಿಂಗ್ ಕೋಚ್ ಗೆಂಡತ್ತೂರಿನ ರಕ್ಷಿತ್ ಎಂ.ಗೌಡಗೆ 10 ಸಾವಿರ ಗೌರವಧನ ನೀಡಿ ಸನ್ಮಾನಿಸಲಾಯಿತು. ಇದೇ ವೇಳೆ ಯೋಧರನ್ನು ಗೌರವಿಸಲಾಯಿತು.

ಕರ್ನಾಟಕ ಮಹಿಳಾ ಅಭಿವೃದ್ಧಿ ನಿಗಮದಿಂದ 42 ಮಹಿಳಾ ಸ್ವಸಹಾಯ ಸಂಘಗಳಿಗೆ ತಲಾ 1 ಲಕ್ಷ ರೂ.ಗಳ ಚೆಕ್ ಅನ್ನು ಶಾಸಕ ಅನಿಲ್ ಚಿಕ್ಕಮಾದು ವಿತರಿಸಿದರು.

ಇದೇ ವೇಳೆ ಸಾರ್ವಜನಿಕರಿಗಾಗಿ ವಿವಿಧ ಇಲಾಖೆಗಳಿಂದ ವಸ್ತು ಪ್ರದರ್ಶನ ಆಯೋಜಿಸಲಾಗಿತ್ತು. ರೈತರಿಗೆ ವಿವಿಧ ಸವಲತ್ತುಗಳನ್ನು ನೀಡಲಾಯಿತು. ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪ್ರಥಮ ಸ್ಥಾನ ಪಡೆದ ತಾರಕ ವಿದ್ಯಾ ಸಂಸ್ಥೆ ಹಾಗೂ ಆದರ್ಶ ವಿದ್ಯಾಲಯಕ್ಕೆ 25 ಸಾವಿರ, ದ್ವಿತೀಯ ಸ್ಥಾನ ಪಡೆದ ಆದಿ ಚುಂಚನಗಿರಿ ಶಾಲೆ, ಡಿ.ಬಿ.ಕುಪ್ಪೆ ಶಾಲೆಗೆ 15 ಸಾವಿರ ಹಾಗೂ ತೃತೀಯ ಸ್ಥಾನ ಪಡೆದ ವಿಶ್ವ ಭಾರತೀ ಶಾಲೆ, ಸೇಂಟ್ ಥಾಮಸ್ ಶಾಲೆಗೆ 10 ಸಾವಿರ ಬಹುಮಾನ ವಿತರಿಸಿದರು. ಇದೇ ವೇಳೆ ತಾಲೂಕಿನಾದ್ಯಂತ ಎಲ್ಲಾ ಸಂಘ ಸಂಸ್ಥೆಗಳಿಂದ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಯಿತು.

ಕಾರ್ಯಕ್ರಮದ ಮುಖ್ಯ ಭಾಷಣಕಾರ ಮಹದೇವನಾಯಕ, ತಾಪಂ ಇಓ ರಾಜೇಶ್ ಜೆರಾಲ್ಡ್, ಬಿಇಓ ಎಂ.ಉದಯ ಕುಮಾರ್, ಬಿಆರ್‌ಸಿ ಕೃಷ್ಣ ಸಿಪಿಐ ಬಸವರಾಜ್, ಪುರಸಭಾ ಅಧ್ಯಕ್ಷೆ ಅನಿತಾ, ಸದಸ್ಯರಾದ ಎಚ್.ಸಿ.ನರಸಿಂಹಮೂರ್ತಿ, ಪುಟ್ಟ ಬಸವನಾಯಕ, ಆಸೀಫ್ ಇಕ್ಬಾಲ್, ಮಧು, ಪ್ರೇಮ್ ಸಾಗರ್, ಸೋಮಶೇಖರ್, ನಾಗರಾಜ್, ನಂಜಪ್ಪ, ಮೊತ್ತ ಬಸವರಾಜಪ್ಪ, ಕಸಾಪ ಕನ್ನಡ ಪ್ರಮೋದ್, ಸತೀಶ್ ಆರಾಧ್ಯ, ಡಾ.ಸೋಮಣ್ಣ, ಡಾ.ರವಿಕುಮಾರ್, ಬಿ.ವಿ.ಬಸವರಾಜ್ ಇನ್ನಿತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಸೀತಾರಾಮಂ (ತೆ): ಬೆ.10ಕ್ಕೆ, ವಿಕ್ರಾಂತ್ ರೋಣ (3ಡಿ) (ಕ): ಮ.1.30ಕ್ಕೆ, ಲಾಲ್ ಸಿಂಗ್ ಚಡ್ಡಾ (ಹಿಂ): ಸಂ.4.05ಕ್ಕೆ, ರಾ.9.45ಕ್ಕೆ, ರಕ್ಷಾಬಂಧನ್ (ಹಿಂ): ರಾ.7.25ಕ್ಕೆ.
ಸ್ಕ್ರೀನ್ 2	ರವಿ ಬೋಪಣ್ಣ (ಕ): ಬೆ.11ಕ್ಕೆ, ಮ.1.40ಕ್ಕೆ, ರಕ್ಷಾಬಂಧನ್ (ಹಿಂ): ಸಂ.4.30ಕ್ಕೆ, ವಿಕ್ರಾಂತ್‌ರೋಣ (3ಡಿ)(ಕ): ಸಂ.6.55ಕ್ಕೆ, ಗಾಳಿಪಟ–2 (ಕ): ರಾ.10ಕ್ಕೆ.
ಸ್ಕ್ರೀನ್ 3	ಎನ್ನ ತಾನ್ ಕೇಸ್ ಕೊಡು (ಮ): ಬೆ.10.20ಕ್ಕೆ, ವಿರುಮನ್ (ತ): ಮ.1.05ಕ್ಕೆ, ಸಂ.4.05ಕ್ಕೆ, ಲಾಲ್‌ಸಿಂಗ್ ಚಡ್ಡಾ (ಹಿಂ): ಸಂ.6.55ಕ್ಕೆ, ಥಲ್ಲುಮಾಲ (ಮ): ರಾ.10ಕ್ಕೆ.
ಸ್ಕ್ರೀನ್ 4	ಗಾಳಿಪಟ–2 (ಕ): ಬೆ.10.10ಕ್ಕೆ, ಮ.1.05ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ಮಾಚೆರ್ಲಾ ನಿಯೋಜಕ ವರ್ಗಂ (ತೆ): ರಾ.9.55ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಗಾಳಿಪಟ–2 (ಕ): ಬೆ.10.05ಕ್ಕೆ, ವಿಕ್ರಾಂತ್‌ರೋಣ (3ಡಿ)(ಕ): ಮ.1.10ಕ್ಕೆ, ರಾ.7.05ಕ್ಕೆ, ರವಿ ಬೋಪಣ್ಣ (ಕ): ಸಂ.4.15ಕ್ಕೆ, ಮಾಚೆರ್ಲಾ ನಿಯೋಜಕ ವರ್ಗಂ (ತೆ): ರಾ.10.10ಕ್ಕೆ.
ಸ್ಕ್ರೀನ್ 2	ಲಾಲ್‌ಸಿಂಗ್ ಚಡ್ಡಾ (ಹಿಂ): ಬೆ.9.50ಕ್ಕೆ, ರಕ್ಷಾಬಂಧನ್ (ಹಿಂ): ಮ.1.15ಕ್ಕೆ, ಗಾಳಿಪಟ–2 (ಕ): ಮ.3.40ಕ್ಕೆ, ಸಂ.6.45ಕ್ಕೆ, ವಿರುಮನ್ (ತ): ರಾ.10ಕ್ಕೆ.
ಸ್ಕ್ರೀನ್ 3	ರಕ್ಷಾಬಂಧನ್ (ಹಿಂ): ಬೆ.9.55ಕ್ಕೆ, ಲಾಲ್‌ಸಿಂಗ್ ಚಡ್ಡಾ (ಹಿಂ): ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 4	ರವಿ ಬೋಪಣ್ಣ (ಕ): ಬೆ.10.50ಕ್ಕೆ, ವಿರುಮನ್ (ತ): ಮ.1.40ಕ್ಕೆ, ರಕ್ಷಾಬಂಧನ್ (ಹಿಂ): ಸಂ.4.45ಕ್ಕೆ, ರಾ.10.30ಕ್ಕೆ, ಸೀತಾರಾಮಂ (ತೆ): ರಾ.7.10ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ರಕ್ಷಾಬಂಧನ್ (ಹಿಂ): ಬೆ.10.50ಕ್ಕೆ, ಸೀತಾರಾಮಂ (ತೆ): ಮ.1ಕ್ಕೆ, ರವಿ ಬೋಪಣ್ಣ (ಕ): ಸಂ.4ಕ್ಕೆ, ಥಲ್ಲುಮಾಲ (ಮ): ಸಂ.6.35ಕ್ಕೆ, ವಿರುಮನ್ (ತ): ರಾ.9.25ಕ್ಕೆ.
ಸ್ಕ್ರೀನ್ 2	ಲಾಲ್‌ಸಿಂಗ್ ಚಡ್ಡಾ (ಹಿಂ): ಬೆ.10.30ಕ್ಕೆ, ಸಂ.4ಕ್ಕೆ, ರಾ.9.15ಕ್ಕೆ, ರಕ್ಷಾಬಂಧನ್ (ಹಿಂ): ಸಂ.1.45ಕ್ಕೆ, ರಾ.7.05ಕ್ಕೆ.
ಸ್ಕ್ರೀನ್ 3	ಗಾಳಿಪಟ–2 (ಕ): ಬೆ.10.15ಕ್ಕೆ, ಮ.1.05ಕ್ಕೆ, ಮ.3.55ಕ್ಕೆ, ಸಂ.6.45ಕ್ಕೆ, ವಿಕ್ರಾಂತ್ ರೋಣ (3ಡಿ)(ಕ): ರಾ.9.35ಕ್ಕೆ.
ಸ್ಕ್ರೀನ್ 4	ವಿಕ್ರಾಂತ್ ರೋಣ (ಕ): ಬೆ.10.30ಕ್ಕೆ, ರವಿಬೋಪಣ್ಣ (ಕ): ಮ.1.25ಕ್ಕೆ, ವಿರುಮನ್ (ತ): ಸಂ.4ಕ್ಕೆ, ಸಂ.6.50ಕ್ಕೆ, ಗಾಳಿಪಟ–2 (ಕ): ರಾ.9.40ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಗಾಳಿಪಟ–2 (ಕ): ಬೆ.9.10ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ, ರವಿ ಬೋಪಣ್ಣ (ಕ): ಬೆ.9.50ಕ್ಕೆ, ಮ.12.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ವಿಕ್ರಾಂತ್ ರೋಣ (3ಡಿ)(ಕ): ಮ.3.50ಕ್ಕೆ, ರಾ.10.10ಕ್ಕೆ, ವಿರುಮನ್ (ತ): ಬೆ.9.30ಕ್ಕೆ, ಮ.12.40ಕ್ಕೆ, ರಾ.7ಕ್ಕೆ, ಥಲ್ಲುಮಾಲ (ಮ): ಸಂ.4.10ಕ್ಕೆ, ಮಾರ್ಚೆಲಾ ನಿಯೋಜಕ ವರ್ಗಂ (ತೆ): ರಾ.9.40ಕ್ಕೆ, ಕಾರ್ತಿಕೇಯ–2(ತೆ): ಮ.12.20ಕ್ಕೆ, ರಕ್ಷಾಬಂಧನ್ (ಹಿಂ): ಬೆ.10.25ಕ್ಕೆ, ಮ.1.40ಕ್ಕೆ, ಸಂ.4.20ಕ್ಕೆ, ರಾ.7.20ಕ್ಕೆ, ರಾ.9.50ಕ್ಕೆ, ಲಾಲ್‌ಸಿಂಗ್ ಚಡ್ಡಾ (ಹಿಂ): ಬೆ.8.50ಕ್ಕೆ, ಮ.12.15ಕ್ಕೆ, ಮ.12.55ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ವಿರುಮನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ವಿಕ್ರಾಂತ್ ರೋಣ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಲಾಲ್‌ಸಿಂಗ್ ಚೆಡ್ಡಾ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ರವಿ ಬೋಪಣ್ಣ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಗಾಳಿಪಟ–2 (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ರಕ್ಷಾಬಂಧನ್ (ಹಿಂ)	4 ಪ್ರದರ್ಶನಗಳು
ಸಂಗಂ	
ರವಿ ಬೋಪಣ್ಣ (ಕ)	4 ಪ್ರದರ್ಶನಗಳು
ಲಿಡೋ	
ಲಾಲ್‌ಸಿಂಗ್ ಚೆಡ್ಡಾ (ಹಿಂ)	4 ಪ್ರದರ್ಶನಗಳು
ತಿಬ್ಬಾದೇವಿ	
ಲಾಲ್‌ಸಿಂಗ್ ಚೆಡ್ಡಾ (ಹಿಂ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಓ ಮೈ ಲವ್ (ಕ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು
ಪ್ರಭಾ	
ಗಾಳಿಪಟ–2 (ಕ)	4 ಪ್ರದರ್ಶನಗಳು

ನಂ.ಗೂಡನ್ನು ಸಮಗ್ರ ಅಭಿವೃದ್ಧಿಪಡಿಸಿದ ಆತ್ಮತೃಪ್ತಿ ಇದೆ: ಶಾಸಕ ಹರ್ಷವರ್ಧನ್



ನಂಜನಗೂಡು, ಆ.16– 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದಲ್ಲಿ ಭಾಗಿಯಾಗುವ ಸುವರ್ಣಾವಕಾಶ ಒದಗಿಸಿಕೊಟ್ಟ ಕ್ಷೇತ್ರದ ಮತದಾರರ ಆಶಯಕ್ಕೆ ಅನುಗುಣವಾಗಿ ನಂಜನಗೂಡನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಿರುವ ಆತ್ಮತೃಪ್ತಿ ನನಗಿದೆ ಎಂದು ಶಾಸಕ ಬಿ.ಹರ್ಷವರ್ಧನ್ ಭಾವುಕರಾದರು. ನಗರದ ತಾಲೂಕು ಕ್ರೀಡಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಆಯೋಜಿಸಿದ್ದ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದಲ್ಲಿ ಮಾತನಾಡಿದ ಅವರು, ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ಸಂದಿರುವ ಈ ಸಂದರ್ಭ ನಾನು ಈ ಕ್ಷೇತ್ರದ ಶಾಸಕನಾಗಿರುವುದೇ ಹೆಮ್ಮೆಯ ಸಂಗತಿ. ಇಂತಹ ಅವಕಾಶ ಕಲ್ಪಿಸಿಕೊಟ್ಟ ಕ್ಷೇತ್ರದ ಮತದಾರರಿಗೆ ನಾನು ಅಭಾರಿ. ಮತದಾರರ ನಿರೀಕ್ಷೆಯಂತೆ ನುಗು ಏತ ನೀರಾವರಿ, ಶ್ರೀಕಂಠೇಶ್ವರಸ್ವಾಮಿ ದೇಗುಲದಲ್ಲಿ ಬೆಳ್ಳಿರಥ, ಅತಿಥಿ ಗೃಹ, ಶಾಲೆಗಳ ಸರ್ವಾಂಗೀಣ ಪ್ರಗತಿ ಸೇರಿದಂತೆ ಪ್ರಮುಖ ಯೋಜನೆಗಳನ್ನು ಸಾಕಾರಗೊಳಿಸಿದ್ದೇನೆ. 600 ಕೋಟಿ ರೂ. ಅನುದಾನ ತಂದಿರುವ ತೃಪ್ತಿಯಿದೆ ಎಂದರು.

ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಅಧ್ಯಕ್ಷ ಹಾಗೂ ತಹಸೀಲ್ದಾರ್ ಎಂ.ಶಿವಮೂರ್ತಿ ಮಾತನಾಡಿ, ಈ 75 ವರ್ಷದಲ್ಲಿ ದೇಶ ಸಾಕಷ್ಟು ಬದಲಾವಣೆ ಕಂಡಿದೆ. ದೂರಸಂಪರ್ಕ ಕ್ಷೇತ್ರ, ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಮಹತ್ತರ ಕ್ರಾಂತಿಯಿಂದಾಗಿ ಜನರ ಜೀವನ ಸಾಕಷ್ಟು ಸುಧಾರಿಸಿದೆ. ಕೋವಿಡ್ ಪರಿಸ್ಥಿತಿಯನ್ನು ನಿಭಾಯಿಸಿದ ಪರಿ ವಿಶ್ವಕ್ಕೆ ಮಾದರಿಯಾಗಿದೆ. 200 ಕೋಟಿ ಕೋವಿಡ್ ಲಸಿಕೆ ನೀಡಿದ ಕೀರ್ತಿ ಭಾರತಕ್ಕೆ ಸಲ್ಲುತ್ತದೆ ಎಂದು ಬಣ್ಣಿಸಿದರು.

ಆಕರ್ಷಕ ಪಥ ಸಂಚಲನ: ಧ್ವಜಾರೋಹಣ ಅಂಗವಾಗಿ ಪೊಲೀಸರು ಹಾಗೂ ಶಾಲಾ ವಿದ್ಯಾರ್ಥಿಗಳ ಪಥ ಸಂಚಲನ ಆಕರ್ಷಣೀಯವಾಗಿತ್ತು. ತಹಸೀಲ್ದಾರ್ ಎಂ.ಶಿವಮೂರ್ತಿ ಧ್ವಜಾರೋಹಣ ನೆರವೇರಿಸಿದರು. ನಂತರ ತೆರೆದ ವಾಹನದಲ್ಲಿ ಶಾಸಕ ಬಿ.ಹರ್ಷವರ್ಧನ್, ತಹಸೀಲ್ದಾರ್ ಶಿವಮೂರ್ತಿ ವಿದ್ಯಾರ್ಥಿಗಳ ಬಳಿಗೆ ತೆರಳಿ ಗೌರವ ವಂದನೆ ಸ್ವೀಕರಿಸಿದರು. ನಾನಾ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರನ್ನು ತಾಲೂಕು ಆಡಳಿತದಿಂದ ಗೌರವಿಸಲಾಯಿತು. ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಸ್.ಮಹದೇವಯ್ಯ, ತಾಪಂ ಇಓ ಶ್ರೀನಿವಾಸ್, ಡಿವೈಎಸ್ಪಿ ಗೋವಿಂದರಾಜು, ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಶ್ರೀಕಂಠಯ್ಯ, ನಗರಸಭಾಧ್ಯಕ್ಷ ಮಹದೇವಸ್ವಾಮಿ, ಉಪಾಧ್ಯಕ್ಷೆ ನಾಗಮಣಿ, ಸ್ಥಾಯಿ ಸಮಿತಿ ಅಧ್ಯಕ್ಷೆ ಮೀನಾಕ್ಷಿ, ಬಿಇಓ ಸಿ.ಎನ್.ರಾಜು ಸೇರಿದಂತೆ ಹಲವರಿದ್ದರು.

ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ

ಹಾಲು ಉತ್ಪನ್ನ ಘಟಕ, ಗೆಜ್ಜಲಗೆರೆ–571428

2021–22ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯ ನೋಟಿಸು

ಒಕ್ಕೂಟದ 2021–22ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ: 26.08.2022ನೇ ಶುಕ್ರವಾರ ಬೆಳಗ್ಗೆ 10.25 ಗಂಟೆಗೆ "ಒಕ್ಕೂಟದ ಆಡಳಿತ ಕಛೇರಿ ಆವರಣ"ದಲ್ಲಿ ಒಕ್ಕೂಟದ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಬಿ.ಆರ್.ರಾಮಚಂದ್ರ ರವರ ಘನ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿರುತ್ತದೆ. ಸದಸ್ಯ ಸಂಘಗಳ ಪ್ರತಿನಿಧಿಗಳು ವಾರ್ಷಿಕ ಸಾಮಾನ್ಯ ಸಭೆಗೆ ಸಕಾಲದಲ್ಲಿ ಹಾಜರಾಗಬೇಕಾಗಿ ಕೋರಿದೆ. ಪೂರ್ಣ ವಿವರಗಳನ್ನೊಳಗೊಂಡ ಸಾಮಾನ್ಯ ಸಭಾ ನೋಟಿಸನ್ನು ಎಲ್ಲಾ ಸದಸ್ಯ ಸಂಘಗಳಿಗೂ ಅಂಚೆ ಮೂಲಕ ಈಗಾಗಲೇ ಕಳುಹಿಸಲಾಗಿದೆ. ಹಾಲು ಉತ್ಪಾದಕರ ಸಹಕಾರ ಸಂಘದ ಪ್ರತಿನಿಧಿಗಳು ಕಡ್ಡಾಯವಾಗಿ ಸಂಘದ ನಿರ್ಣಯದ ಪ್ರತಿಯೊಂದಿಗೆ ಹಾಜರಾಗಲು ಈ ಮೂಲಕ ಕೋರಲಾಗಿದೆ.

ಸ್ಥಳ : ಗೆಜ್ಜಲಗೆರೆ
ದಿನಾಂಕ: 16.08.2022

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ಕಾಣೆಯಾಗಿದ್ದಾರೆ



ಇವರು ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕು ಕುರಹಟ್ಟಿ ಗ್ರಾಮದಿಂದ ದಿ. 11.08.2022 ರಂದು ಬೆಳಿಗ್ಗೆ 9.00 ಗಂಟೆಯಿಂದ ಮನೆಯಿಂದ ಹೋದವರು ಕಾಣೆಯಾಗಿದ್ದಾರೆ. ಇವರನ್ನು ಕಂಡವರು ಸಂಬಂಧಪಟ್ಟ ಪೋಲಿಸ್ ಠಾಣೆ ಅಥವಾ ಸಂಬಂಧಿಕರನ್ನು ಸಂಪರ್ಕಿಸಿ

ಕಾಳೇಗೌಡ (ಈರೇಗೌಡ)
ವಯಸ್ಸು – 84

9972168547

ಪುರಸಭಾ ಕಾರ್ಯಾಲಯ, ಕೃಷ್ಣರಾಜನಗರ, ಮೈಸೂರು ಜಿಲ್ಲೆ.

E-Mail ID: itstaff_ulb_krnagar@yahoo.in, Phone (O): 08223-262242, Fax: 08223-262241

ಸಂಖ್ಯೆ:ಪುಸಕೃ.ಮುನ.ಹಂತ–04.2022–23 ದಿನಾಂಕ: 16–08–2022

ಪುರಸಭೆ, ಕೃಷ್ಣರಾಜನಗರ ವ್ಯಾಪ್ತಿಯಲ್ಲಿ ಬರುವ ಪ.ಜಾತಿ / ಪ.ಪಂಗಡ ಇತರೆ ಹಿಂದುಳಿದ ವರ್ಗದವರು ಮತ್ತು ಅಂಗವಿಕಲರುಗಳಿಗೆ ತಿಳಿಯಪಡಿಸುವುದೇನೆಂದರೆ, ಮುಖ್ಯಮಂತ್ರಿಗಳ ಅಮೃತ್ ನಗರೋತ್ಥಾನ (ಮುನ್ಸಿಪಾಲಿಟಿ) ಯೋಜನೆ ಹಂತ–4 ರಡಿ ಕ್ರಿಯಾ ಯೋಜನೆಗೆ ಮಾನ್ಯ ಸರ್ಕಾರದ ಕಾರ್ಯದರ್ಶಿ ಬೆಂಗಳೂರು ರವರ ನ.ಅ.ಸಂ.ನಅಇ–48–ಐಎಸ್ ಟಿ 2022 ಬೆಂಗಳೂರು ದಿ: 05.05.2022 ರಂದು ಅನುಮೋದನೆಯಾಗಿದ್ದು, ಸದರಿ ಕ್ರಿಯಾಯೋಜನೆಯಡಿ ಶೇ.24.10, ಶೇ.7.25 & ಶೇ.5 ರಡಿಯಲ್ಲಿ ಕಾಯ್ದಿರಿಸಿದ ಅನುದಾನದಲ್ಲಿ ಕೈಗೊಳ್ಳಲಿರುವ ಕೆಳಕಂಡ ಕಾರ್ಯಕ್ರಮಗಳಿಗೆ ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು ದಿನಾಂಕ: 31–08–2022 ರ ಸಂಜೆ 5.00 ಗಂಟೆಯೊಳಗೆ ಈ ಕಛೇರಿಗೆ ಕೆಳಗಿನ ಕಾರ್ಯಕ್ರಮಗಳಲ್ಲಿ ಸೌಲಭ್ಯ ಪಡೆಯಲು ಅಗತ್ಯ ದಾಖಲೆಗಳ ಸಮೇತ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಅವಧಿ ಮೀರಿ ಹಾಗೂ ಅಗತ್ಯ ದಾಖಲೆಗಳು ಇಲ್ಲದೆ ಬರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಕ್ರಮ ಸಂಖ್ಯೆ	ಕಾರ್ಯಕ್ರಮಗಳ ವಿವರ	ಪುರಸಭಾ ಕಛೇರಿಯ ಪೌರಕಾರ್ಮಿಕ ಹಾಗೂ ಕುಟುಂಬ ಸದಸ್ಯರಿಗೆ	ಕಾಯ್ದಿರಿಸಿದ ಅನುದಾನ ಪ.ಜಾ ಬೇಕಾಗಿರುವ ಫಲಾನುಭವಿ ಮೊತ್ತ	ಕಾಯ್ದಿರಿಸಿದ ಅನುದಾನ ಪ.ಪಂ ಬೇಕಾಗಿರುವ ಫಲಾನುಭವಿ ಮೊತ್ತ	ಶೇ. 7.25 ರಡಿ ಬಡಜನರ ಕಲ್ಯಾಣ ಕಾರ್ಯಕ್ರಮ ಮೊತ್ತ	ಶೇ. 5 ರಡಿ ಅಂಗವಿಕಲರ ಕಲ್ಯಾಣ ಕಾರ್ಯಕ್ರಮ ಮೊತ್ತ	ಲಗತ್ತಿಸಬೇಕಾದ ಅವಶ್ಯ ದಾಖಲೆಗಳು
1	7 ಪೌರಕಾರ್ಮಿಕರ ಗುಂಪು ಮನೆಗೆ ವಂತಿಗೆ ಅನುದಾನ (ಪಿ.ಕೆ.ಜಿ.ಬಿ.ಯೋಜನೆಯಡಿ ನಿರ್ಮಾಣ ಮಾಡುತ್ತಿರುವ ಮನೆಗಳಿಗೆ)	15.00 ಲಕ್ಷಗಳು					
2	ಪೌರಕಾರ್ಮಿಕರ ಮಕ್ಕಳಿಗೆ ಟ್ಯಾಬ್ ನೀಡುವುದು (5 ರಿಂದ 10ನೇ ತರಗತಿವರೆಗೆ ಓದುತ್ತಿರುವ ಮಕ್ಕಳಿಗೆ)	5.00 ಲಕ್ಷಗಳು					
3	ವೈಯಕ್ತಿಕ ಶೌಚಾಲಯ ನಿರ್ಮಾಣಕ್ಕೆ ಸಹಾಯಧನ ನೀಡುವುದು	2.00 ಲಕ್ಷಗಳು	3.00 ಲಕ್ಷಗಳು	0.90 ಲಕ್ಷಗಳು	2.0 ಲಕ್ಷಗಳು		
4	ಕೌಶಲ್ಯಾಭಿವೃದ್ಧಿ ತರಬೇತಿ		7.00 ಲಕ್ಷಗಳು	2.00 ಲಕ್ಷಗಳು	10.50 ಲಕ್ಷಗಳು	2.50 ಲಕ್ಷಗಳು	
5	ಪಕ್ಕಾ ಮನೆಗಳಿಗೆ / ಗುಂಪು ಮನೆಗಳಿಗೆ / ಕೊಳಚೆ ಅಭಿವೃದ್ಧಿ ಮನೆಗಳಿಗೆ ಸಹಾಯಧನ ನೀಡಲು (ಪಿ.ಎಂ.ಎವೈ ಡಾ. ಬಿ.ಆರ್.ಅಂಬೇಡ್ಕರ್ ಮತ್ತು ವಾಜಪೇಯಿ ನಗರ ವಸತಿ ಯೋಜನೆಯಡಿ ಮನೆ ನಿರ್ಮಾಣ ಮಾಡುತ್ತಿರುವ ಫಲಾನುಭವಿಗಳಿಗೆ)		31.65 ಲಕ್ಷಗಳು	14.00 ಲಕ್ಷಗಳು	7.15 ಲಕ್ಷಗಳು	2.50 ಲಕ್ಷಗಳು	
6	ವಿಕಲಚೇತನರ ಆರೋಗ್ಯ ತಪಾಸಣೆ					2.00 ಲಕ್ಷಗಳು	
7	ವಿಕಲಚೇತನರ ಕೃತಕ ಅಂಗ ಜೋಡಣೆಗಾಗಿ ಸಹಾಯಧನ					4.25 ಲಕ್ಷಗಳು	
8	ಮೂರು ಚಕ್ರದ ಸ್ಕೂಟರ್ ವಿತರಣೆ					10.00 ಲಕ್ಷಗಳು	
9	ಎಂ.ಬಿ.ಬಿ.ಎಸ್/ಬಿ.ಇ ಓದುತ್ತಿರುವ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ / ಲ್ಯಾಪ್‌ಟಾಪ್ ಖರೀದಿಗೆ ಸಹಾಯ ಧನ		5.00 ಲಕ್ಷಗಳು	2.00 ಲಕ್ಷಗಳು			

ಸಹಿ/–
ಮುಖ್ಯಾಧಿಕಾರಿ, ಪುರಸಭೆ, ಕೆ.ಆರ್.ನಗರ

ಸಹಿ/–
ಅಧ್ಯಕ್ಷರು, ಪುರಸಭೆ, ಕೆ.ಆರ್.ನಗರ

RBI License No.UBD KA 844P
ಸ್ಥಾಪನೆ : 1916

ಫೋ ನಂ.: 0821–2442866
ಫ್ಯಾಕ್ಸ್: 0821–24354320

ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ನಿ.,

ಶಾಖೆಗಳು: 1) ಉದಯಗಿರಿ 2) ರಾಜೀವ್‌ನಗರ 3) ಹುಣಸೂರು

ಮುಖ್ಯ ಶಾಖೆ: ನ್ಯೂ ಸಯ್ಯಾಜಿ ರಾವ್ ರಸ್ತೆ, ಮೈಸೂರು–570021

ಡಿಮ್ಯಾಂಡ್ ನೋಟೀಸ್

ವಿಷಯ: ಸೆಕ್ಯುರಿಟೈಸೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಸೆಕ್ಯೂರಿಟಿ ಇಂಟರೆಸ್ಟ್ ಕಾಯ್ದೆ 2002 ಕಲಂ 13(2) ರ ಪ್ರಕಾರ

ಅವರ ಕೋರಿಕೆಯಂತೆ ಬ್ಯಾಂಕು ಈ ಕೆಳಕಂಡ ವ್ಯಕ್ತಿಗಳಿಗೆ / ಫರ್ಮ್‌ಗೆ ಆಧಾರಿತ ಸ್ವತ್ತುಗಳಿಗೆ ಪ್ರತಿಯಾಗಿ ನಮ್ಮ ಶಾಖೆಯಿಂದ ಉದ್ದರಿ ಸೌಲಭ್ಯಗಳನ್ನು ಒದಗಿಸಿರುತ್ತದೆ. ಅವರು ಭದ್ರತಾ ಒಪ್ಪಂದಗಳು / ದಾಸ್ತಾವೇಜುಗಳ ಮೂಲಕ ಮತ್ತು ಹಕ್ಕು ಪತ್ರಗಳ ಠೇವಣಿಯ ಮೂಲಕ ಅಡಮಾನ ಒದಗಿಸಿ ಯಾವ ಆಸ್ತಿಯ ಮೇಲೆ ಭದ್ರತೆ ನೀಡಿದ್ದರೋ ಅದರ ವಿವರಗಳನ್ನೂ ಸಹ ಈ ಕೆಳಗೆ ತಿಳಿಸಲಾಗಿದೆ. ಹಣಕಾಸಿನ ನೆರವು ಸೌಲಭ್ಯಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಸಮರ್ಪಕವಾಗಿಲ್ಲದ್ದರಿಂದ ಆರ್.ಬಿ.ಐ. ನಿರ್ದೇಶನ ಸೂತ್ರ / ಮಾರ್ಗದರ್ಶಿ ಸೂತ್ರಗಳ ಪ್ರಕಾರ ಈ ಸಾಲಗಳನ್ನು ನಿರ್ವಹಣಾ ರಹಿತ ಸ್ವತ್ತುಗಳು (ಎನ್.ಪಿ.ಎ) ಎಂದು ವರ್ಗೀಕರಿಸಲಾಗಿದೆ. ಸಾಲದ ಅಸಲಿನ ಮೊತ್ತ ಹಾಗೂ ಅದರ ಮೇಲಿನ ಬಡ್ಡಿಯನ್ನು ಮರುಪಾವತಿ ಮಾಡಲು ಸಾಲಗಾರರು ವಿಫಲರಾಗಿರುವುದರಿಂದ ಮತ್ತು ಹೊಣೆಗಾರಿಕೆಯನ್ನು ನಿರ್ವಹಿಸಿ ಕೆಳಗೆ ಸೂಚಿಸಿರುವ ಮೊತ್ತವನ್ನು ಮರುಪಾವತಿಸುವಂತೆ ಅವರಿಗೆ ಆರ್‌ಪಿಎಡಿ ಮೂಲಕ ಕಳಿಸಲಾಗಿದ್ದ "ಡಿಮ್ಯಾಂಡ್ ನೋಟೀಸ್"ನ್ನು ಸ್ವೀಕರಿಸದೇ ಇರುವುದರಿಂದ / ವಾಪಸ್ಸು ಕಳುಹಿಸಿರುವುದರಿಂದ ಈ ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿದೆ.

ಸಾಲಗಾರರ ಹೆಸರು ಮತ್ತು ವಿಳಾಸ:
ಶ್ರೀಮತಿ ಹೇಮಾವತಿ ಎಂ.ಬಿ. ಕೋಂ ನಾಗರಾಜ್ ಹೆಚ್.ಆರ್., ನಂ. 3481, 4ನೇ ಮುಖ್ಯರಸ್ತೆ, ತಿಲಕ್‌ನಗರ, ಮಂಡಿ ಮೊಹಲ್ಲಾ, ಮೈಸೂರು.
ಅಡಮಾನ ಮಾಡಿರುವ ಆಸ್ತಿಯ ವಿವರ: ಕಾರ್ಪೊರೇಶನ್ ಮನೆ ಸಂಖ್ಯೆ 382, 2ನೇ ಹಂತ, ಬೂಗಾದಿ ಎಕ್ಸ್‌ಟೆನ್ಶನ್, ಚಾಮರಾಜ ಮೊಹಲ್ಲಾ, ಮೈಸೂರು. ವಿಸ್ತೀರ್ಣ: ಪೂರ್ವ–ಪಶ್ಚಿಮ: 9 ಮೀಟರ್‌ಗಳು ಮತ್ತು ಉತ್ತರ–ದಕ್ಷಿಣ: 6 ಮೀಟರ್‌ಗಳು. ಚಕ್ಕುಬಂದಿ:– ಪೂರ್ವಕ್ಕೆ: 379ನೇ ನಂಬರಿನ ಸ್ವತ್ತು, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: 383ನೇ ನಂಬರಿನ ಸ್ವತ್ತು, ದಕ್ಷಿಣಕ್ಕೆ: 381ನೇ ನಂಬರಿನ ಸ್ವತ್ತು.
ಖಾತೆ ನಂ.: ಹೆಚ್ ಪಿ 7350
ಬರಬೇಕಾದ ಬಾಕಿ: ರೂ.2,74,879/– ದಿನಾಂಕ : 25.07.2022 ರಂದು ಇದ್ದಂತೆ ಅಸಲು ಬಡ್ಡಿ ಇತರೆ ಖರ್ಚುಗಳು.
ಎನ್.ಪಿ.ಎ. ಆದ ದಿನಾಂಕ: 25.07.2022 ಡಿಮ್ಯಾಂಡ್ ನೋಟೀಸಿನ ದಿನಾಂಕ: 28.07.2022

ಸಾಲಗಾರರ ಹೆಸರು ಮತ್ತು ವಿಳಾಸ:
ಶ್ರೀ ಮೊಹಮ್ಮದ್ ಯಾಕೂಬ್ ಬಿನ್ ಮೊಹಮ್ಮದ್ ಯೂಸುಫ್, ನಂ. 2754, ಸುಲ್ತಾನ್ ಪಾರ್ಕ್, ಮಂಡಿ ಮೊಹಲ್ಲಾ, ಮೈಸೂರು.
ಅಡಮಾನ ಮಾಡಿರುವ ಆಸ್ತಿಯ ವಿವರ: ಕಾರ್ಪೊರೇಶನ್ ಮನೆ ಸಂಖ್ಯೆ 2754, ರಸೂಲ್‌ಖಾನ್ ರಸ್ತೆ, ಮಂಡಿ ಮೊಹಲ್ಲಾ, ಮೈಸೂರು ನಗರ. ವಿಸ್ತೀರ್ಣ: ಪೂರ್ವ–ಪಶ್ಚಿಮ: 47 ಅಡಿಗಳು ಮತ್ತು ಉತ್ತರ–ದಕ್ಷಿಣ: 15½ ಅಡಿಗಳು. ಚಕ್ಕುಬಂದಿ:– ಪೂರ್ವಕ್ಕೆ: ಎಸ್.ಹೆಚ್. ಮೊಹಮ್ಮದ್ ವಾಝೀರ್‌ರವರ ಸ್ವತ್ತು, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಮೊಹಮ್ಮದ್ ಇಬ್ರಾಹಿಂ ಅಲಿಯಾಸ್ ಅಮೀರ್ ಜಾನ್‌ರವರ ಸ್ವತ್ತು, ದಕ್ಷಿಣಕ್ಕೆ: ಅಬ್ದುಲ್ ರೆಹಮಾನ್ ಅಲಿಯಾಸ್ ಚೋಟೆ ಸಾಬ್‌ರವರ ಸ್ವತ್ತು.
ಖಾತೆ ನಂ.: ಹೆಚ್‌ಪಿ–8436
ಬರಬೇಕಾದ ಬಾಕಿ: ರೂ.2,95,056/– ದಿನಾಂಕ : 25.07.2022 ರಂದು ಇದ್ದಂತೆ ಅಸಲು ಬಡ್ಡಿ ಇತರೆ ಖರ್ಚುಗಳು.
ಎನ್.ಪಿ.ಎ. ಆದ ದಿನಾಂಕ: 25.07.2022 ಡಿಮ್ಯಾಂಡ್ ನೋಟೀಸಿನ ದಿನಾಂಕ: 28.07.2022

ಸಾಲಗಾರರ ಹೆಸರು ಮತ್ತು ವಿಳಾಸ:
ಶ್ರೀಮತಿ ನಸೀಮಾ ಖಾತೂನ್ ಬಿನ್ ಕೆ. ನಸ್ರುಲ್ಲಾ ಖಾನ್, ನಂ. 2355/1 ಎಂ–5, ಸುಲ್ತಾನ್ ಪಾರ್ಕ್ ರಸ್ತೆ, ಮಂಡಿ ಮೊಹಲ್ಲಾ, ಮೈಸೂರು ನಗರ.
ಅಡಮಾನ ಮಾಡಿರುವ ಆಸ್ತಿಯ ವಿವರ: ಕಾರ್ಪೊರೇಶನ್ ಮನೆ ಸಂಖ್ಯೆ 2355/1 ಎಂ–5, ಸುಲ್ತಾನ್ ಪಾರ್ಕ್ ರಸ್ತೆ, ಮಂಡಿ ಮೊಹಲ್ಲಾ, ಮೈಸೂರು ನಗರ. ವಿಸ್ತೀರ್ಣ: ಪೂರ್ವ–ಪಶ್ಚಿಮ: 10 ಅಡಿಗಳು ಮತ್ತು ಉತ್ತರ–ದಕ್ಷಿಣ: 22.3 ಅಡಿಗಳು. ಚಕ್ಕುಬಂದಿ:– ಪೂರ್ವಕ್ಕೆ: ಅಬ್ದುಲ್ ರೆಹಮಾನ್‌ರವರ ಮನೆ, ಪಶ್ಚಿಮಕ್ಕೆ: ಇಸ್ಮಾಯಿಲ್ ಜಾವಿದ್‌ರವರ ಸ್ವತ್ತು, ಉತ್ತರಕ್ಕೆ: ಅಬ್ದುಲ್ ರೆಹಮಾನ್‌ರವರ ಸ್ವತ್ತು, ದಕ್ಷಿಣಕ್ಕೆ: ಸುಲ್ತಾನ್ ಪಾರ್ಕ್ ರಸ್ತೆ.
ಖಾತೆ ನಂ.: ಹೆಚ್ ಪಿ 6246
ಬರಬೇಕಾದ ಬಾಕಿ: ರೂ.6,33,588/– ದಿನಾಂಕ : 25.07.2022 ರಂದು ಇದ್ದಂತೆ ಅಸಲು ಬಡ್ಡಿ ಇತರೆ ಖರ್ಚುಗಳು.
ಎನ್.ಪಿ.ಎ. ಆದ ದಿನಾಂಕ: 25.07.2022 ಡಿಮ್ಯಾಂಡ್ ನೋಟೀಸಿನ ದಿನಾಂಕ: 28.07.2022

ಸಾಲಗಾರರ ಹೆಸರು ಮತ್ತು ವಿಳಾಸ:
ಶ್ರೀಮತಿ ಹಸೀನಾ ತಾಜ್ ಕೋಂ ಸೈಯದ್ ನಾಸೀರ್, ನಂ. 247, 1ನೇ ಹಂತ, 2ನೇ ಮುಖ್ಯರಸ್ತೆ, ನಿವಾಸ ಮಸೀದಿ ಹತ್ತಿರ, ರಾಜೀವನಗರ, ಮೈಸೂರು.
ಅಡಮಾನ ಮಾಡಿರುವ ಆಸ್ತಿಯ ವಿವರ: ಎಲ್.ಐ.ಜಿ.–II ಹೌಸ್, ಮನೆ ನಂ. 1118, ಹುಡ್ಕೊ MUDA, 4ನೇ ಸ್ಟೇಜ್, ಕ್ಯಾತಮಾರನಹಳ್ಳಿ ಎಕ್ಸ್‌ಟೆನ್ಷನ್, ನಜರಬಾದ್ ಮೊಹಲ್ಲಾ, ಮೈಸೂರು ನಗರ. ವಿಸ್ತೀರ್ಣ: ಪೂರ್ವ–ಪಶ್ಚಿಮ: 7.65 ಮೀಟರ್‌ಗಳು ಮತ್ತು ಉತ್ತರ–ದಕ್ಷಿಣ: 6.10 ಮೀಟರ್‌ಗಳು. ಚಕ್ಕುಬಂದಿ:– ಪೂರ್ವಕ್ಕೆ: ಗಲ್ಲಿ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಮನೆ ನಂ. ಎಲ್.ಐ.ಜಿ.–1119, ದಕ್ಷಿಣಕ್ಕೆ: ಮನೆ ನಂ. ಎಲ್.ಐ.ಜಿ.–1117.
ಖಾತೆ ನಂ.: ಹೆಚ್‌ಎನ್–274
ಬರಬೇಕಾದ ಬಾಕಿ: ರೂ.15,02,083/– ದಿನಾಂಕ : 25.07.2022 ರಂದು ಇದ್ದಂತೆ ಅಸಲು ಬಡ್ಡಿ ಇತರೆ ಖರ್ಚುಗಳು.
ಎನ್.ಪಿ.ಎ. ಆದ ದಿನಾಂಕ: 25.07.2022 ಡಿಮ್ಯಾಂಡ್ ನೋಟೀಸಿನ ದಿನಾಂಕ: 28.07.2022

ಸಾಲಗಾರರ ಹೆಸರು ಮತ್ತು ವಿಳಾಸ:
ಶ್ರೀಮತಿ ಶಮೀಮ್ ಕೋಂ ಮೊಹಬೂಬ್ ಪಾಷ, ನಂ. 15, ಎ.ಜಿ. ಬ್ಲಾಕ್, 1ನೇ ಅಡ್ಡರಸ್ತೆ, ಎನ್.ಆರ್. ಮೊಹಲ್ಲಾ, ಮೈಸೂರು.
ಅಡಮಾನ ಮಾಡಿರುವ ಆಸ್ತಿಯ ವಿವರ: ಮೈಸೂರು ನಗರ, ಎನ್.ಆರ್. ಮೊಹಲ್ಲಾ, ಎ.ಜಿ. ಬ್ಲಾಕ್, 1ನೇ ಅಡ್ಡರಸ್ತೆ, ಕಾರ್ಪೊರೇಶನ್ ಮನೆ ಸಂಖ್ಯೆ ಎಲ್–15, ವಿಸ್ತೀರ್ಣ: ಪೂರ್ವ–ಪಶ್ಚಿಮ: 30 ಅಡಿಗಳು ಮತ್ತು ಉತ್ತರ–ದಕ್ಷಿಣ: 20 ಅಡಿಗಳು. ಚಕ್ಕುಬಂದಿ:– ಪೂರ್ವಕ್ಕೆ: ರಸ್ತೆ ಮತ್ತು ಸೈಯದ್ ನವೀದ್‌ರವರ ಸ್ವತ್ತು, ಪಶ್ಚಿಮಕ್ಕೆ: ಖಾಸಗಿ ಸ್ವತ್ತು, ಉತ್ತರಕ್ಕೆ: ಖುರ್ಷಿದ್ ಉನ್ನಿಸಾರವರ ಸ್ವತ್ತು, ದಕ್ಷಿಣಕ್ಕೆ: ಮುಲ್ಲಾಜಿರವರ ಸ್ವತ್ತು.
ಖಾತೆ ನಂ.: ಹೆಚ್‌ಪಿ–9016
ಬರಬೇಕಾದ ಬಾಕಿ: ರೂ.7,89,804/– ದಿನಾಂಕ : 25.07.2022 ರಂದು ಇದ್ದಂತೆ ಅಸಲು ಬಡ್ಡಿ ಇತರೆ ಖರ್ಚುಗಳು.
ಎನ್.ಪಿ.ಎ. ಆದ ದಿನಾಂಕ: 25.07.2022 ಡಿಮ್ಯಾಂಡ್ ನೋಟೀಸಿನ ದಿನಾಂಕ: 28.07.2022

ಸಾಲಗಾರರ ಹೆಸರು ಮತ್ತು ವಿಳಾಸ:
ಶ್ರೀ ಅಕ್ಬರ್ ಬಿನ್ ಗಫೂರ್, ಮನೆ ನಂ. 3180, ಬೀ ಬೀ ಕೇರಿ, ಮಂಡಿ ಮೊಹಲ್ಲಾ, ಮೈಸೂರು.
ಅಡಮಾನ ಮಾಡಿರುವ ಆಸ್ತಿಯ ವಿವರ: ಮೈಸೂರು ನಗರ, ಮಂಡಿ ಮೊಹಲ್ಲಾ, ಬಿ ಬಿ ಕೇರಿ, ಕಾರ್ಪೊರೇಶನ್ ಮನೆ ಸಂಖ್ಯೆ 3188/1ಬಿ, ಹೊಸ ನಂ. ಎಂ–2/1ಬಿ, ವಿಸ್ತೀರ್ಣ: ಪೂರ್ವ–ಪಶ್ಚಿಮ: 7.5 ಅಡಿಗಳು ಮತ್ತು ಉತ್ತರ–ದಕ್ಷಿಣ: 13 ಅಡಿಗಳು. ಚಕ್ಕುಬಂದಿ:– ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಸೈಯದ್ ಇಮ್ತಿಯಾಜ್ ಮತ್ತು ಸೈಯದ್ ಅಫ್ರೋಜ್‌ರವರ ಸ್ವತ್ತು, ಉತ್ತರಕ್ಕೆ: ಖೈರುನ್ನೀಸರವರ ಸ್ವತ್ತು, ದಕ್ಷಿಣಕ್ಕೆ: ಖಾಸಗಿ ಮನೆ.
ಖಾತೆ ನಂ.: ಹೆಚ್‌ಪಿ–8348
ಬರಬೇಕಾದ ಬಾಕಿ: ರೂ.1,92,169/– ದಿನಾಂಕ : 25.07.2022 ರಂದು ಇದ್ದಂತೆ ಅಸಲು ಬಡ್ಡಿ ಇತರೆ ಖರ್ಚುಗಳು.
ಎನ್.ಪಿ.ಎ. ಆದ ದಿನಾಂಕ: 25.07.2022 ಡಿಮ್ಯಾಂಡ್ ನೋಟೀಸಿನ ದಿನಾಂಕ: 28.07.2022

ಸಾಲಗಾರರ ಹೆಸರು ಮತ್ತು ವಿಳಾಸ:
ಶ್ರೀ ಸೈಯದ್ ಅಜ್ಮತ್ ಪೀರ್ ಬಿನ್ ಸೈಯದ್ ಅಕ್ತರ್, ನಂ. 3349:1, ಹೊಸ ನಂ. ಎಲ್–11, ಲೂರ್ದ್ ನಗರ, ಲಷ್ಕರ್ ಮೊಹಲ್ಲಾ, ಮೈಸೂರು.
ಅಡಮಾನ ಮಾಡಿರುವ ಆಸ್ತಿಯ ವಿವರ: ಮೈಸೂರು ನಗರ, ಲಷ್ಕರ್ ಮೊಹಲ್ಲಾ, ಲೂರ್ದ್ ನಗರ, ಕಾರ್ಪೊರೇಶನ್ ಮನೆ ಸಂಖ್ಯೆ 3349, 3349:1, ಹೊಸ ನಂ. ಎಲ್–11, ವಿಸ್ತೀರ್ಣ: ಪೂರ್ವ–ಪಶ್ಚಿಮ: 27 ಅಡಿಗಳು ಮತ್ತು ಉತ್ತರ–ದಕ್ಷಿಣ: 39 ಅಡಿಗಳು. ಚಕ್ಕುಬಂದಿ:– ಪೂರ್ವಕ್ಕೆ: ಸೆಂಟ್ ಫಿಲೋಮಿನಾರವರ ಪಬ್ಲಿಕ್ ಹಾಲಿಟೆಕ್ನಿಕ್ ಸ್ವತ್ತು, ಪಶ್ಚಿಮಕ್ಕೆ: ಅಕ್ತರ್ ಪಾಷಾರವರ ಮನೆ, ಉತ್ತರಕ್ಕೆ: ಮನೆ ನಂ. 3349 ಮತ್ತು ನಿವೇಶನ, ದಕ್ಷಿಣಕ್ಕೆ: ರಾಜುರವರ ಮನೆ.
ಖಾತೆ ನಂ.: ಹೆಚ್‌ಪಿ–7548
ಬರಬೇಕಾದ ಬಾಕಿ: ರೂ.2,59,219/– ದಿನಾಂಕ : 25.07.2022 ರಂದು ಇದ್ದಂತೆ ಅಸಲು ಬಡ್ಡಿ ಇತರೆ ಖರ್ಚುಗಳು.
ಎನ್.ಪಿ.ಎ. ಆದ ದಿನಾಂಕ: 25.07.2022 ಡಿಮ್ಯಾಂಡ್ ನೋಟೀಸಿನ ದಿನಾಂಕ: 28.07.2022

ಸಾಲಗಾರರ ಹೆಸರು ಮತ್ತು ವಿಳಾಸ:
ಶ್ರೀ ಅಬ್ದುಲ್ ಖಾದರ್ ಬಿನ್ ಮೊಹಿದ್ದೀನ್ ಪಟೇಲ್, ನಂ. 2761, ದರ್ಗಾಹಿ ಮಸೀದಿ ರಸ್ತೆ ಹಿಂಭಾಗ, ಮಂಡಿ ಮೊಹಲ್ಲಾ, ಮೈಸೂರು.
ಅಡಮಾನ ಮಾಡಿರುವ ಆಸ್ತಿಯ ವಿವರ: ಮೈಸೂರು ನಗರ, ದರ್ಗಾಹಿ ಮಸೀದಿ ರಸ್ತೆ, ಕಾರ್ಪೊರೇಶನ್ ಮನೆ ಸಂಖ್ಯೆ 2761, ಹೊಸ ನಂ. ಎಂ–3, ವಿಸ್ತೀರ್ಣ: ಪೂರ್ವ–ಪಶ್ಚಿಮ: 25.6 ಅಡಿಗಳು ಮತ್ತು ಉತ್ತರ–ದಕ್ಷಿಣ: 56.00 ಅಡಿಗಳು. ಚಕ್ಕುಬಂದಿ:– ಪೂರ್ವಕ್ಕೆ: ಮೊಹಮ್ಮದ್ ಹುಸೇನ್‌ರವರ ಸ್ವತ್ತು, ಪಶ್ಚಿಮಕ್ಕೆ: ನಿಸಾರ್ ಅಹಮದ್ ಖಾನ್‌ರವರ ಸ್ವತ್ತು, ಉತ್ತರಕ್ಕೆ: ನಿಸಾರ್ ಅಹಮದ್ ಖಾನ್‌ರವರ ಸ್ವತ್ತು, ದಕ್ಷಿಣಕ್ಕೆ: ರಸ್ತೆ.
ಖಾತೆ ನಂ.: ಹೆಚ್‌ಪಿ–9029
ಬರಬೇಕಾದ ಬಾಕಿ: ರೂ.34,78,279/– ದಿನಾಂಕ : 25.07.2022 ರಂದು ಇದ್ದಂತೆ ಅಸಲು ಬಡ್ಡಿ ಇತರೆ ಖರ್ಚುಗಳು.
ಎನ್.ಪಿ.ಎ. ಆದ ದಿನಾಂಕ: 25.07.2022 ಡಿಮ್ಯಾಂಡ್ ನೋಟೀಸಿನ ದಿನಾಂಕ: 28.07.2022

ಸಾಲಗಾರರ ಹೆಸರು ಮತ್ತು ವಿಳಾಸ:
ಶ್ರೀಮತಿ ನೂರ್ ನಿಶಾ ತಬಸ್ಸುಮ್ ಬಿನ್ ಅಬ್ದುಲ್ ರವೂಫ್, ನಂ. 67, ಗಾಯತ್ರಿಪುರಂ, 2ನೇ ಹಂತ, ನಜರ್‌ಬಾದ್ ಮೊಹಲ್ಲಾ, ಮೈಸೂರು.
ಅಡಮಾನ ಮಾಡಿರುವ ಆಸ್ತಿಯ ವಿವರ: ಮೈಸೂರು ನಗರ, ಲಷ್ಕರ್ ಮೊಹಲ್ಲಾ, ಅಶೋಕ ರಸ್ತೆ, ಪಶ್ಚಿಮ ಅಡ್ಡರಸ್ತೆ–19, ಕಾರ್ಪೊರೇಶನ್ ಮನೆ ಸಂಖ್ಯೆ 2255 ಎಲ್–10, ವಿಸ್ತೀರ್ಣ: ಪೂರ್ವ–ಪಶ್ಚಿಮ: 18.00 ಅಡಿಗಳು ಮತ್ತು ಉತ್ತರ–ದಕ್ಷಿಣ: 34.00 ಅಡಿಗಳು. ಚಕ್ಕುಬಂದಿ:– ಪೂರ್ವಕ್ಕೆ: ಅಹ್ಮದ್ ಯೂಸೇನ್‌ರವರ ಮನೆ, ಪಶ್ಚಿಮಕ್ಕೆ: ಅಹ್ಮದ್ ರಹೀಮ್‌ರವರ ಮನೆ, ಉತ್ತರಕ್ಕೆ: ಆದಾಮ್ ಬೇಗ್‌ರವರ ಮನೆ, ದಕ್ಷಿಣಕ್ಕೆ: ಗಲ್ಲಿ.
ಖಾತೆ ನಂ.: ಹೆಚ್‌ಪಿ–8761
ಬರಬೇಕಾದ ಬಾಕಿ: ರೂ.15,33,898/– ದಿನಾಂಕ : 25.07.2022 ರಂದು ಇದ್ದಂತೆ ಅಸಲು ಬಡ್ಡಿ ಇತರೆ ಖರ್ಚುಗಳು.
ಎನ್.ಪಿ.ಎ. ಆದ ದಿನಾಂಕ: 25.07.2022 ಡಿಮ್ಯಾಂಡ್ ನೋಟೀಸಿನ ದಿನಾಂಕ: 28.07.2022

ಸಾಲಗಾರರ ಹೆಸರು ಮತ್ತು ವಿಳಾಸ:
ಶ್ರೀ ಸೈಯದ್ ಇರ್ಫಾನ್ ಅಹಮದ್ ಬಿನ್ ಲೇಟ್ ಅಮೀರ್ ಪಾಷ, ಮನೆ ನಂ. 3187, ಮಹಮ್ಮದ್ ಸೇಟ್ ಬ್ಲಾಕ್, ಲಷ್ಕರ್ ಮೊಹಲ್ಲಾ, ಮೈಸೂರು.
ಅಡಮಾನ ಮಾಡಿರುವ ಆಸ್ತಿಯ ವಿವರ: ಮೈಸೂರು ನಗರ ಲಷ್ಕರ್ ಮೊಹಲ್ಲಾ, ಬುಚರ್ಸ್ ಬ್ಲಾಕ್, ಕಾರ್ಪೊರೇಶನ್ ಮನೆ ಸಂಖ್ಯೆ 3186, ಹೊಸ ನಂ. ಎಲ್–13, 3186/1, ಎಲ್–13/1, ವಿಸ್ತೀರ್ಣ: ಪೂರ್ವ–ಪಶ್ಚಿಮ: 46.00 ಅಡಿಗಳು ಮತ್ತು ಉತ್ತರ–ದಕ್ಷಿಣ: 48.00 ಅಡಿಗಳು. ಚಕ್ಕುಬಂದಿ:– ಪೂರ್ವಕ್ಕೆ: ಅಬ್ದುಲ್ ಖಾದರ್‌ರವರ ಸ್ವತ್ತು, ಪಶ್ಚಿಮಕ್ಕೆ: ಮಸ್ತಾನ್‌ರವರ ಸ್ವತ್ತು, ಉತ್ತರಕ್ಕೆ: ಕನ್ಸರ್‌ವೆನ್ಸಿ, ದಕ್ಷಿಣಕ್ಕೆ: ರಸ್ತೆ.
ಖಾತೆ ನಂ.: ಹೆಚ್‌ಪಿ–8843
ಬರಬೇಕಾದ ಬಾಕಿ: ರೂ.24,81,654/– ದಿನಾಂಕ : 25.07.2022 ರಂದು ಇದ್ದಂತೆ ಅಸಲು ಬಡ್ಡಿ ಇತರೆ ಖರ್ಚುಗಳು.
ಎನ್.ಪಿ.ಎ. ಆದ ದಿನಾಂಕ: 25.07.2022 ಡಿಮ್ಯಾಂಡ್ ನೋಟೀಸಿನ ದಿನಾಂಕ: 28.07.2022

ಸಾಲಗಾರರ ಹೆಸರು ಮತ್ತು ವಿಳಾಸ:
ಶ್ರೀಮತಿ ಅರ್ಶಾಸ್ ಬಾನು ಬಿನ್ ಲೇಟ್ ಸೈಯದ್ ಮೊಹಮ್ಮದ್ (ಮರಣಹೊಂದಿರುವುದರಿಂದ) ಕಾನೂನು ಉತ್ತರಾಧಿಕಾರಿಗಳು: ಶ್ರೀ ಖಾದರ್ ಅಲಿ, ಮನೆ ನಂ. 3283, ಮಹಮ್ಮದ್ ಸೇಟ್ ಬ್ಲಾಕ್, ಲಷ್ಕರ್ ಮೊಹಲ್ಲಾ, ಮೈಸೂರು.
ಅಡಮಾನ ಮಾಡಿರುವ ಆಸ್ತಿಯ ವಿವರ: ಮೈಸೂರು ನಗರ, ಲಷ್ಕರ್ ಮೊಹಲ್ಲಾ, ಮೊಹಮ್ಮದ್ ಸೇಟ್ ಬ್ಲಾಕ್, ಕಾರ್ಪೊರೇಶನ್ ಮನೆ ಸಂಖ್ಯೆ 3283, ಹೊಸ ನಂ. ಎಲ್–51, ವಿಸ್ತೀರ್ಣ: ಪೂರ್ವ–ಪಶ್ಚಿಮ: 26.00 ಅಡಿಗಳು ಮತ್ತು ಉತ್ತರ–ದಕ್ಷಿಣ: 13.00 ಅಡಿಗಳು. ಚಕ್ಕುಬಂದಿ:– ಪೂರ್ವಕ್ಕೆ: ಕನ್ಸರ್‌ವೆನ್ಸಿ, ಪಶ್ಚಿಮಕ್ಕೆ: ಜಾಫರ್ ಖಾನ್‌ರವರ ಮನೆ, ಉತ್ತರಕ್ಕೆ: ಜವೇರಿಯಾರವರ ಮನೆ, ದಕ್ಷಿಣಕ್ಕೆ: ಚಾಮುಂಡೇಶ್ವರಿ ದೇವಸ್ಥಾನ.
ಖಾತೆ ನಂ.: ಹೆಚ್‌ಪಿ 8233
ಬರಬೇಕಾದ ಬಾಕಿ: ರೂ.3,05,434/– ದಿನಾಂಕ : 25.07.2022 ರಂದು ಇದ್ದಂತೆ ಅಸಲು ಬಡ್ಡಿ ಇತರೆ ಖರ್ಚುಗಳು.
ಎನ್.ಪಿ.ಎ. ಆದ ದಿನಾಂಕ: 25.07.2022 ಡಿಮ್ಯಾಂಡ್ ನೋಟೀಸಿನ ದಿನಾಂಕ: 28.07.2022

1) ಶ್ರೀ ಇಸ್ಮಾಯಿಲ್ ಷರೀಫ್ ಬಿನ್ ಲೇಟ್ ಕೆ. ಅಹ್ಮದ್ ಷರೀಫ್, 2) ಶ್ರೀ ಇಬ್ರಾಹಿಂ ಷರೀಫ್ ಬಿನ್ ಲೇಟ್ ಕೆ. ಅಹ್ಮದ್ ಷರೀಫ್, 3) ಶ್ರೀ ಯಾಸೀನ್ ಷರೀಫ್ ಬಿನ್ ಲೇಟ್ ಕೆ. ಅಹ್ಮದ್ ಷರೀಫ್, ನಂ. 67, ಗಾಯತ್ರಿಪುರಂ, 2ನೇ ಹಂತ, ನಜರ್‌ಬಾದ್ ಮೊಹಲ್ಲಾ, ಮೈಸೂರು.
ಅಡಮಾನ ಮಾಡಿರುವ ಆಸ್ತಿಯ ವಿವರ: ಮೈಸೂರು ನಗರ, ಮಂಡಿ ಮೊಹಲ್ಲಾ, ಬಿ.ಎನ್. ರಸ್ತೆ, ಇರ್ವಿನ್ ರಸ್ತೆ ಮತ್ತು ಸಾವ್ಡೆ ರಸ್ತೆ, ಕಾರ್ಪೊರೇಶನ್ ಮಾದರಿ ಮನೆ ಸಂಖ್ಯೆ 2199/1, ಹೊಸ ನಂ. ಎಮ್–84/1ಎ, 84/2, 84/3, ವಿಸ್ತೀರ್ಣ: ಪೂರ್ವ–ಪಶ್ಚಿಮ: 30.00 ಅಡಿಗಳು ಮತ್ತು ಉತ್ತರ–ದಕ್ಷಿಣ: 18.00 ಅಡಿಗಳು. ಚಕ್ಕುಬಂದಿ:– ಪೂರ್ವಕ್ಕೆ: ಬಿ.ಎನ್. ರಸ್ತೆ, ಪಶ್ಚಿಮಕ್ಕೆ: ಮನೆ ನಂ. 2199/3 ಎಂ.16/1ರ ಸ್ವತ್ತು, ಉತ್ತರಕ್ಕೆ: ಅಬ್ದುಲ್ ರಜಾಕ್‌ರವರ ಹೋಟೆಲ್ ಡಿ ಪ್ಯಾರಿಸ್, ದಕ್ಷಿಣಕ್ಕೆ: ಎಸ್.ಎ. ಖಾದರ್‌ರವರ ಸ್ವತ್ತು.
ಖಾತೆ ನಂ.: ಹೆಚ್‌ಪಿ–8635
ಬರಬೇಕಾದ ಬಾಕಿ: ರೂ.9,79,981/– ದಿನಾಂಕ : 25.07.2022 ರಂದು ಇದ್ದಂತೆ ಅಸಲು ಬಡ್ಡಿ ಇತರೆ ಖರ್ಚುಗಳು.
ಎನ್.ಪಿ.ಎ. ಆದ ದಿನಾಂಕ: 25.07.2022 ಡಿಮ್ಯಾಂಡ್ ನೋಟೀಸಿನ ದಿನಾಂಕ: 28.07.2022

1) ಶ್ರೀಮತಿ ಹಮೀದುನ್ನೀಸಾ ಕೋಂ ಮಕ್ಬೂಲ್ ಅಹ್ಮದ್, 2) ಶ್ರೀ ಫಯಾಜ್ ಖುರೇಶಿ ಬಿನ್ ಮಕ್ಬೂಲ್ ಅಹ್ಮದ್, 3) ಶ್ರೀಮತಿ ಶಹೀನಾಜ್ ಖುರೇಶಿ ಬಿನ್ ಮಕ್ಬೂಲ್ ಅಹ್ಮದ್, ಕಾರ್ಪೊರೇಶನ್ ನಂ. 2868, 2ನೇ ಅಡ್ಡರಸ್ತೆ, ಸಾವ್ಡೆ ರಸ್ತೆ, ಮಂಡಿ ಮೊಹಲ್ಲಾ, ಮೈಸೂರು.
ಅಡಮಾನ ಮಾಡಿರುವ ಆಸ್ತಿಯ ವಿವರ: ಮೈಸೂರು ನಗರ, ಮಂಡಿ ಮೊಹಲ್ಲಾ, ಸಾವ್ಡೆ ರಸ್ತೆ, 2ನೇ ಅಡ್ಡರಸ್ತೆ, ಹಕೀಂ ಮುಸ್ತಾಫಾ ಸಾಹೇಬ್ ಗಲ್ಲಿ, ಕಾರ್ಪೊರೇಶನ್ ಮನೆ ಸಂಖ್ಯೆ 2868 ಎಂ–4 ಉತ್ತರ ಭಾಗದ ಕಡೆಗೆ, ವಿಸ್ತೀರ್ಣ: ಪೂರ್ವ–ಪಶ್ಚಿಮ: 21.00 ಅಡಿಗಳು ಮತ್ತು ಉತ್ತರ–ದಕ್ಷಿಣ: 24.00 ಅಡಿಗಳು. ಚಕ್ಕುಬಂದಿ:– ಪೂರ್ವಕ್ಕೆ: ಓಣಿ, ಪಶ್ಚಿಮಕ್ಕೆ: ಶೇಕ್ ಇಮ್ತಿಯಾಜ್ ಬೇಗಂರವರ ಸ್ವತ್ತು, ಉತ್ತರಕ್ಕೆ: ಅಬ್ದುಲ್ ಗಫೂರ್‌ರವರ ಸ್ವತ್ತು, ದಕ್ಷಿಣಕ್ಕೆ: ರಸ್ತೆ.
ಖಾತೆ ನಂ.: ಹೆಚ್‌ಪಿ–8945
ಬರಬೇಕಾದ ಬಾಕಿ: ರೂ.6,19,526/– ದಿನಾಂಕ : 25.07.2022 ರಂದು ಇದ್ದಂತೆ ಅಸಲು ಬಡ್ಡಿ ಇತರೆ ಖರ್ಚುಗಳು.
ಎನ್.ಪಿ.ಎ. ಆದ ದಿನಾಂಕ: 25.07.2022 ಡಿಮ್ಯಾಂಡ್ ನೋಟೀಸಿನ ದಿನಾಂಕ: 28.07.2022

ಶ್ರೀ ಅರ್ಷದ್ ಪಾಷ ಬಿನ್ ಮುನಾವರ್ ಪಾಷ, ನಂ. 121, ಯೌಮಿಯಾ ಮಕಾನ್, ಬಡೇ ಮಕಾನ್, ಎನ್.ಆರ್. ಮೊಹಲ್ಲಾ, ಮೈಸೂರು.
ಅಡಮಾನ ಮಾಡಿರುವ ಆಸ್ತಿಯ ವಿವರ: ಮೈಸೂರು ನಗರ, ಎನ್.ಆರ್. ಮೊಹಲ್ಲಾ, ಯೌಮಿಯಾ ಮಕಾನ್, ಬಡೇ ಮಕಾನ್, ಕಾರ್ಪೊರೇಶನ್ ಮನೆ ಸಂಖ್ಯೆ 121, ವಿಸ್ತೀರ್ಣ: ಪೂರ್ವ–ಪಶ್ಚಿಮ: 23.00 ಅಡಿಗಳು ಮತ್ತು ಉತ್ತರ–ದಕ್ಷಿಣ: 17.00 ಅಡಿಗಳು. ಚಕ್ಕುಬಂದಿ:– ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: 128ನೇ ನಂಬರಿನ ಸ್ವತ್ತು, ಉತ್ತರಕ್ಕೆ: 122ನೇ ನಂಬರಿನ ಸ್ವತ್ತು, ದಕ್ಷಿಣಕ್ಕೆ: 120ನೇ ನಂಬರಿನ ಸ್ವತ್ತು.
ಖಾತೆ ನಂ.: ಹೆಚ್‌ಪಿ–8720
ಬರಬೇಕಾದ ಬಾಕಿ: ರೂ.4,86,945/– ದಿನಾಂಕ : 25.07.2022 ರಂದು ಇದ್ದಂತೆ ಅಸಲು ಬಡ್ಡಿ ಇತರೆ ಖರ್ಚುಗಳು.
ಎನ್.ಪಿ.ಎ. ಆದ ದಿನಾಂಕ: 25.07.2022 ಡಿಮ್ಯಾಂಡ್ ನೋಟೀಸಿನ ದಿನಾಂಕ: 28.07.2022

ಶ್ರೀ ಸೈಯದ್ ಅಕ್ರಮ್ ಪಾಷ ಬಿನ್ ಲೇಟ್ ಸೈಯದ್ ಹಮೀದ್, ನಂ. 2642, ಎರೆಕಟ್ಟೆ ರಸ್ತೆ, ಲಷ್ಕರ್ ಮೊಹಲ್ಲಾ, ಮೈಸೂರು.
ಅಡಮಾನ ಮಾಡಿರುವ ಆಸ್ತಿಯ ವಿವರ: ಮೈಸೂರು ನಗರ, ಲಷ್ಕರ್ ಮೊಹಲ್ಲಾ, ಅಶೋಕ ದಕ್ಷಿಣ ಅಡ್ಡರಸ್ತೆ 23, ಕಾರ್ಪೊರೇಶನ್ ಮನೆ ಸಂಖ್ಯೆ 2642/ಎ, ಹೊಸ ನಂ. ಎಲ್–92/ಎ ದಕ್ಷಿಣ ಭಾಗದ ಕಡೆಗೆ, ವಿಸ್ತೀರ್ಣ: ಪೂರ್ವ–ಪಶ್ಚಿಮ: 17½ ಅಡಿಗಳು ಮತ್ತು ಉತ್ತರ–ದಕ್ಷಿಣ: 50.00 ಅಡಿಗಳು. ಚಕ್ಕುಬಂದಿ:– ಪೂರ್ವಕ್ಕೆ: ಸೈಯದ್ ಮತೀನ್‌ರವರ ಸ್ವತ್ತು, ಪಶ್ಚಿಮಕ್ಕೆ: ಅಬ್ದುಲ್ಲಾ ಖಬೀರ್‌ರವರ ಸ್ವತ್ತು, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ರವಿ ಮಸೀದಿ.
ಖಾತೆ ನಂ.: ಹೆಚ್‌ಪಿ–8979
ಬರಬೇಕಾದ ಬಾಕಿ: ರೂ.12,56,294/– ದಿನಾಂಕ : 25.07.2022 ರಂದು ಇದ್ದಂತೆ ಅಸಲು ಬಡ್ಡಿ ಇತರೆ ಖರ್ಚುಗಳು.
ಎನ್.ಪಿ.ಎ. ಆದ ದಿನಾಂಕ: 25.07.2022 ಡಿಮ್ಯಾಂಡ್ ನೋಟೀಸಿನ ದಿನಾಂಕ: 28.07.2022

ಈ ನೋಟೀಸಿನ ದಿನಾಂಕದ 60 ದಿನಗಳ ಒಳಗೆ ಮೇಲೆ ತಿಳಿಸಿದ ಸಾಲದ ಮೊತ್ತ ಮತ್ತು ಬಡ್ಡಿ ಮತ್ತು ಸಾಂದರ್ಭಿಕ ಖರ್ಚು ವೆಚ್ಚಗಳನ್ನು ಪಾವತಿಸದಿದ್ದಲ್ಲಿ ಬ್ಯಾಂಕು ಸರ್ಫೇಸಿ ಆಕ್ಟ್‌ನ ಸೆಕ್ಷನ್ 13ರ ಸಬ್ ಸೆಕ್ಷನ್ (4) ರ ಪ್ರಕಾರ ಎಲ್ಲಾ ಅಥವಾ ಯಾವುದೇ ಹಕ್ಕನ್ನು ಚಲಾಯಿಸಬೇಕಾಗುತ್ತದೆ. ಸೆಕ್ಷನ್ 13ರ ಸಬ್ ಸೆಕ್ಷನ್ 13 ರ ಪ್ರಕಾರ ಷೆಡ್ಯೂಲ್‌ನಲ್ಲಿ ಸೂಚಿಸಿರುವ ಭದ್ರತೆಯಾಗಿ ಒದಗಿಸಿರುವ ಆಸ್ತಿಗಳನ್ನು ಬ್ಯಾಂಕಿನ ಲಿಖಿತ ಒಪ್ಪಿಗೆ ಪಡೆಯದೇ ಮಾರಾಟದ ಮೂಲಕ ವರ್ಗಾಯಿಸುವುದಕ್ಕಾಗಲೀ, ಭೋಗ್ಯಕ್ಕೆ ನೀಡುವುದಕ್ಕಾಗಲೀ ನಿಮಗೆ ಅಧಿಕಾರವಿರುವುದಿಲ್ಲ. ಈ ನೋಟೀಸನ್ನು ಸಲ್ಲಿಸಿದ ಮಾತ್ರಕ್ಕೆ ಬ್ಯಾಂಕ್ ಇತರ ಯಾವುದೇ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಅಥವಾ ಬೇರೆ ಯಾವುದೇ ಕಾನೂನು ಬದ್ಧ ಕರಾರುಗಳನ್ನು ಅಗತ್ಯವಾದಲ್ಲಿ ಚಲಾಯಿಸುವುದಕ್ಕೆ ತಡೆಯಾಗುವುದಿಲ್ಲ.

ದಿನಾಂಕ: 17.08.2022
ಸ್ಥಳ: ಮೈಸೂರು.

ಸಹಿ/– ಅಧಿಕೃತ ಅಧಿಕಾರಿ
ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ನಿ., ಮೈಸೂರು–570021